
Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–17 ಸಂಚಿಕೆ–28 ಜುಲೈ 10–16, 2023 ಪುಟ 16 ರೂ. 10/–
Volume-17 Issue-28 July 10-16, 2023 Pages:16 Price: 10/-



ಬಜೆಟ್: ಅಲ್ಪ ಸಾಂತ್ವನ ಇಳಿಯದ ಹೊರೆ

ವಿದ್ಯುತ್ ಸುಧಾರಣೆಗಳು ಮತ್ತು ಜನರ ಮುಂದಿನ ಸವಾಲುಗಳು

ನುಡಿದ ಜಾಡಿನಲ್ಲೆ ನಡೆಯೂ ಇರಲಿ

ಏಕರೂಪ ನಾಗರೀಕ ಸಂಹಿತೆ ಮತ್ತು ಬಹುಪತ್ನಿತ್ವದ ಪ್ರಶ್ನೆ



ಬಿಜೆಪಿ: ಕಳಂಕಿತ ರಾಜಕಾರಣಿಗಳಿಗೆ ವಾಷಿಂಗ್ ಮೆಷಿನ್!

ಬಳ್ಳಾರಿ ಜಿಲ್ಲೆಯ 2023 ವಿಧಾನಸಭಾ ಚುನಾವಣೆ

ಪೂರ್ಣ ಸೋತ ಬಿಜೆಪಿ – ಐದು ಕ್ಷೇತ್ರಗಳೂ ಕಾಂಗ್ರೆಸ್

ಗಣಿ ನಾಡಿನಲ್ಲಿ ಈ ಬಾರಿ ಕಾಂಗ್ರೆಸ್ ಮೇಲೆ ಪೂರ್ಣ ವಿಶ್ವಾಸ



ಜೆ ಸತ್ಯಬಾಬು
ಸಿಪಿಐ(ಎಂ) ಬಳ್ಳಾರಿ ಜಿಲ್ಲಾ ಸಮಿತಿ ಕಾರ್ಯದರ್ಶಿ

ಬಳ್ಳಾರಿ ಜಿಲ್ಲೆಯ ವಿಧಾನಸಭಾ ಚುನಾವಣೆಯಲ್ಲಿ ಈ ಭಾರಿ ಬಿಜೆಪಿ ಪಕ್ಷ ಹೀನಾಯವಾಗಿ ಸೋತಿದ್ದು ಕಾಂಗ್ರೆಸ್ ಪಕ್ಷ ಎಲ್ಲಾ ಸ್ಥಾನಗಳಲ್ಲಿ ಗೆಲುವನ್ನು ದಾಖಲೆ ಮಾಡಿದೆ. ಪ್ರಜ್ಞಾವಂತ ಮತದಾರರು ಕೋಮುವಾದಿ ಬಿಜೆಪಿ ಪಕ್ಷಕ್ಕೆ ತಕ್ಕ ಪಾಠವನ್ನು ಕಲಿಸಿದ್ದಾರೆ.

ಜಿಲ್ಲೆಯ ರಾಜಕಾರಣವನ್ನು ನಾವು ಗಮನಿಸಿದಾಗ ಅಕ್ರಮ ಗಣಿಗಾರಿಕೆಯಿಂದ ಅಕ್ರಮವಾಗಿ ಗಳಿಸಿದ ಸಾವಿರಾರು ಕೋಟಿ ರೂ.ಗಳ ಹಣವೇ ಜಿಲ್ಲೆಯ ರಾಜಕೀಯ ಚಿತ್ರವನ್ನು ಕಳೆದ 15 ವರ್ಷಗಳ ಹಿಂದೆ ಬದಲಾಯಿಸಿತ್ತು. ಈಗ ಗಾಲಿ 'ರೆಡ್ಡಿ ಸೋದರ'ರ (ಕರುಣಾಕರ ರೆಡ್ಡಿ, ಜನಾರ್ಧನರೆಡ್ಡಿ, ಸೋಮಶೇಖರ್ ರೆಡ್ಡಿ) ಕೋಟೆ ಛಿದ್ರ ಛಿದ್ರವಾಗಿದೆ. ಕಳೆದ ಚುನಾವಣೆಯ ಬಳಿಕ ರೆಡ್ಡಿ ಸಹೋದರರ ಮತ್ತು ವಾಲ್ಮೀಕಿ ಜನಾಂಗದ ಪ್ರಭಾವಿ ಮುಖಂಡರಾದ ಮಾಜಿ ಸಚಿವ ಶ್ರೀರಾಮುಲು ಅವರ ಪ್ರಭಾವ ಕರಗಿ ಹೋಗಿದ್ದು, ಪ್ರಬಲವಾಗಿದ್ದ ಕೋಮುವಾದಿ ಬಿಜೆಪಿ ಪಕ್ಷವನ್ನು ಈ ಬಾರಿ ಹೀನಾಯವಾಗಿ ಸೋಲಿಸಲಾಗಿದೆ.

ಹೀಗಿದ್ದರೂ, ಒಂದಂತೂ ಸತ್ಯ, ಬಿಜೆಪಿ ಪಕ್ಷಕ್ಕೆ ತಾತ್ಕಾಲಿಕವಾಗಿ ಹಿನ್ನಡೆಯಾಗಿದೆ. ಬಿಜೆಪಿ ಪಕ್ಷದ ಶಕ್ತಿ ಯಾವುದೇ ಸಂದರ್ಭದಲ್ಲಿ ಮತ್ತೆ ಮುನ್ನಲೆಗೆ ಬರುವ ಅಪಾಯವಂತೂ ಇದ್ದೇ ಇದೆ.

ಜಿಲ್ಲೆಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಮಾಡಲು ಮುಂದಾಗದೆ ರೆಡ್ಡಿ ಸೋದರರು ತಮ್ಮ ಅಕ್ರಮ ಗಣಿ ಗಾರಿಕೆಯ ವ್ಯಾಪಾರ ವನ್ನು ಹೆಚ್ಚಿಸಿ ಕೊಂಡದ್ದು, ಅದರಿಂದ ಗಳಿಸಿರುವ ಸಾವಿರಾರು(ಲಕ್ಷಾಂತರ?) ಕೋಟಿ ರೂಪಾಯಿಗಳ ಹಣವನ್ನು ಬಳಸಿಕೊಂಡು ಐಷಾರಾಮಿ ಜೀವನ ಮಾಡುತ್ತಿದ್ದರು. ಅವರ ದುರಹಂಕಾರಿ ಮಾತು ಮತ್ತು ವರ್ತನೆಗಳು, ರಾಜಕೀಯ ಅಧಿಕಾರ ದರ್ಪ ಚಲಾಯಿಸುತ್ತಿದ್ದರು. ಸರಕಾರದಲ್ಲಿನ ಅಧಿಕಾರಗಳನ್ನು ಬಳಿಸಿಕೊಂಡು ರಾಜ್ಯದ ಗಡಿಯನ್ನು ಒತ್ತುವರಿ ಮಾಡಿದ್ದು 'ರಿಪಬ್ಲಿಕ್ ಆಫ್ ಬಳ್ಳಾರಿ' ಎಂದು ರಾಜ್ಯದಲ್ಲಿ ಹೆಸರುವಾಸಿ ಆಗಿತ್ತು. ಅವಿಭಜಿತ ಬಳ್ಳಾರಿ ಜಿಲ್ಲೆಯಲ್ಲಿ ಇವರ ಅಧಿಕಾರದ ಅವಧಿಯಲ್ಲಿ ಸುಮಾರು 20 ಸಾವಿರ ಎಕರೆಗೂ ಹೆಚ್ಚು ಕೃಷಿ ಭೂಮಿಯನ್ನು ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ಉದ್ದೇಶಿಸಿ ವಶಪಡಿಸಿಕೊಳ್ಳಲಾಗಿದೆ. ರೈತರಿಗೆ ಕಡಿಮೆ ಬೆಲೆಕೊಟ್ಟು ವಂಚನೆ ಮಾಡಿ ಇಲ್ಲಿಯವರೆಗೂ ಯಾವುದೇ ಕೈಗಾರಿಕೆಗಳು ಸ್ಥಾಪನೆ ಮಾಡದೆ ರೈತರು ಬೀದಿ ಪಾಲು ಆಗಿದ್ದಾರೆ. ಯುವ ಜನತೆಗೆ ಉದ್ಯೋಗ ಲಭ್ಯವಿಲ್ಲ. ತಮ್ಮ ಲಾಭಕ್ಕಾಗಿ ಅವರಲ್ಲಿನ ಕೆಲವು ಗುಂಪುಗಳನ್ನು ಗುಂಡಾಪಡೆಗಳಾಗಿ ತಮ್ಮ ಸ್ವಾರ್ಥ ರಾಜಕಾರಣಕ್ಕೆ ಬಳಕೆ ಮಾಡಿತ್ತಿದ್ದಾರೆ. ಕೃಷಿ ಸಂಬಂದ ನೀರಾವರಿ ಸಮಸ್ಯೆ ಆಗಿರಬಹುದು ಕಾರ್ಮಿಕರ ಮತ್ತು ಕೂಲಿಕಾರರು, ಮಹಿಳೆಯರ ಬಡ ಜನತೆ ಪರವಾಗಿ ಯಾವುದೇ ಅಭಿವೃದ್ಧಿ ಕೆಲಸಗಳು ಮಾಡದೆ ತಮ್ಮ ಸುಲಿಗೆಯ ದಂಧೆಯನ್ನು ನಡೆಸುತ್ತಿದ್ದರು. ಇದರಿಂದ ಅವರು ಮಾತ್ರ ಸಾವಿರಾರು ಕೋಟಿ ರೂ.ಗಳ ಶ್ರೀಮಂತರಾದರೂ ಬಡ ಜನತೆ ಇವರ ಆಡುವ ಮಾತುಗಳ ಮೇಲೆ ವಿಶ್ವಾಸವನ್ನು ಕಳೆದುಕೊಳ್ಳ ತೊಡಗಿದರು. ಅಕ್ರಮ ಗಣಿಗಾರಿಕೆ ವಿರುದ್ಧ ಎಡ ಪಕ್ಷಗಳು, ಸಿಪಿಐ(ಎಂ) ಪಕ್ಷ ಹಾಗೂ ಸಾಮೂಹಿಕ ಸಂಘಟನೆಗಳು, ವಿವಿಧ ಜನಪರ ಶಕ್ತಿಗಳು ಹಲವು ಹೋರಾಟಗಳನ್ನು ನಡೆಸಿದುವು. ಚಾಗನೂರು ಕೃಷಿ ಭೂಮಿಯಲ್ಲಿ ವಿಮಾನ ನಿಲ್ದಾಣ ಸ್ಥಾಪನೆ ವಿರುದ್ಧ ಹೋರಾಟಗಳು, ವಶಪಡಿಸಿ ಕೊಂಡಿರುವ ಭೂಮಿಯಲ್ಲಿ ಕಾರ್ಖಾನೆಗಳು ಸ್ಥಾಪನೆ ಮಾಡದೇ ಇದ್ದು ರೈತರು ಬೀದಿ ಪಾಲಾಗಿದ್ದಾರೆ. ಗಾಲಿರೆಡ್ಡಿ ಸಹೋದರರು ಕಟ್ಟಿದ್ದ 'ಸಾಮ್ರಾಜ್ಯ 'ಶಿಥಿಲ'ವಾಗಿದೆ. ಪ್ರಜ್ಞಾವಂತ ಮತ ದಾರರು ಈ ಚುನಾವಣೆಯಲ್ಲಿ ಅವರಿಗೆ ಪಾಠವನ್ನು ಕಲಿಸಿದ್ದಾರೆ.

ಬಿಜೆಪಿ ಪಕ್ಷದ ಶಾಸಕರು ಅಧಿಕಾರದಲ್ಲಿ ಇರುವಾಗ ಅಧಿಕಾರ ಮತ್ತು ಹಣವನ್ನು ಬಳಸಿಕೊಂಡು ಆರ್.ಎಸ್.ಎಸ್. ಸಂಸ್ಥೆ ಬಳ್ಳಾರಿ ಜಿಲ್ಲೆಯಲ್ಲಿ ವ್ಯಾಪಕವಾಗಿ ಬೆಳೆದಿದ್ದು ನೂರಾರು ಶಾಖೆಗಳನ್ನು ಹೊಂದಿದೆ. ಗುಪ್ತವಾಗಿ ತನ್ನ ಕಾರ್ಯಚರಣೆಯನ್ನು ನಡೆಸುತ್ತಾ ಮಧ್ಯಮ ವರ್ಗದ ಜನರ ನಡುವೆ ಹೆಚ್ಚು ಪ್ರಭಾವವನ್ನು ಹೊಂದಿದೆ. ವಿ.ಎಚ್.ಪಿ, ಬಜರಂಗ ದಳ, ಎ.ಬಿ.ವಿ.ಪಿ. ಮುಂತಾದ ಸಂಘಟನೆಗಳು ವಿಸ್ತರಣೆಯಾಗಿ ಸಂಘಟನಾ ರೂಪ ಪಡೆದಿವೆ.

ಈ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಗೆಲುವನ್ನು ಸಾಧಿಸಲಿಕ್ಕೆ ಪಕ್ಷದಲ್ಲಿ ಒಗ್ಗಟ್ಟು ಪ್ರದರ್ಶನ ಮಾಡಿದ್ದು ಉಲ್ಲೇಖನೀಯ. ಬಿಜೆಪಿ ಪಕ್ಷದ ಶಾಸಕರ ದುರ್ವತನೆಗಳು, ದುರಾಡಳಿತ ಈ ಭಾಗದ ಜನರ ಸಮಸ್ಯೆಗಳಿಗೆ ಯಾವುದೇ ರೀತಿಯ ನೈಜ ಪರಿಹಾರವನ್ನು ನೀಡದೆ ಇರುವುದು ಎದ್ದು ಕಾಣುವ ಅಂಶಗಳು. ಶ್ರೀರಾಮುಲು ಅವರು ವಾಲ್ಮೀಕಿ ಸಮುದಾಯದ ಏಕಾಮೇದ್ವೀಯ ಮುಖಂಡ ನಾನೆ ಎಂದು ಬಿಂಬಿಸಿಕೊಂಡು ಆ ಜನಾಂಗಕ್ಕೆ ಯಾವುದೇ ರೀತಿಯಲ್ಲಿ ಪ್ರಗತಿಗೆ ಮುಂದಾಗಲಿಲ್ಲ. ಕಳೆದ ಚುನಾವಣೆ ಸಂದರ್ಭದಲ್ಲಿದ್ದ 4% ಮುಸ್ಲಿಂ ಮೀಸಲಾತಿಯನ್ನು ರಾಜ್ಯ ಬಿಜೆಪಿ ಸರಕಾರ ತೆಗೆದು ಹಾಕಿರುವುದು, ಹಿಜಾಬ್, ಹಲಾಲ್ ಕಟ್ ಮತ್ತು ಭ್ರಷ್ಟಾಚಾರ ಆರೋಪಗಳು ಮಿತಿಮೀರಿದ್ದು, ಬೆಲೆ ಏರಿಕೆ ಇವೆಲ್ಲಾ ಕಾರ್ಮಿಕ ವರ್ಗ, ಕೃಷಿಕರು, ಕೂಲಿಕಾರರ, ಮಹಿಳೆಯರ ವಿರೋಧಿ ನೀತಿಗಳನ್ನು ಜಾರಿ ಮಾಡಿದ್ದು ಜನರಲ್ಲಿ ತೀವ್ರ ಅತೃಪ್ತಿಯನ್ನು ಹೆಚ್ಚಿಸಿದ್ದವು. ಜಾತಿ ಪದ್ದತಿಯನ್ನು ಉಳಿಸಿ, ಅಗ್ರ ಜಾತಿಗಳನ್ನು ಮೇಲೆ ತರಲು ಇವರು ಮಾಡಿದ ಪ್ರಯತ್ನಗಳು ಇವು ಬಿಜೆಪಿ ಪಕ್ಷದ ವಿರುದ್ಧ ಅಭಿಪ್ರಾಯಗಳು ಮೂಡಿ ಬರುವಂತೆ ಮಾಡಿದವು. ದೇಶದ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ಮೋಡಿಯ ಮಾತುಗಳು ಮತ್ತು ಬಿಜೆಪಿ ಪಕ್ಷದ ಭರವಸೆಗಳನ್ನು ನಂಬಲಾರದಂತಹ ಪರಿಸ್ಥಿತಿಗೆ ಜನ ತಲುಪಿದ್ದು ಬಿಜೆಪಿ ಪಕ್ಷ ಸೋಲಲು ಮುಖ್ಯ ಕಾರಣವಾಗಿದೆ.

ರೆಡ್ಡಿಯಿಂದ ಅಂತರ ಕಾದು ಕೊಂಡಿದ್ದ ಬಿಜೆಪಿ ಪಕ್ಷ, ಬಿಜೆಪಿ ಪಕ್ಷದಿಂದ ಅಂತರ ಕಾಯ್ದುಕೊಂಡ ಜನಾರ್ಧನರೆಡ್ಡಿ ಬಿಜೆಪಿಯ ವಿರುದ್ಧ ಸೇಡು ತೀರಿಸಿ ಕೊಳ್ಳಲು ಅವರು ಕಲ್ಯಾಣ ಕರ್ನಾಟಕ ಪ್ರಗತಿ ಪಕ್ಷ– ಕೆ.ಆರ್.ಪಿ.ಪಿ. ಎಂಬ ಹೊಸ ಪಕ್ಷವನ್ನು ಸ್ಥಾಪನೆ ಮಾಡಿದ್ದರು. ಬಳ್ಳಾರಿಯಲ್ಲಿ ಅವರ ಶ್ರೀಮತಿ ಅರೂಣಾರವರನ್ನು ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧೆಗಿಳಿಸಿದ್ದು ರೆಡ್ಡಿ ಬ್ರದರ್ಸ್‌ನಲ್ಲಿ ಒಡುಕು ಬಂದಿತು. ಇವರಿಂದ ಸಚಿವ ಶ್ರೀರಾಮುಲು ದೂರವಾಗಿದ್ದು ಹಾಗೂ ಅವರ ವರ್ತನೆ ಗಳಿಂದ ಜನರ ನಡುವೆ ಪ್ರಭಾವ ಕುಸಿದಿತ್ತು.

ಕಾಂಗ್ರೆಸ್ ಪಕ್ಷ ಈ ಚುನಾವಣೆಯಲ್ಲಿ ಒಗ್ಗಟ್ಟು ಪ್ರದರ್ಶನ ಮಾಡಿತು. ಸಿದ್ಧರಾಮಯ್ಯನವರ ಪ್ರಭಾವ ಮತ್ತು ಐದು ಗ್ಯಾರಂಟಿಗಳನ್ನು ನೀಡಿದ್ದು ಮತ್ತು ರಾಜ್ಯದಲ್ಲಿ ಬಿಜೆಪಿ ಪಕ್ಷದ ವಿರುದ್ಧ ಜನರ ಅತೃಪ್ತಿಗಳಿಂದಾಗಿ ಮತದಾರರು ಚಳಿ ಬಿಡಿಸಿದ್ದಾರೆ. ಮೋದಿ ಮತ್ತು ಬಿಜೆಪಿ ಶಾಸಕರ ಹಣ, ಅಬ್ಬರದ ಮಾತುಗಳು, ರಾಜಕೀಯ ಪ್ರಭಾವದಿಂದ ಈ ಭಾಗದ ಮತದಾರರು ಮರುಳಾಗದೆ ಬಿಜೆಪಿ ಪಕ್ಷವನ್ನು ಹೀನಾಯವಾಗಿ ಸೋಲಿಸಿ ಪರ್ಯಾಯವಾಗಿ ಕಾಂಗ್ರೆಸ್ ಪಕ್ಷವನ್ನು ಎಲ್ಲಾ ಐದು ಕ್ಷೇತ್ರಗಳಲ್ಲಿ ಜನತೆ ಗೆಲ್ಲಿಸಿದ್ದಾರೆ. ಕರ್ನಾಟಕ ರಾಜ್ಯ ಪ್ರಗತಿ ಪಕ್ಷ ಜಿಲ್ಲೆಯಲ್ಲಿ ಮೂರು ಕಡೆ ಸ್ಪರ್ಧೆ ಮಾಡಿತ್ತು. ಬಳ್ಳಾರಿ ನಗರ ಕ್ಷೇತ್ರದಲ್ಲಿ ಎರಡನೇ ಸ್ಥಾನ ಪಡೆದಿದೆ, ಉಳಿದ ಕಡೆ ಮೂರನೇ ಸ್ಥಾನ ಪಡೆದಿದೆ. ಬಿಜೆಪಿ ಪಕ್ಷದ ಮತದಾರರನ್ನು ವಿಭಜನೆ ಮಾಡಲು ಸಾಧ್ಯವಾಗಿದೆ. ಜಾತ್ಯಾತೀತ ಜನತಾದಳ ಮತ್ತು ಎಸ್.ಯು.ಸಿ.ಐ. (ಸಿ) ಪಕ್ಷ, ಆಮ್ ಆದ್ಮಿ ಪಕ್ಷಗಳು ಸ್ಪರ್ಧೆ ಮಾಡಿದ್ದರೂ ಅತ್ಯಂತ ಕಡಿಮೆ ಮತಗಳನ್ನು ಪಡೆದು ಕೊಂಡಿವೆ. ಎಡಪಕ್ಷಗಳಾದ ಸಿಪಿಐ ಮತ್ತು ಸಿಪಿಎಂ ಪಕ್ಷಗಳು ಕೋಮುವಾದಿ ಪಕ್ಷವನ್ನು ಸೋಲಿಸಲು ಕರೆ ನೀಡಿದ್ದವು. ಅದರಂತೆ ಬೈಠಕ್ ಸಭೆ, ಪ್ರಚಾರ ಸಭೆಗಳನ್ನು ನಡೆಸಿದ್ದು ಕೆಲವು ಪ್ರದೇಶಗಳಲ್ಲಿ ಮನೆ ಮನೆ ಪ್ರಚಾರವನ್ನು ಮಾಡಲಾಯಿತು.

ಬಳ್ಳಾರಿ ನಗರದಲ್ಲಿ ಬಿಜೆಪಿ ಪಕ್ಷ ಸೋತಿದ್ದು ರೆಡ್ಡಿ ಸಹೋದರ ನಡವೆ ಒಡಕು, ಮುಸ್ಲಿಂರ ವಿರುದ್ಧ ಶಾಸಕರಾಗಿದ್ದ ಸೋಮಶೇಖರರೆಡ್ಡಿ ಅವಹೇಳನಕಾರಿ ಮಾತುಗಳು ಹೀಗೆ ಮುಸ್ಲಿಂ ಸಮುದಾಯ ಅವರಿಂದ ದೂರವಾಗಿದ್ದು ಕೆ.ಆರ್.ಪಿ.ಪಿ. ಪಕ್ಷಕ್ಕೆ ಬಿಜೆಪಿ ಪಕ್ಷದ ಕಾರ್ಯಕರ್ತರು ದೊಡ್ಡ ಸಂಖ್ಯೆಯಲ್ಲಿ ಸೇರ್ಪಡೆಗೊಂಡ ಕಾರಣಗಳಿಂದ ಬಿಜೆಪಿ ಸೋತು, ಕಾಂಗ್ರೆಸ್‌ನ ನಾರಾ. ಭರತ್‌ರೆಡ್ಡಿ ಅವರು ಗೆಲವು ಸಾದಿಸಿದರು.

ಬಳ್ಳಾರಿ ಗ್ರಾಮೀಣ ಕ್ಷೇತ್ರ ಚುನಾವಣೆ ಸಂದರ್ಭದಲ್ಲಿ ಗಮನ ಸೆಳೆದಿದೆ. ಪ್ರಭಾವಿ ನಾಯಕರಾಗಿದ್ದ ಬಿ.ಶ್ರೀರಾಮಲು ಅವರು ಮೊಳಕಾಲ್ಮೂರು ಕ್ಷೇತ್ರ ಬಿಟ್ಟು ತಮ್ಮ ಹಳೇ ಕ್ಷೇತ್ರದಲ್ಲಿ ಸ್ಪರ್ಧೆಗೆ ಇಳಿದಿದ್ದು ಇವರ ವಿರುದ್ಧ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ನಾಗೇಂದ್ರ ಅವರ ಗೆಲುವನ್ನು ಅನಾಯಾಸ, ಅನಿವಾರ್ಯವಾಗಿಸಿತು. ಕಳೆದ ಚುನಾವಣೆಯಲ್ಲಿ ಶ್ರೀರಾಮುಲು ಅವರು ಕ್ಷೇತ್ರ ಬಿಟ್ಟು ಹೋಗಿದ್ದರು. ಅವರು ಎರಡು ಬಾರಿ ಆಯ್ಕೆ ಆಗಿದ್ದರೂ ಯಾವುದೇ ಜನಪರ ಯೋಜನೆಗಳನ್ನು ಜಾರಿ ಮಾಡಲಿಲ್ಲ. ಮೀಸಲಾತಿ ಹೆಚ್ಚಿಸಿದ ನಿರ್ಧಾರವನ್ನು ಉಪಯೋಗಿಸಿ ವಾಲ್ಮೀಕಿ ಸಮುದಾಯದ ಬೆಂಬಲದಿಂದ ಗೆಲುವು ಸಾಧಿಸಬೇಕು ಎಂಬ ಲೆಕ್ಕಾಚಾರ ಅವರದಾಗಿತ್ತು. ಶ್ರೀರಾಮುಲು ರಾಜ್ಯದಲ್ಲಿ ಪ್ರಭಾವಿ ನಾಯಕರು ಎಂದಿದರ್ರೂ ಜಾತಿ, ಹಣ ಯಾವುದೇ ರೀತಿ ಪರಿಣಾಮವಾಗದೇ ಸೋಲು ಕಾಣಬೇಕಾಯ್ತು. ಇಲ್ಲಿ ಕಾಂಗ್ರೆಸ್ ಅಭ್ಯರ್ಥಿ ನಾಗೇಂದ್ರ ಅವರು ಎರಡನೆಯ ಬಾರಿ ಗೆಲುವು ಸಾಧಿಸಿದ್ದಾರೆ.

ಸಿರುಗುಪ್ಪ ಕ್ಷೇತ್ರದಲ್ಲಿ ಕಾಂಗ್ರೆಸ್, ಬಿಜೆಪಿ, ಕೆ.ಆರ್.ಪಿ.ಪಿ. ಪಕ್ಷಗಳ ನಡವೆ ಸ್ಪರ್ಧೆ ಏರ್ಪಟ್ಟಿತ್ತು. ಬಿಜೆಪಿ ಶಾಸಕರಾಗಿದ್ದ ಸೋಮಲಿಂಗಪ್ಪನವರ ಮಗ ಮಾಡಿದ ಅಧಿಕಾರ ದುರುಪಯೋಗ, ಮಹಿಳೆಯ ಮೇಲೆ ದೌರ್ಜನ್ಯ ನಡೆಸಿದ ಆರೋಪಗಳು ಮುಂತಾದವು ಸೋಲಿಗೆ ಕಾರಣವಾಗಿವೆ. ಮುಂಚೇನೇ ಸೋಲಬಹುದು ಎಂದು ಅಂದಾಜಿಸಿದ ಮುಸ್ಲಿಂ, ಪಿಂಜಾರರು, ಕುರುಬ ಸಮುದಾಯಗಳು ಅವರಿಂದ ದೂರ ಉಳಿದು ಕೊಂಡಿದ್ದವು. ಕೆ.ಆರ್.ಆರ್.ಪಿ. ಪಕ್ಷವು ಬಿಜೆಪಿ ಪಕ್ಷದ ಮತದಾರರಲ್ಲಿ ಒಡಕು ತಂದಿದ್ದು ಬಿಜೆಪಿ ಸೋಲಲು ಒಂದು ಮುಖ್ಯ ಕಾರಣ. ಇಲ್ಲಿ ಕಾಂಗ್ರೆಸ್ ಪಕ್ಷ ಗೆಲುವು ಪಡೆದಿದೆ.

ಕಂಪ್ಲಿ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷ ಸ್ಥಾನವನ್ನು ಉಳಿಸಿ ಕೊಂಡಿದೆ. ಕಾಂಗ್ರೆಸ್–ಬಿಜೆಪಿ ಪಕ್ಷದ ಪರವಾಗಿ ಮಹಿಳಾ ಮತದಾರರನ್ನು ಸೆಳೆಯಲು ಸ್ಪರ್ಧೆ ಮಾಡಿದ ಅಭ್ಯರ್ಥಿಗಳ ಹೆಂಡತಿಯವರು ಬಿರುಸಿನ ಪ್ರಚಾರ ನಡೆಸಿದ್ದರು. ಬಿಜೆಪಿ ಪಕ್ಸದ ಅಭ್ಯರ್ಥಿ ಶ್ರೀರಾಮುಲು ಅವರ ಅಳಿಯ ಸುರೇಶಬಾಬು ಅವರು ಆ ಭಾಗದಲ್ಲಿ ಮಾಡುತ್ತಿದ್ದಾರೆ ಎನ್ನಲಾದ ಅಕ್ರಮ ವ್ಯಾಪಾರಗಳು ಮತ್ತು ಭೂ ಕಬಳಕೆ ಆರೋಪಗಳಿಂದ ಬಿಜೆಪಿ ಸೋಲೂ ಕಂಡಿತು. ಕಾಂಗ್ರೆಸ್ 2 ನೇ ಬಾರಿ ಗೆಲವು ಸಾಧ್ಯವಾಗಿಸಿಕೊಂಡಿತು.

ಸಂಡೂರು ಕ್ಷೇತ್ರದಲ್ಲಿ 4 ನೇ ಬಾರಿ ಕಾಂಗ್ರೆಸ್ ಜಯ ಗಳಿಸಿದೆ. ಇಲ್ಲಿ ಶ್ರೀರಾಮುಲು ಸ್ಪರ್ದಿಸಬಯಸಿದ್ದರು.ಇಲ್ಲಿಗೆ ಗೃಹ ಸಚಿವ ಅಮಿತ್ ಷಾರವರನ್ನು ಪ್ರಚಾರಕ್ಕೆ ಕರೆಸಲಾಗಿತ್ತು. ಸೋಲುವುದು ಗ್ಯಾರಂಟಿ ಎಂದು ತಿಳಿದ ಮೇಲೆ ಕ್ಷೇತ್ರ ಬದಲಿಸಿದ್ದರು. ಬಿಜೆಪಿ ಪಕ್ಷದ ಅಭ್ಯರ್ಥಿಯಾಗಿ ಆ ಭಾಗದಲ್ಲಿ ಕೆಲಸ ಮಾಡಿದ್ದವರಿಗೆ ಜನಾರ್ದನರೆಡ್ಡಿ ಬೆಂಬಲಿಗರು ಎಂದು ಅವರಿಗೆ ಟಿಕೆಟ್ ನೀಡಲ್ಲಿಲ್ಲ. ಇದರಿಂದಾಗಿ ಅವರು ಕೆ.ಆರ್.ಪಿ.ಪಿ. ಪಕ್ಷ ದಿಂದ ಸ್ಪರ್ಧೆ ಮಾಡಿದ್ದು ಬಿಜೆಪಿ ಮತಗಳ ವಿಭಜನೆಗೆ ಕಾರಣವಾಯ್ತು. ಜಿಂದಾಲ್ ಮಾಲೀಕರು, ಆರ್.ಎಸ್.ಎಸ್. ಕಾರ್ಯಕರ್ತರು ಬಿಜೆಪಿ ಪರವಾಗಿ ಪ್ರಚಾರ ಮಾಡಿದರು. ಆದರೂ ಗಣಿ ಮಾಲೀಕರು ಕಾಂಗ್ರೆಸ್ ಪರವಾಗಿ ಇದ್ದರು. ಕಾಂಗ್ರೆಸ್‌ನ ತುಕರಾಂ 4 ನೇ ಬಾರಿ ಗೆಲವು ಸಾಧಿಸಿದ್ದಾರೆ.

ಕಾಂಗ್ರೆಸ್ ಪಕ್ಷ ಎಲ್ಲಾ ಐದು ವಿಧಾನಸಭಾ ಕ್ಷೇತ್ರಗಳಲ್ಲಿ ಗೆಲುವನ್ನು ಸಾಧಿಸಿರುವಲ್ಲಿ ರಾಜ್ಯದ ರಾಜಕಾರವೂ ಪರಿಣಾಮ ಬೀರಿದೆ. ಒಟ್ಟಾರೆಯಾಗಿ ಅಭ್ಯರ್ಥಿಗಳು ಶೇ.52 ಮತಗಳನ್ನು ಪಡೆದು ಗೆಲುವನ್ನು ಸಾಧಿಸಿದ್ದಾರೆ. ಚುನಾವಣಾ ಪೂರ್ವ ಹಾಗೂ ಚುನಾವಣಾ ಸಂದರ್ಭದಲ್ಲಿ ಮತದಾರರನ್ನು ಓಲೈಸಲು ಸೀರೆಗಳು, ಕುಕ್ಕರ್‌ಗಳು ಮುಂತಾದ ಕಾಣಿಕೆಗಳನ್ನು ಮತದಾರರಿಗೆ ಕಾಂಗ್ರೆಸ್ ಮತ್ತು ಕೆ.ಆರ್.ಪಿ. ಪಕ್ಷಗಳು ಹಂಚಿದ್ದವು. ಮತ್ತು ಚುನಾವಣೆ ಸಂದರ್ಭದಲ್ಲಿ ಬಿಜೆಪಿ ಕಾಂಗ್ರೆಸ್ಸು, ಕೆ.ಆರ್.ಪಿ.ಪಿ. ಪಕ್ಷಗಳು ಒಬ್ಬರು ಮತ್ತೊಬ್ಬರನ್ನು ಮೀರಿಸುವಂತೆ ಸ್ಪರ್ದೆಗಿಳಿದು ಹಣವನ್ನು ಯಾಥೇಚ್ಚವಾಗಿ ಮತದಾರರಿಗೆ ಹಂಚಿದ್ದಾರೆ. ಆದರೂ ಐದು ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷ ಗೆಲುವನ್ನು ಸಾಧಿಸಿದೆ.

ಬಳ್ಳಾರಿ ನಗರ ಕಾಂಗ್ರೆಸ್ ಪಕ್ಷ ಗೆಲುವು ನಾರಾ ಭರತ ರೆಡ್ಡಿ 86,440(45.34%),

ಕೆ.ಆರ್.ಪಿ. ಪಕ್ಷ ಗಾಳಿ ಲಕ್ಷ್ಮಿಅರುಣ 48577(28.06%)

ಬಿಜೆಪಿ ಪಕ್ಷ ಗಾಲಿ ಸೋಮಶೇಖರ್ ರೆಡ್ಡಿ 37,155 (22.62%).

ಬಳ್ಳಾರಿ ಗ್ರಾಮೀಣ ಕಾಂಗ್ರೆಸ್ ಪಕ್ಷ ಗೆಲುವು ಬಿ. ನಾಗೇಂದ್ರ 103,836 (57.19%).

ಸಿರುಗುಪ್ಪ ತಾಲೂಕ ಕಾಂಗ್ರೆಸ್ ಪಕ್ಷ ಗೆಲುವು ಬಿ.ಎಂ. ನಾಗರಾಜ್ 90,862(54%).

ಬಿಜೆಪಿ ಪಕ್ಷ ಎಂ.ಎಸ್. ಸೋಮಲಿಂಗಪ್ಪ ಸೋಲು 53,830(32%).

ದರಪ್ಪ ನಾಯಕ್ ಕೆ.ಆರ್.ಪಿ.ಪಿ. 18652 (11%).

ಸಂಡೂರು ಕ್ಷೇತ್ರ ಕಾಂಗ್ರೆಸ್ ಗೆಲುವು ಈ ತುಕಾರಾಂ 85,213(49.51).

ಶಿಲ್ಪ ರಾಘವೇಂದ್ರ ಬಿಜೆಪಿ ಪಕ್ಷ 49,701(29.13%).

ಕೆ.ಆರ್.ಪಿ.ಪಿ. ಕೆಎಸ್ ದಿವಾಕರ್ 31,375(18.24).

ಕಂಪ್ಲಿ ಕ್ಷೇತ್ರ ಕಾಂಗ್ರೆಸ್ ಪಕ್ಷ ಜಿಎಸ್ ಗಣೇಶ್ 1,00,424 (55%).

ಬಿಜೆಪಿ ಪಕ್ಷ ಟಿ.ಎಚ್. ಸುರೇಶ್ ಬಾಬು 76,333 (42%) ಸೋಲು.

ಬಳ್ಳಾರಿ ಗ್ರಾಮೀಣ ಕ್ಷೇತ್ರ ಬಿಜೆಪಿ ಅಭ್ಯರ್ಥಿ ಬಿ.ಶ್ರೀರಾಮುಲು ಸೋಲು–74536–(41.5%).

ಸಂಪಾದಕೀಯ

ನುಡಿದ ಜಾಡಿನಲ್ಲೆ ನಡೆಯೂ ಇರಲಿ

16ನೆಯ ವಿಧಾನಸಭೆ ಅಸ್ತಿತ್ವಕ್ಕೆ ಬಂದ ನಂತರ ಚೊಚ್ಚಲ ಅಧಿವೇಶನವನ್ನು ಉದ್ದೇಶಿಸಿ ರಾಜ್ಯಪಾಲರು ಮಾಡಿದ ಭಾಷಣ ಹಾಗೂ ಹೊಸ ಸರಕಾರದ ಪರವಾಗಿ ಹಣಕಾಸು ಖಾತೆಯನ್ನೂ ಹೊಂದಿರುವ ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಮಂಡಿಸಿದ 2023–24 ರ ಆಯವ್ಯಯ ಈ ಎರಡರ ನಡುವಿನ ಸಮತೋಲನ ವಿಮರ್ಶಿಸಬೇಕಿದೆ. ಇವೆರಡೂ ಈ ವಿಧಾನಸಭಾ ಅಧಿವೇಶನದ ಪ್ರಮುಖ ಘಟನೆಗಳಾಗಿವೆ. ಈ ಚುನಾವಣೆಯಲ್ಲಿ ಸ್ಪಷ್ಟ, ದಿಟ್ಟ ಜನಾದೇಶ ಪಡೆದುಕೊಂಡ ಕಾಂಗ್ರೆಸ್ ನ ಈ ಸರಕಾರ ಜನತೆಯ ನಿರೀಕ್ಷೆಗಳಿಗೆ ಅನುಗುಣವಾಗಿ ನಡೆಯುವುದೇ? ಈ ಸರ್ಕಾರ ಸಾಗುವ ಹಾದಿ ಏನು? ಮತ್ತೆ ಮತ್ತೆ ಹೇಳುತ್ತಲೇ ಇರುವ 'ನುಡಿದಂತೆ ಈ ಸರ್ಕಾರ ನಡೆಯುವುದೇ?' ಎಂಬಿತ್ಯಾದಿ ಪ್ರಶ್ನೆಗಳಿಗೆ ಆರಂಭಿಕ ಖಚಿತತೆಯನ್ನು ನೀಡುವಲ್ಲಿ ರಾಜ್ಯಪಾಲರ ಭಾಷಣ ಮತ್ತು ಬಜೆಟ್ ಇವೆರಡೂ ಮಹತ್ವದ್ದಾಗಿದೆ.

ವಿಧಾನಸಭೆಯ ಅಧಿವೇಶನಕ್ಕೆ ಮುನ್ನ ರಾಜ್ಯಪಾಲರು ಸದನಗಳನ್ನುದ್ದೇಶಿಸಿ ಮಾತನಾಡುವುದು ಒಂದು ಅನಗತ್ಯ ಸಂಪ್ರದಾಯ. ಇವರ ಮೂಲಕ ಸರಕಾರ ತನ್ನ ಕಾರ್ಯಸೂಚಿಯನ್ನು, ನೀತಿ ನಿಲುವುಗಳು, ಸಾಗುವ ಹಾದಿಯನ್ನು ಅದು ವ್ಯಕ್ತಪಡಿಸುತ್ತದೆ ಎಂಬುದು ಸಹ ಒಂದು ನಂಬಿಕೆ, ನಿರೀಕ್ಷೆ. ಆದರೆ ಹಿಂದಿನ ಅನುಭವಗಳನ್ನು ಗಮನಿಸಿದರೆ ಸರ್ಕಾರ ತನ್ನ ಗೊತ್ತುಗುರಿಗಳ ಬಗ್ಗೆ ಒಂದಿಷ್ಟು ಇಂಗಿತವನ್ನು ನೀಡಬಹುದೇ ಹೊರತು ಬಹುತೇಕ ಅಧಿವೇಶನದಲ್ಲಿ ರಾಜ್ಯಪಾಲರ ಭಾಷಣ ಸರಕಾರ ನಡೆಯುವ ನೀತಿಗೆ ಆಧಾರವಾಗಿ ಇರುವುದಿಲ್ಲ. ಅಂತಹ ಕ್ರಮ ಅನುಸರಿಸುವುದನ್ನು, ಅಂದರೆ ನುಡಿ ಮತ್ತು ನಡೆಯಲ್ಲಿ ವ್ಯತ್ಯಾಸಗಳಿರುವುದನ್ನೇ ರಾಜಕೀಯ ಚಾಣಾಕ್ಷತನ ಎಂದೆಲ್ಲಾ ಬಣ್ಣಿಸಲಾಗುತ್ತದೆ. ಈಗಲೂ ಕಾಂಗ್ರೆಸ್ ಸರ್ಕಾರ ಅದಕ್ಕಿಂತ ಭಿನ್ನವಾಗಿರುತ್ತದೆ ಎಂದು ನಿರೀಕ್ಷಿಸಲಾದೀತೇ? ಈಗಿನ ರಾಜ್ಯಪಾಲರ ಭಾಷಣವನ್ನು ಗಮನಿಸಿದರೆ ಅಲ್ಲಿ ವ್ಯಕ್ತಗೊಂಡ ನೀತಿಗಳು ಸಾಕಾರಗೊಳ್ಳ ಬೇಕಾದಲ್ಲಿ ತಾತ್ವಿಕ ಬದ್ಧತೆ, ಜನತೆಯ ಹಿತಾಸಕ್ತಿಗೆ ನಿಷ್ಠತೆ, ರಾಜಕೀಯ ಇಚ್ಛಾಶಕ್ತಿ ಅತೀ ಅವಶ್ಯಕವಾಗಿ ಇರಬೇಕಾಗುತ್ತದೆ.

ಸರಕಾರ ಪ್ರಮಾಣ ವಚನ ತೆಗೆದುಕೊಂಡ ದಿನದಿಂದಲೇ ರಾಜ್ಯದಲ್ಲಿ ಶಾಂತಿ, ಸಾಮರಸ್ಯ ಕಾಪಾಡುವ, ಸಂವಿಧಾನಕ್ಕೆ, ಶಾಸನಬದ್ಧ ಆಡಳಿತಕ್ಕೆ ಕಟಿ ಬದ್ಧವಾಗಿ ಇರುವ, ಜನಪರ ಆಡಳಿತವನ್ನು ನೀಡುವ ಕಾಂಗ್ರೆಸ್ ನಾಯಕರು, ಮುಖ್ಯಮಂತ್ರಿಯವರ ಮಾತುಗಳು ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಅವರ ಭಾಷಣದಲ್ಲಿ ಪುನರಾವರ್ತನೆಗೊಂಡಿವೆ.

ಕರ್ನಾಟಕದ್ದೇ ಆದ ಒಂದು 'ಹೊಸ ಮಾದರಿ'ಯನ್ನು ಪರಿಚಯಿಸುವ ಕಲ್ಪನೆಯನ್ನು ಕಾಂಗ್ರೆಸ್ ನಾಯಕರು ಅದರಲ್ಲೂ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹೇಳುತ್ತಲೇ ಇದ್ದಾರೆ. ಅದು ತಪ್ಪೇನಲ್ಲ. ಈ ಅಂಶ ರಾಜ್ಯಪಾಲರ ಭಾಷಣದಲ್ಲಿಯೂ ಪ್ರತಿಪಾದಿತವಾಗಿದೆ. 'ಜನಕಲ್ಯಾಣ ಮತ್ತು ಆರ್ಥಿಕ ಸ್ಥಿತಿ ಎರಡನ್ನೂ ಸಮತೂಕದಲ್ಲಿ ನಿಭಾಯಿಸಿ ಕರ್ನಾಟಕದ್ದೇ ಆದ ಹೊಸ ಮಾದರಿಯೊಂದನ್ನು ತಮ್ಮ ಸರ್ಕಾರ ದೇಶಕ್ಕೆ ಪರಿಚಯಿಸಲಿದೆ' ಎಂದಿದ್ದಾರೆ ರಾಜ್ಯಪಾಲರು. 'ಜನಕೇಂದ್ರಿತ ಆರ್ಥಿಕತೆ, ಜನ ಕೇಂದ್ರಿತ ಸಾಂಸ್ಕೃತಿಕತೆ ಮತ್ತು ಸಮಷ್ಟಿ ಕೇಂದ್ರಿತ ಅಭಿವೃದ್ಧಿ ಮಾದರಿಗಳನ್ನು ರೂಪಿಸಲು ಸರ್ಕಾರ ಉದ್ದೇಶಿಸಿದೆ.' ಎಂದಿರುವ ಅವರು 'ದೇಶಕ್ಕೆ ಕರ್ನಾಟಕದ ಮಾದರಿಗಳನ್ನು ನಿರ್ಮಿಸಿ, ಸಾಬೀತು ಮಾಡಲು ಅಗತ್ಯವಿರುವ ಯೋಜನೆಗಳನ್ನು ರೂಪಿಸಿ ಜಾರಿಗೆ ತರಲಾಗುವುದು' ಎನ್ನುವ ಖಚಿತ ಭರವಸೆಗಳನ್ನು ನೀಡಿದ್ದಾರೆ. ಇಂತಹ ಒಂದು ಘನ ಆಶಯವನ್ನು ವಾಸ್ತವವಾಗಿಸಲು ಬಜೆಟ್ ಮಂಡನೆಯು ಒಂದು ಸದಾವಕಾಶವಾಗಿತ್ತು. ಆದರೆ ಈಗ ಮಂಡಿಸಿದ ಬಜೆಟ್ ನಲ್ಲಿ ಕರ್ನಾಟಕದ್ದೇ ಒಂದು ವಿಶಿಷ್ಟ ಮಾದರಿ ಎನ್ನಬಹುದಾದ್ದು ಯಾವುದೂ ಇಲ್ಲ. ಆದರೆ ಅದು ಕೇವಲ ಒಂದು ಕಲ್ಪನೆಯ ಮಾದರಿಯೇ? ಅಥವಾ ಐದು ಗ್ಯಾರಂಟಿಗಳೇ ಅಂತಹ ಮಾದರಿಯ ಮುನ್ನುಡಿಯೇ? ಎಂದರೆ ಅವೂ ಸಹ ಕಾಂಗ್ರೆಸ್ ಪಕ್ಷವೇ ಆರಂಭಿಸಿದ್ದೇನಲ್ಲ. ತಮಿಳುನಾಡು, ದಹಲಿ, ಪಂಜಾಬ್ ಮುಂತಾದೆಡೆ ಒಂದಿಲ್ಲೊಂದು ಬಗೆಯಲ್ಲಿ ಜಾರಿಯಲ್ಲಿರುವ ಜನಪ್ರಿಯ ಯೋಜನೆಗಳು. ಇವು ಮೋದಿಯವರ ಮಾದರಿಗೆ ಬಿನ್ನ ಎಂಬುದೇನೋ ನಿಜ. ಈ ಐದು ಗ್ಯಾರಂಟಿಗಳನ್ನು ತರಬೇಕು ಎಂಬುದು ಕರ್ನಾಟಕದ ಚುನಾವಣೆ ತಾರಕ್ಕೇರುತ್ತಿರುವ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಹೈಕಮಾಂಡ್, ಅದರ ಸ್ಟ್ರಾಟಜಿಸ್ಟ್ ಥಿಂಕ್ ಟ್ಯಾಂಕ್ ಗಳ ಸೂಚನೆಯೂ ಕೂಡ. ಇಂದು ಬಹುತೇಕ ರಾಜ್ಯ ಸರ್ಕಾರಗಳು ಒಕ್ಕೂಟ ಸರ್ಕಾರದ ಉದಾರೀಕರಣ, ಖಾಸಗೀಕರಣ, ಜಾಗತೀಕರಣದ ವ್ಯಾಪ್ತಿಯೊಳಗೆ ತಮ್ಮ ಆರ್ಥಿಕ ನೀತಿಗಳನ್ನು ನಿರೂಪಿಸಿಕೊಳ್ಳ ಬೇಕಾದಂತಹಕ, ರಾಜಕೀಯ, ಆರ್ಥಿಕ ಒತ್ತಡಗಳಿಗೆ ಈಡಾಗಿವೆ. ಸಾಲದ ಹೊರೆಯಿಲ್ಲದೇ ಸ್ವಯಂ ಕಾಲ ಮೇಲೆ ನಿಲ್ಲದಂತೆ ರಾಜ್ಯಗಳ ಆರ್ಥಿಕ ಬೆನ್ನೆಲುಬು, ಶಕ್ತಿಯನ್ನು ವ್ಯವಸ್ಥಿತವಾಗಿ ಮುರಿಯಲಾಗುತ್ತಿದೆ. ಇಂತಹದಕ್ಕೆ ಕರ್ನಾಟಕದ್ದೇ ಮಾದರಿಯಾಗಬಹುದಾದ ಪರ್ಯಾಯ ಚಿಂತನೆ, ಕ್ರಮಗಳು ಈಗಿನ ಸರಕಾರದಲ್ಲಿಯೂ ಇನ್ನೂ ಇಲ್ಲವಾಗಿವೆ.

ಕೋಮುವಾದಿ ಫ್ಯಾಶಿಸ್ಟ್ ಹಾಗೂ ಕಾರ್ಪೊರೇಟ್ ನಂಟಿನ 'ಗುಜರಾತ್ ಮಾದರಿ' 'ಉತ್ತರ ಪ್ರದೇಶದ ಮಾದರಿ'ಗಳಿಗೆ ಬದಲಾಗಿ ಕರ್ನಾಟಕದ ಜನಕೇಂದ್ರಿತ ಮಾದರಿಯೊಂದನ್ನು ಸೃಷ್ಟಿಸುವ ಆಶಯ ಸ್ವಾಗತಾರ್ಹ, ಆದರೆ ಅದರ ಸಾಧನೆ ಒಂದು ಕಠಿಣ ಕರ್ತವ್ಯ. ಅಂದರೆ ಕಾಂಗ್ರೆಸ್ ಮೂಲದಲ್ಲಿ ತನ್ನ ಉದಾರೀಕರಣದ ನೀತಿಗಳನ್ನು ಪೂರ್ಣವಾಗಿ ಕೈ ಬಿಡಬೇಕಾಗುತ್ತದೆ. ಇಲ್ಲಿ ಒಂದು ಪ್ರಮುಖ ಅಂಶವನ್ನು ಗಮನಿಸಬೇಕು. ಮೂರು ರಾಜ್ಯಗಳಲ್ಲಿ ಸರ್ಕಾರಗಳ ನೇತೃತ್ವ ವಹಿಸಿದ ಎಡ ಪಕ್ಷಗಳು ರೂಪಿಸಿ, ಜಾರಿಗೊಳಿಸಿದ ಪರ್ಯಾಯ ಅತ್ಯಂತ ಶ್ರೀಮಂತ ಅನುಭವವನ್ನು ನೀಡಿದೆ. ಆ ಪ್ರಜಾಸತ್ತಾತ್ಮಕ ಪರ್ಯಾಯ ಮಾದರಿಗಳನ್ನು ಪ್ರಜ್ಞಾಪೂರ್ವಕವಾಗಿ ನಿರ್ಲಕ್ಷಿಸಲಾಗುತ್ತಿದೆ ಎನ್ನುವುದು ಕೂಡ ಇಂದಿನ ಬಂಡವಾಳಶಾಹಿ ಕಾರ್ಪೊರೇಟ್ ಕೇಂದ್ರಿತ ರಾಜಕಾರಣದ ಒಂದು ಕುತಂತ್ರ ಎನ್ನುವುದನ್ನು ಗಮನಿಸಬೇಕು.

ಈಗ ಸಿದ್ಧರಾಮಯ್ಯನವರು ಮಂಡಿಸಿದ ಬಜೆಟ್ ಅತ್ಯಂತ ಜನಪರ ಮಾತುಗಳನ್ನು ಆಡುತ್ತಲೇ ಅಂತರಂಗದಲ್ಲಿ ಮೂಲತಃ ಉದಾರೀಕರಣದ ಆರಾಧಕನಾಗಿಯೇ ಉಳಿದಿದೆ. ಒಂದು ಆಶಾದಾಯಕ ಬೆಳವಣಿಗೆ ಎಂದರೆ ಹಿಂದಿನ ಬಿಜೆಪಿ ಸರ್ಕಾರ ಸೃಷ್ಟಿಸಿದ್ದ ಅವಾಂತರಗಳನ್ನು ಬದಲಾಯಿಸಿ ಸೌಹಾರ್ದತೆ, ಶಾಂತಿಯ ವಾತಾವರಣ ನಿರ್ಮಿಸುವ, ಸಂವಿಧಾನ ಬದ್ಧ ಆಡಳಿತ ನೆಲೆಗೊಳಿಸುವ ದೆಸೆಯಲ್ಲಿ ಕೆಲವು ದಿಟ್ಟ ಹೆಜ್ಜೆಗಳನ್ನು ಇರಿಸಿರುವುದು. ಇದೇ ಹೊತ್ತಿನಲ್ಲಿ ಗಮನಿಸಬೇಕಾದ್ದು ಉದಾರೀಕರಣ, ಕಾರ್ಪೊರೇಟ್ ಲೂಟೀಕರಣವನ್ನು ಜಾರಿಗೊಳಿಸುತ್ತಾ ಕೋಮುವಾದವನ್ನು ಹಿಮ್ಮೆಟ್ಟಿಸುತ್ತೇವೆ ಎಂದು ಭಾವಿಸುವುದು ಕೇವಲ ಭ್ರಮೆ ಅಷ್ಟೇ ಎಂದು. ಕರ್ನಾಟಕದಲ್ಲಿ ಬಿಜೆಪಿ ಸೋತಿರುವುದು ಕೋಮುವಾದದ ಅಟ್ಟಹಾಸದ ದ್ವೇಷ ದಳ್ಳುರಿಗೆ ಬೇಸರಿಸಿಕೊಂಡ ಜನರ ತೀವ್ರ ಪ್ರತಿಕ್ರಿಯೆ ಎನ್ನುವಾಗಲೇ ಅದು ಮೂಲದಲ್ಲಿ ಉದಾರಿಕರಣ ಮತ್ತು ಜಾಗತೀಕರಣದ ಆರ್ಥಿಕ ನೀತಿಗಳನ್ನು ಜಾರಿಗೊಳಿಸಿದ ದುಷ್ಪರಿಣಾಮದ ಬಹು ಮುಖ್ಯ ಫಲ ಎನ್ನುವುದು ಕೂಡ ಗುರುತಿಸಬೇಕು.

ಇಂದಿನ ವಾಸ್ತವಿಕ ಸನ್ನಿವೇಶದಲ್ಲಿ ಒಂದು ಸಮಗ್ರವಾದ ಜನಪರ ಪರ್ಯಾಯದ ಮಾದರಿಯ ಚಿಂತನೆ ಮತ್ತು ಅದಕ್ಕಾಗಿ ವಿಸ್ತೃತವಾದ ಅನುಭವಗಳ ಮತ್ತು ಸಾಧ್ಯತೆಗಳ ಕ್ರೋಢೀಕರಣ ಅತಿ ಅವಶ್ಯಕವಿದೆ. ಈ ಚೊಚ್ಚಲ ಅಧಿವೇಶನದಲ್ಲಿ ರಾಜ್ಯಪಾಲರು ಮಾಡಿದ ಭಾಷಣದ ಸ್ವಾಗತಾರ್ಹ ಆಶಯಗಳು ಮತ್ತು ಸಿದ್ದರಾಮಯ್ಯನವರ ಸರ್ಕಾರ ತರಲು ಹೊರಟಿರುವ ಆರ್ಥಿಕ ನೀತಿಗಳಿಗೂ ಪ್ರಸಕ್ತವಾಗಿ ವೈರುಧ್ಯಗಳು ಇರುವುದನ್ನು ತಳ್ಳಿ ಹಾಕುವಂತಿಲ್ಲ. ಒಂದು ತುರ್ತು ಸನ್ನಿವೇಶದ ಒತ್ತಡದಲ್ಲಿ ಮಂಡಿತವಾದ ಈ ಬಜೆಟ್ ನಲ್ಲಿ ಘೋಷಿತ ಪರ್ಯಾಯದ ಹುಡುಕಾಟ ಇಲ್ಲದಿದ್ದರೂ ಆ ದಿಕ್ಕಿನಲ್ಲಿ ಮುಂದಿನ ದಿನಗಳಲ್ಲಿ ಸ್ಪಷ್ಟವಾದ ನೀತಿ ರೂಪಿತವಾಗುವುದು ಅತಿ ಅವಶ್ಯಕವಿದೆ.

ಸಮಚಿತ್ತ ಕಳೆದುಕೊಂಡ ನಾಯಕರು

ಈ ವಾರ

ಎಸ್.ವೈ.ಗುರುಶಾಂತ್

ಜುಲೈ 3, 2023 ರಂದು ಆರಂಭಗೊಂಡ ವಿಧಾನಸಭಾ ಸದನ ಕಲಾಪ ಈ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಮೊದಲನೆಯದು. ಚುನಾವಣಾ ಫಲಿತಾಂಶದ ಬಳಿಕ ನಿಕಟದಲ್ಲೇ ಸೇರಿದ್ದ ಸಭೆ ನೂತನ ಶಾಸಕರಿಗೆ ಪ್ರಮಾಣ ವಚನ, ಸಭಾಧ್ಯಕ್ಷರ ಆಯ್ಕೆಗೆ ಮೀಸಲಾಗಿತ್ತು. ಈ ಸಲದ ಸದನದ ಕಲಾಪ ವಿಶೇಷವಾಗಿ, ಬಜೆಟ್ ಅಧಿವೇಶನ ಎಂದೇ ಕರೆಯಲಾಗಿದೆ. ಸಾಮಾನ್ಯ ಪ್ರಶ್ನೆಗಳಿಗೆ ಸಮಯ ಇದೆಯಾದರೂ ಹೊಸ ಸರಕಾರದ ಬಜೆಟ್ ಗೆ ಆದ್ಯತೆ. ಕಳೆದ ಮಾರ್ಚ್ ನಲ್ಲಿ ಬಸವರಾಜ ಬೊಮ್ಮಾಯಿಯವರು ಬಜೆಟ್ ಮಂಡಿಸಿ, ಅಂಗೀಕಾರ ಪಡೆದರಾದರೂ ಚುನಾವಣೆಯ ಹೊಸ್ತಿಲಲ್ಲಿ ಅದು ಅಲ್ಪಾಯುಷಿ ಎನ್ನುವುದು, ಚುನಾವಣಾ ಭರವಸೆಗಳ ಪ್ಯಾಕೇಜ್ ಅಂತಲೂ ಗೊತ್ತಿತ್ತು. ಸರಕಾರದ ಕೆಲಸಗಳ ನಿರ್ವಹಣೆಗೆ ಲೇಖಾನುದಾನ ಸಾಕಿತ್ತಾದರೂ ಹಾಗೆ ಮಾಡಿದರೆ ಅಪನಂಬಿಕೆ ಹುಟ್ಟಬಹುದಾಗಿತ್ತು. ಬೊಮ್ಮಾಯಿಯವರಿಗೆ ಮತ್ತೇ ಅಧಿಕಾರಕ್ಕೆ ಬರುವ ನಂಬಿಕೆ ಇತ್ತು ಅಥವಾ ಅದನ್ನು ಹುಟ್ಟಿಸುವ ಅಗತ್ಯವಿತ್ತು. ಬಿಜೆಪಿ ಸೋತು ಕಾಂಗ್ರೆಸ್ ನ ಸಿದ್ಧರಾಮಯ್ಯನವರು ಮುಖ್ಯಮಂತ್ರಿಯಾದ ಬಳಿಕ ಐದು ಗ್ಯಾರಂಟಿಗಳನ್ನು ಜಾರಿಗೊಳಿಸಲು ಹಣ ಹಂಚಿಕೆ, ಸಂಪನ್ಮೂಲಗಳ ಸಂಗ್ರಹಣೆ, ಹಂಚಲಾಗಿದ್ದ ಹಣದ ಪುನರ್ ವಿಮರ್ಶೆ ಇತ್ಯಾದಿಗಳನ್ನು ನಿಗದಿ ಪಡಿಸುವುದು ಅನಿವಾರ್ಯವಿತ್ತು. ಆದ್ದರಿಂದ ಈ ಕಲಾಪಗಳಿಗೆ ಗಂಭೀರತೆ ಪ್ರಾಪ್ತವಾಗಿದೆ. ಈಗ ಮಂಡಿತವಾದ ಬಜೆಟ್ ಮೇಲೆ ಚರ್ಚೆಗಳು ಇನ್ನಷ್ಟೇ ಆರಂಭಗೊಳ್ಳ ಬೇಕು.

ಆದರೆ ಈ ಕಲಾಪದಲ್ಲಿ ಚರ್ಚೆಗಳು ಹೇಗೆ ನಡೆಯುತ್ತವೆ? ಅದರ ಗುಣ ಮಟ್ಟ ಏನು? ಈ ಪ್ರಶ್ನೆ ಪ್ರತಿ ಬಾರಿ ಅಧಿವೇಶನದ ಸಂದರ್ಭದಲ್ಲಿ ಕಾಡದಿರದು. ಆಯ್ಕೆಯಾಗಿ ಬರುವ ಸದಸ್ಯರ ತಿಳುವಳಿಕೆ, ಗುಣ ಮಟ್ಟ ಕುಸಿಯುತ್ತಿದೆ ಎಂಬ ಮಾತುಗಳು ಕೇಳುತ್ತವೆಯಾದರೂ ಅದನ್ನು ಮಾಡಬೇಕಾದವರು ಯಾರು? ಬದಲಿಸುವ ಇಚ್ಛಾಶಕ್ತಿ ಬಹುತೇಕ ಪಕ್ಷಗಳಲ್ಲಿ ಇಲ್ಲ. ಗೆಲ್ಲುವ ಕುದುರೆ ಅಂತಲೂ, ಅದಕ್ಕೆ ಬೇಕಾದ ನೂರಾರು ಕೋಟಿಗಳ ಹಣ ಇದೆಯೆನ್ನುವುದು ಆಯ್ಕೆಯ ಪ್ರಾಥಮಿಕ ಮಾನದಂಡವಾಗಿದೆ. ಹೀಗಾಗಿ ನೂರಾರು ಕೋಟಿಗಳ ಕೋಟ್ಯಾಧೀಶರೇ ಸದನದ ಸದಸ್ಯರು. ಅದಿರಲಿ, ಅವರಿಗೆ ಜನ ಸಾಮಾನ್ಯರ ಸಮಸ್ಯೆಗಳ ಬಗ್ಗೆ, ರಾಜ್ಯದ ಹಿತಾಸಕ್ತಿಗಳ ಬಗ್ಗೆ ಆಸಕ್ತಿಯಾದರೂ ಇದೆಯೇ? ಈ ಬಾರಿಯ ಆರಂಬಿಕ ಅಧಿವೇಶನದ ರೀತಿಯೇ ತೀರಾ ನಿರಾಶದಾಯಕವಾಗಿತ್ತು. ಸಾಮಾನ್ಯ ಶಾಸಕರಿರಲಿ ಪಕ್ಷಗಳ ಮುಖಂಡರೇ ಪೂರಾ ಹಾದಿ ತಪ್ಪಿ, ತಪ್ಪಿಸಿ ದ್ವೇಷ, ದೋಷಾರೋಪಗಳ ಸುರಿಮಳೆ ಸುರಿಸಿ ಸದನದ ಘನತೆಯನ್ನು ಮಣ್ಣು ಮುಕ್ಕಿಸಿದರು.

ಸದನ ನಾಯಕರ ವೈಯುಕ್ತಿಕ ಬೈದಾಟ, ದ್ವೇಷದ ವೇದಿಕೆಯೇ?

ಸದನದಲ್ಲಿ 2023–24 ರ ಬಜೆಟ್ ಮಂಡನೆಯ ಪೂರ್ವದಲ್ಲಿ ಸಾಮಾನ್ಯ ವಿಷಯಗಳ ಸುತ್ತ ಚರ್ಚೆಗೆ ಅವಕಾಶ ಇತ್ತು. ಹೊಸ ಸರಕಾರದ ಕಾರ್ಯ ನಿರ್ವಹಣೆ ಮುಖ್ಯವಾಗಿ, ಹಿಂದೆ ಅಧಿಕಾರದಲ್ಲಿದ್ದ ವ್ಯವಸ್ಥೆಯನ್ನು ಅರಿಯಲು, ಸರಿಪಡಿಸಿಕೊಳ್ಳಲು ಕಾಲಾವಕಾಶ ಯಾರಿಗಾದರೂ ಅಗತ್ಯವಿರುತ್ತದೆ. ಕುಳಿತು ಉಸಿರಾಡಲು ಒಂದಿಷ್ಟು ಸಮಯ ಎನ್ನುವಂತೆ. ಇದಕ್ಕೆ ವಿರೋಧ ಪಕ್ಷಗಳೂ ಅವಕಾಶ ನೀಡಬೇಕು. ಆದರೆ ಫಲಿತಾಂಶ ಬಂದ ಕ್ಷಣದಿಂದ, ನೂತನ ಸಂಪುಟ ಪ್ರಮಾಣ ವಚನ ಸ್ವೀಕರಿಸುವ ಮೊದಲ ದಿನದಿಂದಲೇ ಬಿಜೆಪಿ ಮತ್ತು ಜಾತ್ಯಾತೀತ ಜನತಾದಳದ ನಾಯಕರು ಕಾಂಗ್ರೆಸ್ ಮೇಲೆ ಧಾಳಿ ಆರಂಭಿಸಿದರು. ಜನರ ತೀರ್ಪನ್ನು ಒಪ್ಪಿಕೊಳ್ಳುವ, ಫಲಿತಾಂಶದ ಕಹಿ ಸತ್ಯವನ್ನು ಅರಗಿಸಿಕೊಳ್ಳಲು ಅವರು ಸಿದ್ಧವೇ ಇರಲಿಲ್ಲ. ಕಾಂಗ್ರೆಸ್ ಪಕ್ಷ ಇಬ್ಭಾಗವಾಗುವ, ಬಹು ಬೇಗ ಪತನವಾಗುವ ಮಾತುಗಳನ್ನು, ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡಲಾಗದು, ಮಾಎಇದರೆ ರಾಜ್ಯವೇ ದಿವಾಳಿ ಏಳುವುದು ಎಂದು ಅಬ್ಬರದ ಅಪಪ್ರಚಾರ ಮಾಡಿದರು. ಇಲ್ಲಿಯವರೆಗೂ ಜನರ ತೀರ್ಪಿಗೆ ಗೌರವ ನೀಡಿ ಸೋಲು ಒಪ್ಪಿಕೊಂಡು ಒಂದು ಪರಿಣಾಮಕಾರಿಯಾದ ವಿರೋಧ ಪಕ್ಷವಾಗಿ ಕಾರ್ಯ ನಿರ್ವಹಿಸುವ ಮನಸ್ಥಿತಿಯೇ ಮೂಡಲಿಲ್ಲ. ಹೀಗಾಗಿ ಈ ಅಧಿವೇಶನದಲ್ಲಿ ಅದರ ಪೂರ್ವದಲ್ಲಿ ಗಂಭೀರ ವಾಗ್ದಾಳಿಗಳು ನಡೆದವು. ಕುಮಾರಸ್ವಾಮಿ ಮತ್ತು ಸಿದ್ಧರಾಮಯ್ಯನವರ ನಡುವೆ ನಡೆದ ವಾಗ್ವಾದ ವಸ್ತುನಿಷ್ಠತೆ, ಸಮಚಿತ್ತತೆಯನ್ನು ಕಳೆದುಕೊಂಡಿತ್ತು. ಚರ್ಚೆಯ ಸ್ವರೂಪವೇ ಬದಲಾಗಿ ವ್ಯಕ್ತಗತ ದೂಷಣೆ, ದ್ವೇಷಿಸುವ ಮಟ್ಟಕ್ಕೆ ಹೋಗಿದ್ದು ವಿಷಾದನೀಯ. ಮುಖ್ಯಮಂತ್ರಿಗಳಾಗಿ ಇದ್ದ ನಾಯಕರು ಬೈಯ್ದಾಡಿ, ಸವಾಲು ಹಾಕಿಕೊಳ್ಳಲು ಹೋದರು. ಇಡೀ ಸದನದ ಕಲಾಪ ಇಂತಹ ಪ್ರಹಸನದಿಂದ ಅರ್ಥಹೀನವಾಗಿತ್ತು. ಮರುದಿನ ಮಾತನಾಡಿದ ಗೃಹ ಸಚಿವ ಪರಮೇಶ್ವರರವರು

'ಇದು ನಡೆಯಬಾರದಿತ್ತು, ಈ ಬಗ್ಗೆ ಅನುಭವಿ ನಾಯಕರ ವರ್ತನೆ ಪುನರಾವರ್ತನೆ ಆಗಬಾರದು' ಎಂದಿದ್ದು ಆಶಾದಾಯಕವಾದುದು.

ಫಲಿತಾಂಶದ ನಂತರ ಜೆಡಿ ಎಸ್ ಪಕ್ಷ ಹೆಚ್ಚು ಹತಾಶೆಗೆ ಒಳಗಾದಂತಿದೆ. ಬಿಜೆಪಿಗೆ ಸರಿ ಸಮನಾಗಿ ಅದಕ್ಕೆ ಸಾಥ್ ಕೊಡುವಂತೆ ಟೀಕಾ ಪ್ರಹಾರ ಮಾಡುತ್ತಿದೆ. ಕಾಂಗ್ರೆಸ್ ಸರಕಾರವನ್ನು ಟೀಕೆ ಮಾಡಬಾರದೆಂದೇನೂ ಇಲ್ಲ. ಖಂಡಿತ ಕುಮಾರಸ್ವಾಮಿಯವರ ರಚನಾತ್ಮಕ ಟೀಕೆ ವಿಮರ್ಶೆ ಅಗತ್ಯ. ಆದರೆ ಅವರ ರೀತಿ, ಟೀಕೆಯ ಸ್ವರೂಪ ಗಮನಿಸಿದರೆ ಹೊಸ ರಾಜಕೀಯ ಸೂತ್ರ ರೂಪುಗೊಳ್ಳುವಂತೆ ಕಾಣುತ್ತದೆ. ಬಹುಶಃ ಮುಂಬರುವ ತಾಲೂಕು, ಜಿಲ್ಲಾ ಪಂಚಾಯತ್ ಮತ್ತೊಂದು ಕದನದ ಕಣ!

ಏಕರೂಪ ನಾಗರೀಕ ಸಂಹಿತೆ: ಬಹುಪತ್ನಿತ್ವ ಕೇವಲ ಮುಸ್ಲಿಮರಲ್ಲಿನ ಸಮಸ್ಯೆಯೇ?

ಏಕರೂಪ ನಾಗರೀಕ ಸಂಹಿತೆಯ ಚರ್ಚೆಯಲ್ಲಿ ಮಾಧ್ಯಮಗಳು ಬರೀ ತ್ರಿಪಲ್ ತಲ್ಲಾಕ್, 4 ಮದುವೆ, ಹೆಚ್ಚು ಮಕ್ಕಳು, ಆಸ್ತಿ ಹಂಚಿಕೆ ಕುರಿತಂತೆ ಚರ್ಚಿಸುತ್ತಿವೆ. ಇವೆಲ್ಲ ಹೆಚ್ಚಾಗಿ ಬಹುಪತ್ನಿತ್ವದ ಪರಿಣಾಮಗಳು ಮತ್ತು ಅದು ಮುಸ್ಲಿಂ ವೈಯಕ್ತಿಕ ಕಾನೂನಿನ ಪರಿಣಾಮ. ಹಾಗಾಗಿ ಸಮಾನ ನಾಗರಿಕ ಸಂಹಿತೆ ಜಾರಿ ಮಾಡಿ ಬಹಪತಿತ್ವವನ್ನು ನಿವಾರಿಸಬೇಕು ಎಂದು ಬಿಂಬಿಸಲಾಗುತ್ತಿದೆ.ಬಹುಪತ್ನಿತ್ವ ಕೇವಲ ಮುಸ್ಲಿಮರಲ್ಲಿನ ಸಮಸ್ಯೆಯೇ?ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ–5 (2019–20) ರಲ್ಲಿನ ಬಹುಪತ್ತಿತ್ವದ ಅಂಕೆಸಂಖ್ಯೆಗಳನ್ನು ನೋಡಿದರೆ ಅದು ಧರ್ಮದ ಮೇಲೆ ಮಾತ್ರ ಅವಲಂಬಿಸಿ ಇಲ್ಲ. ಬುಡಕಟ್ಟು, ಜಾತಿ, ಪ್ರದೇಶ, ಶಿಕ್ಷಣ ಅಭಿವೃದ್ಧಿಯ ಮಟ್ಟ ಇತ್ಯಾದಿ ಹಲವು ಅಂಶಗಳನ್ನು ಅವಲಂಬಿಸಿದೆ. ಉದಾಹರಣೆಗೆ ಇಡೀ ಭಾರತದಲ್ಲಿ ಬಹುಪತ್ನಿತ್ವದ ಪ್ರಮಾಣ 1.4% ಇದ್ದರೆ, ಮುಸ್ಲೀಮರೇ ಬಹುಸಂಖ್ಯಾತರಿರುವ ಜಮ್ಮು–ಕಾಶ್ಮೀರದಲ್ಲಿ ಕೇವಲ 0.4% ರಷ್ಟಿದೆ.




ಡಾ.ಕೆ.ಷರೀಫಾ

ಏಕರೂಪ ನಾಗರೀಕ ಸಂಹಿತೆ, ಹಾಗಂದರೇನು? ಒಂದು ದೇಶ ಒಂದು ನಾಗರೀಕ ಸಂಹಿತೆ ಎನ್ನುವುದು ಇದರ ಅರ್ಥ. ಬಹುಭಾಷೆ, ಬಹುಸಂಸ್ಕೃತಿ, ಬಹು ಸಂಪ್ರದಾಯ, ವಿವಿಧ ಜಾತಿ, ಧರ್ಮಗಳನ್ನು ಹೊಂದಿರುವ ಭಾರತದಲ್ಲಿ ಇದು ಸಾಧ್ಯವೇ? ಎಂಬುದು ಪ್ರಶ್ನೆ. ಬಿಜೆಪಿಯ ಅಜೆಂಡಾದ ಮೂರು ಮಹತ್ವದ ಅಂಶಗಳಲ್ಲಿ ಜಮ್ಮು–ಕಾಶ್ಮೀರಕ್ಕೆ ಸ್ವಾಯತ್ತತೆ ಕೊಡುವ ಕಲಮು 370 ಕೊನೆಗಾಣಿಸುವ ಕುರಿತು, ಬಾಬ್ರಿ ಮಸಿದಿ ಜಾಗದಲ್ಲಿ ರಾಮ ಮಂದಿರ ಕಟ್ಟುವ ಕುರಿತು, ಮತ್ತು ಏಕರೂಪ ನಾಗರೀಕ ಸಂಹಿತೆಯನ್ನು ಜಾರಿ ಮಾಡುವ ಭರವಸೆ ನೀಡಿತ್ತು. ಇವೆಲ್ಲ ಭರವಸೆಗಳೂ ಅಸಂವಿಧಾನಿಕ ಭರವಸೆಗಳು. ಅದರಲ್ಲಿ ಎರಡು ಭರವಸೆಗಳನ್ನು ಈಗಾಗಲೇ ಅದು ಪೂರ್ಣಗೊಳಿಸಿದೆ. ಈಗ ಮೂರನೆಯ ಅಜೆಂಡಾವಾದ ಏಕರೂಪ ನಾಗರೀಕ ಸಂಹಿತೆಯನ್ನು ಜಾರಿಗೊಳಿಸುವುದಾಗಿದೆ.

ಅಮೇರಿಕದಿಂದ ವಿಮಾನ ಇಳಿದು ಬರುತ್ತಿದ್ದಂತೆಯೇ ಮೋದಿಯವರು ಏಕರೂಪ ನಾಗರಿಕ ಸಂಹಿತೆ ಜಾರಿಮಾಡುವುದಾಗಿ ಹೇಳಿದರು. ಮಾರಿಕೊಂಡ ಮಾಧ್ಯಮಗಳು ಹಗಲು ರಾತ್ರಿ ಪ್ಯಾನಲ್ ಚರ್ಚೆಯಲ್ಲಿ ತೊಡಗಿದವು. ಏಕರೂಪ ನಾಗರೀಕ ಸಂಹಿತೆಯೆಂದರೆ ಅದರಿಂದ ಮುಸಲ್ಮಾನರಿಗೆ ಧಕ್ಕೆಯಾಗುತ್ತದೆಯೇ? ಎಂಬ ಚರ್ಚೆ, ಬರೀ ತ್ರಿಪಲ್ ತಲ್ಲಾಕ್, 4 ಮದುವೆ, ಹೆಚ್ಚು ಮಕ್ಕಳು, ಆಸ್ತಿ ಹಂಚಿಕೆ ಕುರಿತಂತೆ ಚರ್ಚಿಸುತ್ತಿವೆ. ಇದರಲ್ಲಿ ಇವೆಲ್ಲ ಹೆಚ್ಚಾಗಿ ಬಹುಪತ್ನಿತ್ವದ ಪರಿಣಾಮಗಳು ಮತ್ತು ಅದು ಮುಸ್ಲಿಂ ವೈಯಕ್ತಿಕ ಕಾನೂನಿನ ಪರಿಣಾಮ. ಹಾಗಾಗಿ ಸಮಾನ ನಾಗರಿಕ ಸಂಹಿತೆ ಜಾರಿ ಮಾಡಿ ಬಹುಪತ್ನಿತ್ವವನ್ನು ನಿವಾರಿಸಬೇಕು ಎಂದು ಬಿಂಬಿಸಲಾಗುತ್ತಿದೆ.

ಬಹುಪತ್ನಿತ್ವದ ಕೇವಲ ಮುಸ್ಲೀಮರಲ್ಲಿನ ಸಮಸ್ಯೆಯೇ? ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ–5 (2019–20) ರಲ್ಲಿನ ಬಹುಪತ್ತಿತ್ವದ ಅಂಕೆಸಂಖ್ಯೆಗಳನ್ನು (ಅಂಕೆ ಸಂಖ್ಯೆಗಳು ಚಿತ್ರ–1 ಮತ್ತು 2 ರಲ್ಲಿವೆ) ನೋಡಿದರೆ ಬಹುಪತ್ತಿತ್ವ ಧರ್ಮದ ಮೇಲೆ ಮಾತ್ರ ಅವಲಂಬಿಸಿ ಇಲ್ಲ. ಬುಡಕಟ್ಟು, ಜಾತಿ, ಪ್ರದೇಶ, ಶಿಕ್ಷಣ ಅಭಿವೃದ್ಧಿಯ ಮಟ್ಟ ಇತ್ಯಾದಿ ಹಲವು ಅಂಶಗಳನ್ನು ಅವಲಂಬಿಸಿದೆ. ಉದಾಹರಣೆಗೆ ಇಡೀ ಭಾರತದಲ್ಲಿ ಬಹುಪತ್ನಿತ್ವದ ಪ್ರಮಾಣ 1.4% ಇದ್ದರೆ, ಮುಸ್ಲೀಮರೇ ಬಹುಸಂಖ್ಯಾತರಿರುವ ಜಮ್ಮು–ಕಾಶ್ಮೀರದಲ್ಲಿ ಕೇವಲ 0.4% ರಷ್ಟಿದೆ. ಬುಡಕಟ್ಟು ಜನರಲ್ಲಿ ಅವರು ವಾಸಿಸುವ ಪ್ರದೇಶಗಳಲ್ಲಿ ಅತಿ ಹೆಚ್ಚು ಇದೆ. ಕೆಲವು ರಾಜ್ಯಗಳಲ್ಲಿ ಮುಸ್ಲಿಮರಲ್ಲಿ ಬಹುಪತ್ತಿತ್ವ ಹಿಂದೂಗಳಲ್ಲಿದ್ದದ್ದಕ್ಕಿಂತ ಹೆಚ್ಚಿದ್ದರೆ, ಕೆಲವು ರಾಜ್ಯಗಳಲ್ಲಿ ತಿರುವು ಮುರುವಾಗಿದೆ. ಬಡವರಲ್ಲಿ, ಕಡಿಮೆ ವಯಸ್ಸಿನಲ್ಲಿ ಮದುವೆ ನಡೆಯುವ ಸಮುದಾಯಗಳಲ್ಲಿ ಅದು ಹೆಚ್ಚಿದೆ. ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ–3 ಕ್ಕೆ ಹೋಲಿಸಿ ನೋಡಿದರೆ ಎಲ್ಲ ಪ್ರದೇಶಗಳಲ್ಲಿ ವಿವಿಧ ಧರ್ಮಗಳ ನಡುವಿನ ವ್ಯತ್ಯಾಸ ಕಡಿಮೆಯಾಗುತ್ತಿದೆ.



ಚಿತ್ರ–1 ರಾಜ್ಯವಾರು ಬಹುಪತ್ನಿತ್ವ (ಎನ್.ಎಫ್.ಎಚ್.ಎಸ್–3 ಮತ್ತು 5 ಅಂಕೆಸಂಖ್ಯೆ)

ಬಹುಪತ್ನಿತ್ವ ಅತಿ ಹೆಚ್ಚು ಇರುವ 40 ಜಿಲ್ಲೆಗಳ ಅಂಕೆಸಂಖ್ಯೆ ಗಮನಿಸಿದರೆ ಇವುಗಳಲ್ಲಿ ಬುಡಕಟ್ಟು ಜನಾಂಗ ಬಹುಸಂಖ್ಯಾತರಿರುವ ಜಿಲ್ಲೆಗಳೇ ಪ್ರಧಾನವಾಗಿದೆ. ಆದರೆ ಅದೊಂದೇ ಅಂಶವಲ್ಲ. ಅದು ಧರ್ಮ, ಮಹಿಳಾ ಸಾಕ್ಷರತೆ ಗಳ ಮೇಲೂ ಅವಲಂಬಿಸಿದೆ ಅಂತ ತೋರುತ್ತದೆ.

ಮೋದಿ ಸರ್ಕಾರಕೆ ತಾನು ಅಧಿಕಾರಕ್ಕೆ ಬಂದು 9 ವರ್ಷ ಕಳೆದರೂ ನೆನಪಾಗದಿರುವುದು ಈಗ ಮುಂದಿನ ಪಾರ್ಲಿಮೆಂಟ ಚುನಾವಣೆಗಳು ಹತ್ತಿರ ಬರುತ್ತಿರುವಾಗ ಯಾಕೆ ನೆನಪು ಮಾಡಿಕೊಳ್ಳುತ್ತಿದೆ ಎಂಬುದು ಎಲ್ಲರಿಗೂ ಅರ್ಥವಾಗುತ್ತದೆ. ಬುಡಕಟ್ಟು ಜನಾಂಗದವರು ಈಗಾಗಲೇ ತಾವು ಮೋದಿ ಮಾಡುತ್ತಿರುವ ಏಕರೂಪ ನಾಗರೀಕ ಸಂಹಿತೆಗೆ ತಾವು ಒಳಪಡುವುದಿಲ್ಲವೆಂದು ಹೇಳಿದ್ದಾರೆ.

ಬಹುಧಾರ್ಮಿಕ ದೇಶವಾದ ಭಾರತದಲ್ಲಿ ಗುಡ್ಡಗಾಡು ಜನರಿದ್ದಾರೆ, ನಾಗಾಗಳಿದ್ದಾರೆ, ಲಂಬಾಣಿಗರಿದ್ದಾರೆ, ಆದಿವಾಸಿ ಜನಾಂಗಗಳಿವೆ, ಕ್ರಿಶ್ಚಿಯನ್ನರಿದ್ದಾರೆ, ಸಿಖ್ , ಜೈನ್, ಬೌದ್ಧ, ಹೊಲೆಯ ಮಾದಿಗ, ಬ್ರಾಹ್ಮಣ, ಮುಸಲ್ಮಾನ, ಲಿಂಗಾಯತ, ಒಕ್ಕಲಿಗ, ಕಬ್ಬಲಿಗ, ಕುರುಬ,ಬುಡಕಟ್ಟು ಜನರು ಇನ್ನೂ ಹಲವಾರು ಜಾತಿ ಧರ್ಮದ ಜನಗಳು ಇಲ್ಲಿ ವಾಸಿಸುತ್ತಿದ್ದಾರೆ. ಈ ದೇಶದಲ್ಲಿ ಎರಡು ಬಗೆಯ ಕಾನೂನುಗಳಿವೆ. 1. ಕ್ರಿಮಿನಲ್ ಪ್ರೋಸಿಜರ್ ಕೋಡ್ 2. ಸಿವಿಲ್ ಪ್ರೋಸಿಜರ್ ಕೋಡ್. ಮೊದಲನೆಯರು ಎಲ್ಲರಿಗೂ ಸಮಾನವಾಗಿ ಧರ್ಮ ಜಾತಿಗಳನ್ನು ಮೀರಿ ಅನ್ವಯಿಸುತ್ತದೆ. ಆದರೆ ಸಮಾನ ನಾಗರೀಕ ಸಂಹಿತೆ ಮಾತ್ರ ಸಮಾನವಾಗಿ ಅನ್ವಯಿಸಲು ಸಾಧ್ಯವಾಗುವುದಿಲ್ಲ. ಬಿಜೆಪಿಯ ಭಾರತವನ್ನು ಹಿಂದು ರಾಷ್ಟವನ್ನಾಗಿ ಮಾಡುವ ಕ್ರಿಯೆಯಲ್ಲಿ ಅದರ ಅಜೆಂಡಾದ ಉಳಿದ ಎರಡು ಅಂಶಗಳೊಂದಿಗೆ ಇದು ಕೂಡ ಒಂದಾಗಿದೆ.ಭಾರತೀಯರೆಲ್ಲರಿಗೂ ಸಾಮಾಜಿಕ ನ್ಯಾಯವನ್ನೇ ಒದಗಿಸಲಾಗದವರು ಸಮಾನತೆ ತರಲು ಹೇಗೆ ಸಾಧ್ಯ.?

ಕ್ರಿಮಿನಲ್ ಪ್ರೋಸಿಜರ್ ಕೋಡನ್ನೇ ಸರಿಯಾಗಿ ಜಾರಿ ಮಾಡದ ಇವರು ಇನ್ನು ಏಕರೂಪ ನಾಗರೀಕ ಸಂಹಿತೆಯನ್ನು ಜಾರಿಗೆ ತರುವುದು ಕನಸಿನ ಮಾತು. ಕ್ರಿಮಿನಲ್ ಕೋಡ್ ಬಿಲ್ಕಿಸ್ ಬಾನುಗೆ ಅಪರಾಧಿಗಳಿಗೆ ಒಂದು ತರಹವಾದರೆ, ಹಥರಸನ ಅಪರಾಧಿಗಳಿಗೆ ಕುಸ್ತಿಪಟುಗಳ ಹಿಂಸಕ ಬ್ರಿಜ್ ಭೂಷಣ ಸಿಂಗ್‌ನಿಗೆ ಮತ್ತೊಂದು ತರಹವಾಗಿದೆ. ಪ್ರಜಾಸತ್ತೆಯಲ್ಲಿ ಟೀಕೆ ಟಿಪ್ಪಣಿಗಳಿಗೆ ಅವಕಾಶವಿದೆ. ಆದರೆ ಮೋದಿ ಅಡಳಿತದಲ್ಲಿ ಟೀಕಿಸಿದರು ದೇಶದ್ರೋಹಿಗಳಾಗುತ್ತಾರೆ. ಇದು ಪರೋಕ್ಷವಾಗಿ ಸಂವಿಧಾನಕ್ಕೆ ಆಪತ್ತು ತರುವಂತಹ ವಿಷಯವಾಗಿದೆ. ಕೋಮುವಾದಿಗಳು ತಮ್ಮ ಗೆಲುವಿನ ಅಸ್ತ್ರವಾಗಿ ಬಳಸುತ್ತಿರುವ ಸಮಾನ ನಾಗರೀಕ ಸಂಹಿತೆ ಅವರ ಸೋಲಿಗೂ ಕಾರಣವಾಗಬಹುದಾಗಿದೆ. ಇವರ ನೋಟ್ ಬ್ಯಾನ್ ಹಳ್ಳ ಹಿಡೀತು, 2000 ನೋಟ್ ಹಳ್ಳ ಹಿಡಿತು, ಸೆಗಣಿ, ಗೋಮೂತ್ರ, ಕರೋನಾ ಕಾಲದ ತಟ್ಟೆ ಬಾರಿಸುವುದು, ಮೇಣದ ಬತ್ತಿ ಹಚ್ಚುವುದು ಎಲ್ಲವೂ ಫೇಲ್ ಆದ ನಂತರ ಈಗ ಏಕರೂಪ ನಾಗರೀಕ ಸಂಹಿತೆಯನ್ನು ಛೂ ಬಿಡಲಾಗಿದೆ. ಸಮಾನ ನಾಗರೀಕ ಸಂಹಿತೆ ಜಾರಿಗೆ ಬಂದರೆ, ಹಿಂದುಗಳ ಒಳಗೆಯೇ ಹಲವಾರು ವೈವಿಧ್ಯತೆಗಳಿವೆ. ಈ ವೈವಿಧ್ಯತೆಗಳು ನಾಶವಾಗಿ ಅವರವರ ಅಸ್ಮಿತೆ ಧಕ್ಕೆ ಬರುವ ಕಾರಣ ಬಹುದೊಡ್ಡ ಸಂಖ್ಯೆಯಲ್ಲಿ ಹಿಂದುಗಳೇ ಇದನ್ನು ವಿರೋಧಿಸುತ್ತಾರೆ.

ಆಗಿನ ಆರ್.ಎಸ್.ಎಸ್. ಮುಖ್ಯಸ್ಥರಾದ ಗೋಲ್ವಲ್ಕರ್, ಅಂಬೇಡ್ಕರ್ ಅವರು ಹಿಂದೂ ಕೋಡ್ ಬಿಲ್ಲನ್ನು ಜಾರಿಗಾಗಿ ಸದನದ ಮುಂದೆ ಇಟ್ಟಾಗ ಅವನ್ನು ವಿರೋಧಿಸಿ, "ನಮ್ಮದು ಬಹುತ್ವದ ದೇಶ" ಎಂದು ವಾದಿಸಿದ್ದರು. ಧರ್ಮ ಧರ್ಮದೊಳಗಿನ ಭಿನ್ನತೆಯನ್ನು ನಿವಾರಿಸುವುದಾದರೆ, ಧರ್ಮದೊಳಗಿನ ಭಿನ್ನತೆಯನ್ನು ಸಹ ನಿವಾರಿಸಬೇಕಾಗುತ್ತದೆ. ಈಗ ಹಿಂದೂ ಧರ್ಮದ ಒಳಗೆಯೇ ಎಷ್ಟೊಂದು ಜಾತಿ, ಉಪಜಾತಿ, ಆಚರಣೆ, ಸಂಪ್ರದಾಯಗಳು, ಮದುವೆ, ವಿಚ್ಛೇದನ,ದತ್ತು, ಉತ್ತರಾಧಿಕಾರ, ಪರಿಹಾರ ವ್ಯವಸ್ಥೆಗಳಿದ್ದು ಇಂತಹವು ಕೌಟುಂಬಿಕ ಹಾಗೂ ಸ್ಪಷ್ಟವಾಗಿ ಹೇಳುವುದಾದರೆ ವೈಯಕ್ತಿಕವಾದವುಗಳು. ಈ ವೈಯಕ್ತಿಕ ವಿಷಯಗಳು ಯಾರಿಗೂ ತೊಂದರೆಯಾಗಿಲ್ಲ. ಹಾಗೆಂದು ಯಾವ ಕೂಗೂ ಎದ್ದಿಲ್ಲ. ಅಂದ ಮೇಲೆ ಇವರದೇನು ತಕರಾರು? ಎಂಬುದು ಜನತೆಯ ಪ್ರಶ್ನೆ. ಮಣಿಪುರ ಹೊತ್ತಿ ಉರಿಯುತ್ತಿದ್ದು ತಿಂಗಳುಗಳೇ ಕಳೆದಿವೆ. ಅದರ ಬಗ್ಗೆ ಚಕಾರವೆತ್ತದ ಪ್ರಧಾನಿ, ತಿಂಗಳುಗಟ್ಟಲೆ ಧರಣಿ ಕುಳಿತ ಕುಸ್ತಿಪಟುಗಳಿಗಾದ ಅನ್ಯಾಯದ ಬಗ್ಗೆ ಮಾತನಾಡದ ಪ್ರಧಾನಿ, ಬಿಲ್ಕಿಸ್ ಬಾನುಗೆ ಆಗಿರುವ ಅನ್ಯಾಯದ ಬಗ್ಗೆ ಮಾತನಾಡದ ಪ್ರಧಾನಿಗೆ ನಾಗರೀಕ ಸಂಹಿತೆ ನೆನಪಾಯಿತೆ?

ಇಲ್ಲಿ ಏಕರೂಪ ನಾಗರೀಕ ಸಂಹಿತೆಯೆಂದರೆ, ಹಿಂದೂ ನಾಗರೀಕ ಸಂಹಿತೆಯೆಂಬುದನ್ನು ತಿಳಿಯಬೇಕಿದೆ. ಅದೂ ಕೂಡ ಚುನಾವಣೆಗಳನ್ನು ಮುಂದಿಟ್ಟುಕೊಂಡು ಪ್ರಧಾನಿಗೆ ಯಾಕೆ ನೆನಪಾಗುತ್ತದೆ. ಹಿಂದು ಮುಸ್ಲಿಂ ಕೋಮು–ಧ್ರುವೀಕರಣವಲ್ಲದೇ ಬೇರೆ ಉದ್ದೇಶವಿಲ್ಲ. ಇದು ಮನುವಾದ ಪ್ರೇರಿತ ನಾಗರೀಕ ಸಂಹಿತೆಯಾಗಿದೆ. ಮೊದಲು ಸರ್ಕಾರ ದೇಶದ ಸಂಪತ್ತನ್ನು ಸಮಾನವಾಗಿ ಹಂಚಿಕೆ ಮಾಡಲಿ. ಈ ದೇಶದ ಸಂಪತ್ತಿನ ಸುಮಾರು 70 ರಷ್ಟು ಭಾಗ ಕೇವಲ 5 ಜನರ ಕೈಯಲ್ಲಿದೆ. ಹಿಂದು ದೇಶ, ಒಂದು ಧರ್ಮ, ಒಂದು ಬಣ್ಣ, ಒಂದು ಪಕ್ಷ, ಒಂದು ಭಾಷೆ, ಮಾಡುವ ಮೂಲಕ ಬಹುತ್ವವನ್ನು ಅಳಿಸುವ ಮನುವಾದದ ಹುನ್ನಾರಗಳು ಇದರ ಹಿಂದಿವೆ. ಮಾಡುವುದಾದರೆ, ಎಲ್ಲರಿಗೂ ಸಮಾನ ಸ್ಥಾನ ಮಾನ ನೀಡಲು, ಲಿಂಗ ತಾರತಮ್ಯ ನಿವಾರಿಸಲಿ, ರಾಜಕೀಯ ಸಮಾನ ಪ್ರಾತಿನಿಧ್ಯ ನೀಡಲಿ, ಎಲ್ಲರಿಗೂ ಶಿಕ್ಷಣ ನೀಡಲು, ಆರ್ಥಿಕ ಸವಲತ್ತು ನೀಡಲಿ, ಸಾಮಾಜಿಕ, ಸಾಂಸ್ಕೃತಿಕ ಸಮಾನತೆ ನೀಡಲಿ. ಧರ್ಮದೊಳಗಿನ ವೈರುಧ್ಯಗಳನ್ನು ಮೊದಲು ಸಮ ಮಾಡಲಿ ನಂತರ ಬರುವುದು ಸಮಾನ ನಾಗರಿಕ ಸಂಹಿತೆಯ ಪ್ರಶ್ನೆ.

ಬಹುಶ: ಕೋಮುವಾದಿಗಳಿಗೆ ಮುಂದಿನ ಚುನಾವಣೆಯಲ್ಲಿ ತಮ್ಮ ಮೂಗಿಗೆ ಬಡಿದ ಸೋಲಿನ ವಾಸನೆ ಕಂಡು ಹೌಹಾರಿ ಈ ರೀತಿ ಹೇಳುತ್ತಿರಬಹುದೇನೋ. ಪಾರ್ಲಿಮೆಂಟಿನ ಈಗ ಅವರಿಗೆ ಬಹುಮತವಿದೆ. ಹಿಂದೆ ಕಾಂಗ್ರೆಸ್ ಸರ್ಕಾರವಿದ್ದಾಗ ವಿರೋಧ ಪಕ್ಷದ ಸ್ಥಾನದಲ್ಲಿ ನಿಂತು. ಮಹಿಳಾ ಮೀಸಲಾತಿ ಬಿಲ್ಲು ಜಾರಿಗಾಗಿ ಹೊರಾಟಕ್ಕಿಳಿದಿತ್ತು. ಈಗ ಅವರದೇ ಬಹುಮತದ ಸರ್ಕಾರವಿದೆ. ಈಗ ಅವರಿಗೆ ಮಹಿಳಾ ಮೀಸಲಾತಿ ಬಿಲ್ಲು ಜಾರಿ ಮಾಡಲು ಏನು ಆಪತ್ತು? ಒಂದು ವೇಳೆ ಸ್ತ್ರೀಯರ ಬಗ್ಗೆ ನಿಜವಾದ ಕಾಳಜಿಯಿದ್ದರೆ, ಜಾರಿ ಮಾಡಲಿ. ಬಡವರ ಪರವಾದ ಯೋಜನೆಗಳಿಗೆ ಚಾಲನೆ ನೀಡಲಿ. ಕೇವಲ ಸೆಲ್ಫೀಗಾಗಿ ಮಾತ್ರವಲ್ಲ. ನಿಜವಾಗಿಯೂ ಯೋಜನೆಗಳು ಜಾರಿಯಾಗಲಿ. ಇಲ್ಲಿಯವರೆಗೆ ಮಾಡಿದ ಪಾಪಗಳ ಪ್ರಾಯಶ್ಚಿತ್ಯಕ್ಕಾಗಿಯಾದರೂ ಜನಪರ ಯೋಜನೆ, ಕಾನೂನುಗಳು ಜಾರಿ ಮಾಡಲಿ.ತಮ್ಮ ಗೆಲುವಿಗೆ ಅಸ್ತ್ರವಾಗಿ ಸಮಾನ ನಾಗರೀಕ ಸಂಹಿತೆ ಜಾರಿ ಮಾಡುವ ಮೂಲಕ ಗೆಲ್ಲಬಹುದೆಂದು ಅವರು ತಿಳಿದಿದ್ದರೆ ಅದು ಸುಳ್ಳು. ಏಕೆಂದರೆ ಜನರು ಜಾಗ್ರತರಾಗಿದ್ದರೆ. ಕಪ್ಪು ಬಿಳುಪು ಅವರಿಗೆ ಗೋಚರಿಸುತ್ತಿದೆ. ಅವರ ಈ ಆತುರದ ನಡೆಯೇ ಅವರಿಗೇ ಮುಳುವಾಗಲೂಬಹುದಾಗಿದೆ.

The list of the 40 districts with the highest polygyny rates is dominated by those with high tribal populations, but no one factor — religion, female literacy or tribal population — can explain its prevalence. Here's a look at the **Top 15** (figures in %)

AGE OF WOMAN: 15-24 0.8; 25-34 1.2; 35+ 1.8

State	District	Polygyny rate	Share of literate women	Share of tribal population	Share of Muslim population
Meghalaya	East Jaintia Hills	20.0	76.0	95.2	0.4
Arunachal Pradesh	Kra Daadi	16.4	53.5	98.6	0.5
Meghalaya	West Jaintia Hills	14.5	80.0	95.2	0.4
Meghalaya	West Khasi Hills	10.9	87.4	97.8	0.4
Arunachal Pradesh	East Kameng	10.2	59.1	92.0	0.8
Arunachal Pradesh	Papum Pare	6.9	77.0	66.4	3.5
Odisha	Malkangiri	6.6	39.0	57.8	0.3
Arunachal Pradesh	Kurung Kumey	6.6	76.0	98.6	0.5
Meghalaya	South West Khasi Hills	6.4	85.9	97.8	0.4
Meghalaya	Ribhoi	6.2	89.5	88.9	0.7
Chhattisgarh	Bijapur	5.9	44.7	80.0	0.6
Mizoram	Aizawl	5.9	98.9	93.3	1.3
Meghalaya	East Khasi Hills	5.8	93.7	80.1	1.7
Telangana	Kamareddy	5.8	58.6	7.6	15.3
Sikkim	North District	5.7	81.4	65.7	1.9

Source: NFHS, Census 2011; Note: Where the district was created post-2011, data from the parent district has been used

ಚಿತ್ರ–2 ಬಹುಪತ್ನಿತ್ವ ಅತಿ ಹೆಚ್ಚು ಇರುವ 40 ಜಿಲ್ಲೆಗಳು

ಸಿದ್ದರಾಮಯ್ಯ ನೇತೃತ್ವದ ಕರ್ನಾಟಕ ರಾಜ್ಯ ಸರ್ಕಾರವು ಜುಲೈ ತಿಂಗಳಿನಿಂದ 200 ಯೂನಿಟ್‌ವರೆಗೆ ಉಚಿತ ವಿದ್ಯುತ್ ನೀಡುವ "ಗೃಹಜ್ಯೋತಿ" ಯೋಜನೆಯನ್ನು ಜಾರಿಗೊಳಿಸಿದೆ. ಬಡ, ಮಧ್ಯಮ ವರ್ಗಗಳಿಗೆ ಅನುಕೂಲವಾಗುವ ಗೃಹಜ್ಯೋತಿ ಯೋಜನೆಯನ್ನು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಸ್ವಾಗತಿಸುತ್ತದೆ. ಈ ಯೋಜನೆಯ ಜಾರಿಯಲ್ಲಿರುವ ಹಲವು ತೊಡಕುಗಳನ್ನು ನಿವಾರಿಸಲು ರಾಜ್ಯ ಸರ್ಕಾರವು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಪಕ್ಷ ಬಯಸುತ್ತದೆ. ಈ ಹಿನ್ನೆಲೆಯಲ್ಲಿ, ಭಾರತದಲ್ಲಿ ವಿದ್ಯುತ್ ಕ್ಷೇತ್ರದ ಸ್ಥಾಪನೆ ಮತ್ತು ಅದು ಬೆಳೆದು ಬಂದಿದ್ದು, ಒಕ್ಕೂಟ ಸರ್ಕಾರದ ನವ ಉದಾರವಾದಿ ನೀತಿಗಳು, ಕೇಂದ್ರ ಸರ್ಕಾರದ 'ವಿದ್ಯುತ್ ತಿದ್ದುಪಡಿ ಮಸೂದೆ 2022', ವಿದ್ಯುತ್ ಕ್ಷೇತ್ರವನ್ನು ಖಾಸಗೀಕರಣ ಮಾಡುವ ಕಡೆಗೆ ಸರ್ಕಾರದ ಹೆಜ್ಜೆ, ಈ ಎಲ್ಲವುಗಳ ನಡುವೆ ರಾಜ್ಯ ಸರ್ಕಾರ ಘೋಷಿರುವ ಉಚಿತ ವಿದ್ಯುತ್ ಯೋಜನೆ ಮೇಲೆ ಮತ್ತು ಬಳಕೆದಾರರ ಮೇಲೆ ಬೀರುವ ಪರಿಣಾಮವೇನು? ವಿದ್ಯುತ್ ಕ್ಷೇತ್ರದ ಖಾಸಗೀಕರಣ ತಡೆಯಲು ಮಾಡಬೇಕಾದ ಮುಂದಿನ ಕರ್ತವ್ಯಗಳೇನು ಎಂಬುದರ ಕುರಿತಾಗಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಡಾ.ಕೆ.ಪ್ರಕಾಶ್ ಇಲ್ಲಿ ವಿವರಿಸಿದ್ದಾರೆ.

ವಿದ್ಯುತ್ ಸುಧಾರಣೆಗಳು ಮತ್ತು ಜನತೆಯ ಮುಂದಿರುವ ಸವಾಲುಗಳು

ಶ್ರೀ ಸಿದ್ದರಾಮಯ್ಯ ನೇತೃತ್ವದ ಕರ್ನಾಟಕ ರಾಜ್ಯ ಸರ್ಕಾರವು 200 ಯೂನಿಟ್‌ವರೆಗೆ 2023 ಜುಲೈ ತಿಂಗಳಿನಿಂದ ಉಚಿತ ವಿದ್ಯುತ್ ನೀಡುವ "ಗೃಹಜ್ಯೋತಿ" ಯೋಜನೆಯನ್ನು ಜಾರಿಗೊಳಿಸಿದೆ. ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ಯು ಬಡ, ಮಧ್ಯಮ ವರ್ಗಗಳಿಗೆ ಅನುಕೂಲವಾಗುವ ಗೃಹಜ್ಯೋತಿ ಯೋಜನೆಯನ್ನು ಸ್ವಾಗತಿಸುತ್ತದೆ. ಈ ಯೋಜನೆಯ ಜಾರಿಯಲ್ಲಿರುವ ಹಲವು ತೊಡಕುಗಳನ್ನು ನಿವಾರಿಸಲು ರಾಜ್ಯ ಸರ್ಕಾರವು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಬಯಸುತ್ತದೆ.

ಇದೇ ಸಂದರ್ಭದಲ್ಲಿ, KERC ಯು 2023 ಏಪ್ರಿಲ್ 1 ರಿಂದ ಜಾರಿಗೆ ಬರುವಂತೆ ವಿದ್ಯುತ್ ದರಗಳನ್ನು ಪ್ರತಿ ಯೂನಿಟ್‌ಗೆ ರೂ. 0.70 (ಎಲ್ಲಾ LT ಮತ್ತು HT ವಿಭಾಗಗಳ ಸರಾಸರಿ) ಹೆಚ್ಚಳ ಮಾಡಿದೆ. 2023 ರಲ್ಲಿ ವಿದ್ಯುತ್ ಪೂರೈಕೆಯ ಸರಾಸರಿ ವೆಚ್ಚ ಪ್ರತಿ ಯೂನಿಟ್ಗೆ ರೂ.8.42 ಇದ್ದದ್ದು, 2024 ರಲ್ಲಿ ಇದು ರೂ.9.12 ಕ್ಕೆ ಹೆಚ್ಚಳವಾಗಿರುವುದನ್ನು ದರ ಹೆಚ್ಚಳಕ್ಕೆ ಪ್ರಧಾನ ಕಾರಣವಾಗಿ ನೀಡಲಾಗಿದೆ. ಇದನ್ನು ವಸೂಲಿ ಮಾಡಲು, ಹಲವು ಸಮಸ್ಯಾತ್ಮಕ ವಿಧಾನಗಳನ್ನು ಪ್ರತಿಪಾದಿಸಿದೆ. ಫಿಕ್ಸೆಡ್ ಮತ್ತು ಇಂಧನ ದರಗಳ ಸ್ಲ್ಯಾಬ್‌ಗಳನ್ನು ಕಡಿಮೆ ಮಾಡಿ ಹೆಚ್ಚಿನ ದರಗಳನ್ನು ಪಾವತಿಸುವಂತೆ ಮಾಡಲಾಗಿದೆ. ವಿತರಣಾ ಕಂಪನಿಗಳಿಗೆ ನಿರ್ದೇಶನ ನೀಡಿ, ಮುಂದಿನ 6 ತಿಂಗಳಲ್ಲಿ I.P. ಸೆಟ್‌ಗಳ R.R. ನಂಬರುಗಳನ್ನು ಗ್ರಾಹಕರ ಆಧಾರ್ ಕಾರ್ಡುಗಳ ಜೊತೆ ಲಿಂಕ್ ಮಾಡಬೇಕು, ಇಲ್ಲದಿದ್ದಲ್ಲಿ ಅಂತಹ R.R. ನಂಬರುಗಳಿಗೆ ಸಂಬಂಧಿಸಿದ ಸಬ್ಸಿಡಿ ಹಣವನ್ನು ಬಿಡುಗಡೆ ಮಾಡಬಾರದೆಂದು ಸರ್ಕಾರಕ್ಕೆ ಆದೇಶಿಸಿದೆ.

ರಾಜ್ಯ ಸರ್ಕಾರದ ರಾಜಕೀಯ ಮತ್ತು ಆಡಳಿತಾತ್ಮಕ ಆದೇಶದ ಉಚಿತ ವಿದ್ಯುತ್ ನೀತಿ ಮತ್ತು ವಿದ್ಯುತ್ ಕಾಯ್ದೆಯ ಶಾಸನಾತ್ಮಕ ಬೆಂಬಲದ KERC ಯ ದರ ಹೆಚ್ಚಳದ ಆದೇಶಗಳು ಪರಸ್ಪರ ವಿರುದ್ಧವಾಗಿವೆ. ಉಚಿತ ವಿದ್ಯುತ್ ನೀತಿಯಿಂದ ರಾಜ್ಯದ ಆರ್ಥಿಕತೆ ಸಂಕಷ್ಟಕ್ಕೆ ಸಿಲುಕುತ್ತದೆ ಮತ್ತು ವಿದ್ಯುತ್ ರಂಗವು ದಿವಾಳಿಯಾಗುತ್ತದೆ, ಆದ್ದರಿಂದ ವಿದ್ಯುತ್ ಕ್ಷೇತ್ರವನ್ನು ಪೂರ್ಣವಾಗಿ ನವ–ಉದಾರವಾದಿ ನೆಲೆಯಲ್ಲಿ ಸುಧಾರಣೆ ಮಾಡಬೇಕು ಮತ್ತು ಸಂಪೂರ್ಣ ಖಾಸಗೀಕರಣವನ್ನು ಪ್ರತಿಪಾದಿಸುವ ವಿದ್ಯುತ್ ತಿದ್ದುಪಡಿ ಕಾಯ್ದೆಯನ್ನು ಜಾರಿಗೊಳಿಸಬೇಕೆಂಬ ಚರ್ಚೆಗಳು ನಡೆಯುತ್ತಿವೆ. ರಾಜ್ಯದ ಜನತೆಯ ದೃಷ್ಟಿಯಿಂದ ಈ ಚರ್ಚೆಗಳನ್ನು ನೋಡುವುದು ಹೇಗೆ?

ಭಾರತದ ಆರಂಭಿಕ ಕಣ್ಣೋಟ – ವಿದ್ಯುತ್ ಕಾಯ್ದೆ 1948

ಸ್ವಾತಂತ್ರ್ಯಾ ನಂತರದಲ್ಲಿ ಭಾರತದ ವಿದ್ಯುತ್ ನೀತಿಯು ದೇಶೀ ಮತ್ತು ಸ್ವಾವಲಂಬಿ ಬೆಳವಣಿಗೆಯನ್ನು ಸಾಧಿಸುವ ಉದ್ದೇಶವನ್ನು ಹೊಂದಿತ್ತು. ಇದು ಆಧುನಿಕ ಭಾರತದ ಬುನಾದಿಯೆಂದು, ಪ್ರಭುತ್ವವೇ ಇದನ್ನು ಬೆಳೆಸಬೇಕೆಂದು, ಕಡಿಮೆ ದರದಲ್ಲಿ ಜನರಿಗೆ ವಿದ್ಯುತ್ ಒದಗಿಸಬೇಕೆಂದು ಭಾವಿಸಲಾಯಿತು. ಡಾ.ಬಿ.ಆರ್. ಅಂಬೇಡ್ಕರ್ ಸಮಿತಿ ಶಿಫಾರಸ್ಸಿನ ಆಧಾರದಲ್ಲಿ "ವಿದ್ಯುತ್ ಕಾಯ್ದೆ 1948" ಜಾರಿಗೆ ಬಂತು. ರಾಜ್ಯ ವಿದ್ಯುತ್ ಮಂಡಳಿಗಳು (SEBs) ರಚನೆಯಾದವು. ಉತ್ಪಾದನೆ, ಸಾಗಾಣಿಕೆ ಮತ್ತು ವಿತರಣೆ ಮೂರನ್ನೂ SEB ಗಳು ನಿರ್ವಹಿಸುತ್ತಿದ್ದವು. ದೇಶೀಯ ಉತ್ಪಾದನಾ ಘಟಕಗಳು ಮತ್ತು ಉಪಕರಣಗಳ ಬೆಳವಣಿಗೆಯಿಂದಾಗಿ, ಜಗತ್ತಿನ ಹೆಚ್ಚಿನ ದೇಶಗಳಿಗೆ ಹೋಲಿಸಿದರೆ, ವಿದ್ಯುತ್ ದರ ಅತ್ಯಂತ ಕಡಿಮೆಯದ್ದಾಗಿತ್ತು. ಆರ್ಥಿಕ ಬೆಳವಣಿಗೆಯ ಬಂಡವಾಳಶಾಹಿ ಪಥದ ಅಂತರ್ಗತ ಸಮಸ್ಯೆಗಳಿಂದಾಗಿ ಭಾರತ ಸರ್ಕಾರವು IMF ಮತ್ತು ವಿಶ್ವ ಬ್ಯಾಂಕಿನ ಸಾಲಕ್ಕೆ ಶರಣಾದಾಗ, ವಿದ್ಯುತ್ ಉತ್ಪಾದನೆ, ಸಾಗಾಣಿಕೆ ಮತ್ತು ವಿತರಣೆ ಬೇರ್ಪಡಿಸಬೇಕೆಂಬ ಷರತ್ತುಗಳಿಗೆ ಒಳಗಾಯಿತು. SEB ಗಳು ಉತ್ಪಾದಿಸುತ್ತಿದ್ದ ವಿದ್ಯುತ್ ದರಗಳನ್ನು CPSU ಗಳ ವಿದ್ಯುತ್ ದರಗಳಿಗಿಂತ ಕಡಿಮೆ ಇರುವಂತೆ ಬಲವಂತ ಮಾಡಲಾಯಿತು. (ಉದಾಗೆ: 1992–93 ರಲ್ಲಿ SEB ಗಳು ಉತ್ಪಾದಿಸುವ ಒಂದು KWH ವಿದ್ಯುತ್ ದರ 65 ಪೈಸೆಯಾದರೆ, CPSU ಗಳ ದರ 95 ಪೈಸೆಯಾಗಿತ್ತು). ಇದರಿಂದ ವಿವಿಧ ಯುಟಿಲಿಟಿಗಳ ನಡುವೆ ದರ ತಾರತಮ್ಯಗಳು ಬೆಳೆದವು ಮತ್ತು SEB ಗಳ ಹಣಕಾಸು ಸಮಸ್ಯೆ ಬಿಗಡಾಯಿಸತೊಡಗಿತು.

ನವ–ಉದಾರವಾದಿ ನೀತಿಗಳ ಜಾರಿ

ನರಸಿಂಹರಾವ್ ಸರ್ಕಾರ 1991 ರಲ್ಲಿ LPG ನೀತಿಗಳನ್ನು ಆರಂಭಿಸಿತು. ವಿದ್ಯುತ್ ಉತ್ಪಾದನಾ ಕ್ಷೇತ್ರವನ್ನು ಖಾಸಗಿ ಮತ್ತು ವಿದೇಶೀ ಕಂಪನಿಗಳಿಗೆ ತೆರೆಯಲಾಯಿತು. ಅಗತ್ಯವಿರುವಷ್ಟು, ಕಡಿಮೆ ದರದ ಮತ್ತು ಗುಣಮಟ್ಟದ ವಿದ್ಯುತ್ ಪೂರೈಸುವ ಮೂಲಭೂತ ನೀತಿಯಿಂದ ಹಿಂದೆ ಸರಿದು ಕೇವಲ ಲಾಭದ ದೃಷ್ಟಿಯಿಂದ ವ್ಯಾಪಾರ ಮಾಡುವ ಮತ್ತು ವ್ಯಾಪಕವಾಗಿ ಖಾಸಗಿಯವರ ಹಿಡಿತ ಹೆಚ್ಚಾಗುವ ನೀತಿ ಬಂತು. ಉತ್ಪಾದನಾ ವಲಯದಲ್ಲಿ ಖಾಸಗಿಯವರ ಪ್ರವೇಶ ಹೆಚ್ಚಾಯಿತು.

ಯೂನಿಟ್ ದರಗಳು ನಿರಂತರವಾಗಿ ಹೆಚ್ಚಳವಾದರೂ, ಲಾಗವಾಡು ವೆಚ್ಚಗಳ ವಿಪರೀತ ಏರಿಕೆಯಿಂದಾಗಿ ಪೂರೈಕೆಯ ಸರಾಸರಿ ವೆಚ್ಚ (ACS) ಮತ್ತು ಸರಾಸರಿ ಆದಾಯ ಗಳಿಕೆ (ARR) ನಡುವೆ ಅಂತರ ಹೆಚ್ಚುತ್ತಲೇ ಬಂತು. 1990–91 ರಲ್ಲಿ ACS ಮತ್ತು ARR ನಡುವೆ ಪ್ರತಿ ಯೂನಿಟ್‌ಗೆ 24 ಪೈಸೆ ವ್ಯತ್ಯಾಸವಿದ್ದದ್ದು 2000–01 ರಲ್ಲಿ 92 ಪೈಸೆಗೆ ಹೆಚ್ಚಾಯಿತು. ಒಂದು ಕಡೆ ಸಾರ್ವಜನಿಕ ವಿದ್ಯುತ್ ಕ್ಷೇತ್ರದ ಕಡಗಣನೆಯಿಂದ ಸರ್ಕಾರಿ ವಿದ್ಯುತ್ ಉತ್ಪಾದನೆ ಕಡಿಮೆಯಾಗುತ್ತಾ ಬಂತು, ಆದರೆ, ಖಾಸಗಿಯವರ ವಿದ್ಯುತ್ ಉತ್ಪಾದನೆ ಸಹ ಅಂದಾಜು ಮಾಡಿದಷ್ಟು ಹೆಚ್ಚಳವಾಗಲಿಲ್ಲ. ದೇಶದಲ್ಲಿ ವಿದ್ಯುತ್ ಕೊರತೆ ಹೆಚ್ಚಾಯಿತು. ಈ ಹಿನ್ನೆಲೆಯಲ್ಲಿ '2003 ರ ವಿದ್ಯುತ್ ಕಾಯ್ದೆ' ಮತ್ತು '2005 ರ ರಾಷ್ಟ್ರೀಯ ವಿದ್ಯುತ್ ನೀತಿ' ಜಾರಿಗೆ ಬಂತು.

ವಿದ್ಯುತ್ ಕಾಯ್ದೆ 2003

ವಿದ್ಯುತ್ ಕ್ಷೇತ್ರವನ್ನು ಖಾಸಗೀಕರಿಸುವ ಮತ್ತು ಸರಕಾಗಿಸುವ ಏಕೈಕ ಗುರಿಯೊಂದಿಗೆ, ಸರ್ಕಾರದ ನಿಯಂತ್ರಣದಿಂದ ವಿದ್ಯುತ್ ರಂಗವನ್ನು ಮುಕ್ತಗೊಳಿಸುವ ಉದ್ದೇಶದಿಂದ ಬಿಜೆಪಿ ವಾಜಪೇಯಿ ಸರ್ಕಾರ 'ವಿದ್ಯುತ್ ಕಾಯ್ದೆ 2003' ಜಾರಿ ಮಾಡಿತು. ಉತ್ಪಾದನೆಯನ್ನು ಡಿ–ಲೈಸೆನ್ಸ್ ಮಾಡಲಾಯಿತು. ಸಾಗಾಣಿಕೆ ಮತ್ತು ವಿತರಣೆಯಲ್ಲಿ ಖಾಸಗಿ ಕಂಪನಿಗಳಿಗೆ ಅವಕಾಶ ನೀಡಲಾಯಿತು. SEB ಗಳ ಕಳಚುವಿಕೆಗೆ (Unbundling) ದಾರಿ ಮಾಡಲಾಯ್ತು. ವಿದ್ಯುತ್ ವ್ಯಾಪಾರದ ಹೆಸರಲ್ಲಿ ಷೇರು ಮಾರುಕಟ್ಟೆಯ ಜೂಜು ವ್ಯವಹಾರಕ್ಕೆ ವಿದ್ಯುತ್ ರಂಗವನ್ನು ಒಳಪಡಿಸಲಾಯಿತು. ಈ ಕಾಯ್ದೆಯು ಸ್ಪಷ್ಟವಾಗಿ ಕ್ರಾಸ್–ಸಬ್ಸಿಡಿ ಮತ್ತು ಗ್ರಾಮೀಣ ವಿದ್ಯುದೀಕರಣದಲ್ಲಿ ಸರ್ಕಾರದ ಪಾತ್ರವನ್ನು ಕೊನೆಗಾಣಿಸಬೇಕೆಂದು ಹೇಳಿತು. ಮನಮೋಹನ್ ಸಿಂಗ್ ಯುಪಿಎ–2 ಸರ್ಕಾರ ಇದೇ ದಾರಿಯಲ್ಲಿ ತಿದ್ದುಪಡಿಗಳನ್ನು ತಂದಿತು. ಈ ಕಾಯ್ದೆಯ ಜಾರಿಯ ಪರಿಣಾಮವಾಗಿ, 1992–93 ರಲ್ಲಿ ಒಟ್ಟಾರೆ SEB ಗಳ ನಷ್ಟ ರೂ.2,725 ಕೋಟಿಗಳು ಇದ್ದದ್ದು, ಮುಂದಿನ 10 ವರ್ಷಗಳಲ್ಲಿ ರೂ.24,837 ಗಳಿಗೆ ಹೆಚ್ಚಾಯಿತು. 2015–16 ರ ಹೊತ್ತಿಗೆ, ಒಟ್ಟಾರೆ ನಷ್ಟ ಜಿಡಿಪಿಯ ಶೇ.4.28 ರಷ್ಟು ಅಥವಾ ರೂ.4,85,922 ಕೋಟಿಗಳಿಗೆ ತಲುಪಿತು.

ಇಂತಹ ವಿಫಲ ನೀತಿಗಳ ಮುಂದುವರಿದ ಭಾಗವಾಗಿ ಮೋದಿ ಸರ್ಕಾರ 2014 ರಿಂದಲೂ ವಿದ್ಯುತ್ ತಿದ್ದುಪಡಿ ಮಸೂದೆಗಳನ್ನು ಮಂಡಿಸುತ್ತಲೇ ಇದೆ. ಈ ಅವಧಿಯಲ್ಲಿ ACS ಮತ್ತು ARR ನಡುವಿನ ಅಂತರ ಹೆಚ್ಚುತ್ತಲೇ ಇದ್ದು, 2021 ಮಾರ್ಚ್‌ನಲ್ಲಿ ವಿದ್ಯುತ್ ಉತ್ಪಾದನಾ ಕಂಪನಿಗಳಿಗೆ ನೀಡಬೇಕಾದ ಬಾಕಿ ಮೊತ್ತ ರೂ.67,917 ಕೋಟಿಗೆ ಹೆಚ್ಚಳವಾಗಿದೆ. NITI ಆಯೋಗವು 2021 ರ ತನ್ನ ಪಾಲಿಸಿ ಹೇಳಿಕೆಯಲ್ಲಿ, ರಾಜ್ಯ ವಿತರಣಾ ಕಂಪನಿಗಳನ್ನು ಅಡ್ಡ ಮತ್ತು ಉದ್ದ ಎರಡೂ ರೀತಿಯಲ್ಲಿ ಕಳಚಿ ಹಾಕಬೇಕೆಂದು ಮತ್ತು ಡಿ–ಲೈಸೆನ್ಸಿಂಗ್ ಮಾಡಬೇಕೆಂದು ಮತ್ತು 'ಕ್ರಾಸ್–ಸಬ್ಸಿಡಿಗಳು ಮತ್ತು ಸರ್ಚಾರ್ಜ್‌ಗಳನ್ನು ನಿರಂತರವಾಗಿ ಕಡಿತಗೊಳಿಸಬೇಕು ಮತ್ತು ರದ್ದುಪಡಿಸಬೇಕು' ಎಂದು ಹೇಳಿದೆ. ಈ ಹಿನ್ನೆಲೆಯಲ್ಲೇ ಮೋದಿ ಸರ್ಕಾರವು ಎಲ್ಲಾ ಸಬ್ಸಿಡಿಗಳನ್ನು ಕಳಚಿ ಹಾಕುವ ಮತ್ತು ದರಗಳನ್ನು ಏರಿಸುವ ವಂಚಕ ಕ್ರಮವಾಗಿ 'ನೇರ ನಗದು ವರ್ಗಾವಣೆ' (DBT) ನೀತಿಯನ್ನು ಜಾರಿಗೊಳಿಸುತ್ತಿದೆ. ಆಃಖಿ ಮೂಲಕ ಜನರನ್ನು ವಂಚಿಸುವುದು ಹೇಗೆಂದು ಅಡುಗೆ ಅನಿಲ ಸಿಲಿಂಡರ್ ವಿಚಾರದಲ್ಲಿ ಈಗಾಗಲೇ ಗೊತ್ತಾಗಿದೆ.


2022 ಆಗಸ್ಟ್ 8 ರಂದು ಬಿಜೆಪಿ ಮೋದಿ ಸರ್ಕಾರ "ವಿದ್ಯುತ್ ತಿದ್ದುಪಡಿ ಮಸೂದೆ 2022"ನ್ನು ಲೋಕಸಭೆಯನ್ನು ಮಂಡಿಸುವ ಮೂಲಕ ಈ ಸಂಘರ್ಷದ ಶವ ಪೆಟ್ಟಿಗೆಗೆ ಅಂತಿಮ ಮೊಳೆಯನ್ನು ಹೊಡೆದಿದೆ. ಸ್ವತಂತ್ರ ಭಾರತದ ಆರಂಭಿಕ ಕಣ್ಣೋಟಕ್ಕೆ ಸಂಪೂರ್ಣ ವಿರುದ್ಧವಾಗಿ ಬಂಡವಾಳಶಾಹಿ ಮಾರುಕಟ್ಟೆಯನ್ನು ದೇವತೆಗಳೆಂದು ಭಾವಿಸಿದ ಮಸೂದೆ ಇದಾಗಿದೆ. ಜೊತೆಗೆ ಪ್ರಿ–ಪೇಡ್ ಸ್ಮಾರ್ಟ್ ಮೀಟರ್‌ಗಳ ಬಳಕೆಗೆ ಸಂಬಂಧಿಸಿ ಒಕ್ಕೂಟ ಸರ್ಕಾರವು, ಗ್ರಾಹಕರ ಹಕ್ಕುಗಳ ಕರಡು ವಿದ್ಯುತ್ ತಿದ್ದುಪಡಿ ನಿಯಮಗಳನ್ನು 2023 ಮಾರ್ಚ್‌ನಲ್ಲಿ ಪ್ರಕಟಿಸಿದೆ.

"ವಿದ್ಯುತ್ ತಿದ್ದುಪಡಿ ಮಸೂದೆ 2022"ಯಲ್ಲಿ ಏನಿದೆ?

1. ಒಂದು ನಿರ್ದಿಷ್ಟ ಪ್ರದೇಶದಲ್ಲಿ ವಿದ್ಯುತ್ ಪೂರೈಕೆ ಮಾಡುವ ಒಂದಕ್ಕಿಂತ ಹೆಚ್ಚಿನ ವಿತರಣಾ ಕಂಪನಿಗಳು ಕಾರ್ಯಾಚರಣೆ ಮಾಡಲು 2003 ರ ವಿದ್ಯುತ್ ಕಾಯ್ದೆ ಅವಕಾಶ ಮಾಡಿತ್ತು. ಈ ವಿತರಣಾ ಕಂಪನಿಗಳು ತಮ್ಮದೇ ಜಾಲದ ಮೂಲಕ ವಿದ್ಯುತ್ ಪೂರೈಕೆ ಮಾಡಬೇಕಿತ್ತು. ಈಗ ಈ ಅಗತ್ಯವನ್ನು ತೆಗೆದು ಹಾಕಲಾಗಿದೆ.
2. ವಿತರಣಾ ಜಾಲದ ಒಡೆತನ ಹೊಂದಿರುವ ಕಂಪನಿಯು ತನ್ನ ಜಾಲವನ್ನು ಬಳಸಲು ಇತರ ವಿದ್ಯುತ್ ವಿತರಣಾ ಕಂಪನಿಗಳಿಗೆ ಮುಕ್ತ ಮತ್ತು ಪಕ್ಷಪಾತ–ರಹಿತ ಪ್ರವೇಶವನ್ನು ನಿರ್ದಿಷ್ಟಪಡಿಸಿದ ಶುಲ್ಕಗಳ ಆಧಾರದಲ್ಲಿ ಒದಗಿಸಬೇಕು. ಪೂರೈಕೆಯ ಪ್ರದೇಶವನ್ನು ನಿರ್ಧರಿಸಲು ಮಾನದಂಡಗಳನ್ನು ಒಕ್ಕೂಟ ಸರ್ಕಾರವು ರೂಪಿಸುತ್ತದೆ.
3. ಅಸ್ತಿತ್ವದಲ್ಲಿರುವ ವಿದ್ಯುತ್ ಖರೀದಿ ಒಪ್ಪಂದಗಳಿಂದ (ಕಕಂ) ಉದ್ಭವಿಸುವ ವಿದ್ಯುತ್ ಮತ್ತು ಸಂಬಂಧಿತ ವೆಚ್ಚಗಳನ್ನು, ಒಂದು ಪ್ರದೇಶದಲ್ಲಿರುವ ವಿತರಣಾ ಕಂಪನಿಗಳ ನಡುವೆ ಹಂಚಿಕೊಳ್ಳಬೇಕು.
4. ಒಂದು ಪ್ರದೇಶದಲ್ಲಿ ಒಂದಕ್ಕಿಂತ ಹೆಚ್ಚಿನ ವಿತರಣಾ ಕಂಪನಿಗಳಿದ್ದಲ್ಲಿ, ಚಿಲ್ಲರೆ ಪೂರೈಕೆಯ ಕನಿಷ್ಟ ಮತ್ತು ಗರಿಷ್ಟ ದರಗಳನ್ನು ರಾಜ್ಯ ಆಯೋಗವು ತೀರ್ಮಾನಿಸುತ್ತದೆ.
5. ಒಂದೇ ಪ್ರದೇಶದ ವಿದ್ಯುತ್ ಪೂರೈಕೆಗೆ ಹಲವು ಲೈಸೆನ್ಸ್‌ಗಳನ್ನು ನೀಡಿದ ಮೇಲೆ, ಯಾವುದೇ ವಿತರಣಾ ಕಂಪನಿಗೆ ಕ್ರಾಸ್ ಸಬ್ಸಿಡಿಯಿಂದ ಬರುವ ಮಿಗುತಾಯವನ್ನು ಡಿಪಾಸಿಟ್ ಮಾಡಲು ರಾಜ್ಯ ಸರ್ಕಾರವು 'ಕ್ರಾಸ್–ಸಬ್ಸಿಡಿ ಬ್ಯಾಲೆನ್ಸಿಂಗ್ ಫಂಡ್' ಸ್ಥಾಪಿಸುತ್ತದೆ. ಅದೇ ಪ್ರದೇಶದ ಅಥವಾ ಇತರೆ ಯಾವುದೇ ಪ್ರದೇಶದ ವಿತರಣಾ ಕಂಪನಿಯ ಕ್ರಾಸ್ ಸಬ್ಸಿಡಿ ಕೊರತೆಯನ್ನು ನೀಗಿಸಲು ಅದನ್ನು ಬಳಸಲಾಗುತ್ತದೆ.
6. ಒಂದು ರಾಜ್ಯಕ್ಕಿಂತ ಹೆಚ್ಚಿನ ರಾಜ್ಯಗಳಲ್ಲಿ ವಿದ್ಯುತ್ ವಿತರಣೆಗೆ ಸಂಬಂಧಿಸಿ ಲೈಸೆನ್ಸ್‌ಗಳನ್ನು ಕೇಂದ್ರ ವಿದ್ಯುತ್ ನಿಯಂತ್ರಣಾ ಆಯೋಗವು (ಅಇಖಅ) ನೀಡುತ್ತದೆ.
7. ವಿದ್ಯುತ್ ಉತ್ಪಾದನಾ ಕಂಪನಿಗಳಿಗೆ ಸಮಯದೊಳಗೆ ಪಾವತಿಯನ್ನು ಖಾತ್ರಿಗೊಳಿಸಲು ಪಾವತಿ ಸುರಕ್ಷತಾ ಸಾಧನವನ್ನು ಸ್ಥಾಪಿಸಲು ಮಸೂದೆ ಅವಕಾಶ ಕೊಡುತ್ತದೆ. ವಿದ್ಯುತ್ ಪೂರೈಕೆಯಲ್ಲಿ ಒಳಗೊಳ್ಳುವ ಎಲ್ಲಾ ರೀತಿಯ ವೆಚ್ಚಗಳನ್ನು ವಸೂಲಿ ಮಾಡುವ ಹಾಗೆ ದರಗಳು ಇರಬೇಕೆಂದು ಮಸೂದೆಯು ಹೇಳುತ್ತದೆ.
8. ನವೀಕರಿಸಬಹುದಾದ ಖರೀದಿ ಹೊಣೆಗಾರಿಕೆ (ಖಕಔ) ಅಡಿಯಲ್ಲಿ ವಿದ್ಯುತ್ ವಿತರಣಾ ಕಂಪನಿಗಳು ಒಕ್ಕೂಟ ಸರ್ಕಾರ ನಗದಿಪಡಿಸಿದ ಪ್ರಮಾಣಕ್ಕಿಂತ ಕಡಿಮೆ ನವೀಕರಿಸಬಹುದಾದ ವಿದ್ಯುತ್ ಖರೀದಿ ಮಾಡಿದರೆ ಪ್ರತಿ ಕಿ.ವಾ. ಗೆ 25 ರಿಂದ 50 ಪೈಸೆ ದಂಡ ವಸೂಲಿ ಮಾಡಬೇಕೆಂದು ಮಸೂದೆಯಲ್ಲಿ ಹೇಳಲಾಗಿದೆ.
9. ಅಇಖಅ ಮತ್ತು ಖಇಖಅ ಗಳ ಅಧ್ಯಕ್ಷರು ಮತ್ತು ಸದಸ್ಯರ ವಿದ್ಯಾರ್ಹತೆಯನ್ನು ಮಸೂದೆ ತಿದ್ದುಪಡಿ ಮಾಡಿದೆ. ಖಇಖಅ ಸದಸ್ಯರ ಸಂಖ್ಯೆಯನ್ನು 3 ರಿಂದ 4 ಹೆಚ್ಚಿಸಲಾಗಿದೆ. ಒಕ್ಕೂಟ ಸರ್ಕಾರವು ಒಬ್ಬ ವ್ಯಕ್ತಿಯನ್ನು ರಾಜ್ಯ ಆಯೋಗಗಳಿಗೆ ನೇಮಕ ಮಾಡುತ್ತದೆ.

ಇದರ ಪರಿಣಾಮಗಳೇನು?

ವಿದ್ಯುತ್ ವಿತರಣಾ ವ್ಯವಹಾರವು ಎರಡು ಪ್ರಮುಖ ಅಂಶಗಳನ್ನು ಒಳಗೊಂಡಿದೆ. 1). ಹೈ–ವೋಲ್ಟೇಜ್ ಸಾಗಾಣಿಕೆ ವ್ಯವಸ್ಥೆಯಿಂದ ಗ್ರಾಹಕರ ಬಳಿಗೆ ವಿದ್ಯುತ್‌ನ್ನು ಸಾಗಿಸಿ ಪುಟ 6 ಕ್ಕೆ



ವಿದ್ಯುತ್ ಸುಧಾರಣೆ.... ಪುಟ 5 ರಿಂದ

ತಲುಪಿಸುವ ಭೌತಿಕ ತಂತಿ ಜಾಲ (physical wire network), 2). ಉತ್ಪಾದಕರಿಂದ ವಿದ್ಯುತ್‌ನ್ನು ಖರೀದಿಸಿ ಅದನ್ನು ಗ್ರಾಹಕರಿಗೆ ತಲುಪಿಸುವುದು, ಬಿಲ್ ಮಾಡುವುದು ಮತ್ತು ಸಂಗ್ರಹ ಮಾಡುವುದು. ಇದುವರೆಗೂ ಇವೆರಡೂ ಕೆಲಸಗಳನ್ನು ಒಂದೇ ಕಂಪನಿ ಮಾಡುತ್ತಿದೆ. ಉದಾಗೆ: ಬೆಸ್ಕಾಂ, ಮೆಸ್ಕಾಂ, ಗೆಸ್ಕಾಂ, ಹೆಸ್ಕಾಂ ಮತ್ತು ಚೆಸ್ಕಾಂ. ಈಗ ಮೋದಿ ಸರ್ಕಾರ ಮಂಡಿಸಿರುವ ಮಸೂದೆಯ ಪ್ರಕಾರ ಇವು ಬೇರ್ಪಡುತ್ತವೆ.

ವಿದ್ಯುತ್ ಕಾಯ್ದೆಗೆ ಮಾಡಲಾಗಿರುವ ಈ ತಿದುಪಡಿಯು ಬಹುಶಃ ಯಾವುದೇ ದೇಶವೂ ಮಾಡದಿರುವ ಪ್ರಯತ್ನವಾಗಿದೆ: ಅಂದರೆ, ಯಾವ ತಂತಿಗಳ ಮೂಲಕ ವಿದ್ಯುತ್ ಹರಿಯುತ್ತಿದೆಯೋ, ಆ ತಂತಿಗಳಿಂದ ವಿದ್ಯುತ್ ಮಾಲೀಕತ್ವವನ್ನು ಬೇರ್ಪಡಿಸುವುದು. ಇಲ್ಲಿ ಇಡೀ ವಿತರಣಾ ವ್ಯವಸ್ಥೆಯ ಮೂಲಸಂರಚನೆಯನ್ನು ರಾಜ್ಯ ಸರ್ಕಾರಗಳು ನಿರ್ವಹಣೆ ಮಾಡಬೇಕಾಗುತ್ತದೆ, ಇದರ ಮೂಲಕ ಹರಿಸಲಾಗುವ ವಿದ್ಯುತ್ ಮೇಲೆ ಅದನ್ನು "ಮಾರುಕಟ್ಟೆ"ಯಲ್ಲಿ ಖರೀದಿಸುವ ಮತ್ತು ಮಾರುವ ವ್ಯಾಪಾರಿಗಳು ಮಾಲೀಕತ್ವ ಹೊಂದಿರುತ್ತಾರೆ. ರಾಜ್ಯ ಸರ್ಕಾರ ಜನತೆಗೆ ಉತ್ತರದಾಯಿ ಆಗಿರಬೇಕಾಗುತ್ತದೆ ಮತ್ತು ಅದಕ್ಕೆ ಜವಾಬ್ದಾರಿ ಇರುತ್ತದೆ, ಆದರೆ, ತನ್ನ ಜನತೆಗೆ ಬೇಕಾದ ವಿದ್ಯುತ್ ಪೂರೈಕೆ ಮಾಡಲಾಗಲೀ ಅಥವಾ ದರಗಳನ್ನು ನಿಯಂತ್ರಿಸಲಾಗಲೀ ಅದಕ್ಕೆ ಸಾಮರ್ಥ್ಯವಿರುವುದಿಲ್ಲ ಮತ್ತು ಅವಕಾಶವೂ ಇರುವುದಿಲ್ಲ. ವಿತರಣಾ ಮೂಲಸಂರಚನೆಗೆಂದು ಖಾಸಗಿ ವಿತರಕರು ಹಣ ಹೂಡುವ ಅಗತ್ಯವಿಲ್ಲ. ಬದಲಿಗೆ ಅಂಶಿಕ ಶುಲ್ಕ ನೀಡಿದರೆ ಸಾಕು. ತಮ್ಮ ವಿರುದ್ಧ ಪೈಪೋಟಿ ಮಾಡುವವರಿಗೇ ತಮ್ಮ ಮೂಲ ಸೌಲಭ್ಯಗಳನ್ನು ನೀಡಲೇಬೇಕಾದ ಒತ್ತಡ ರಾಜ್ಯ ವಿತರಣಾ ಕಂಪನಿಗಳಿಗೆ ಬರುತ್ತದೆ.

ಒಂದು ರಾಜ್ಯದ ಒಳಗಿನ ನಗರಪಾಲಿಕೆ ಅಥವಾ ಮುನಿಸಿಪಾಲಿಟಿ ಅಥವಾ ಒಂದು ರೆವಿನ್ಯೂ ಜಿಲ್ಲೆ ಅಥವಾ ಒಂದು ಸಣ್ಣ ಪ್ರದೇಶ ಅಥವಾ ತಮ್ಮ ಆಯ್ಕೆಯ ಯಾವುದೇ ಪ್ರದೇಶದಲ್ಲಿ ವಿದ್ಯುತ್ ಪೂರೈಸಲು ಖಾಸಗಿ ಕಂಪನಿಗಳಿಗೆ ಅನುಮತಿ ನೀಡುವ ಅರ್ಹತೆಗಳನ್ನು ಒಕ್ಕೂಟ ಸರ್ಕಾರ ರೂಪಿಸುತ್ತದೆ. ಇದು ರಾಜ್ಯ ಸರ್ಕಾರಗಳ ಅಧಿಕಾರದ ಮೇಲಿನ ದಾಳಿಯಾಗಿದೆ. FRBM ಪ್ರಕಾರ ರಾಜ್ಯದ ಬಜೆಟ್ನ ಹಣಕಾಸು ಕೊರತೆ ಶೇ.3 ರಷ್ಟು ಮಿತಿಯನ್ನು ಮೀರುವಂತಿಲ್ಲ. ಆದರೆ ವಿದ್ಯುತ್ ರಂಗದ ಖಾಸಗೀಕರಣದ ಸುಧಾರಣೆಗಳನ್ನು ಜಾರಿ ಮಾಡಿದರೆ ಹೆಚ್ಚುವರಿ ಸಾಲವನ್ನು ಮಾಡಬಹುದೆಂಬ ರಿಯಾಯಿತಿ ನೀಡಲಾಗಿದೆ. ವಿದ್ಯುತ್ ಖಾಸಗೀಕರಣವನ್ನು ಮಾಡಿಸಲೇಬೇಕೆಂದು ರಾಜ್ಯಗಳ ಹಣಕಾಸಿನ ಮೇಲೆ ಹಲವು ರೀತಿಯ ನೇರ ಮತ್ತು ಪರೋಕ್ಷ ಒತ್ತಡಗಳನ್ನು ಮೋದಿ ಸರ್ಕಾರ ಹೇರುತ್ತಿದೆ.

ಇನ್ನು ಮಸೂದೆಯಲ್ಲಿ ಹೇಳಿರುವ ಹಾಗೆ, ಗ್ರಾಹಕರು ಒಂದು ವಿತರಣಾ ಕಂಪನಿ ಬೇಡವೆಂದರೆ ಮತ್ತೊಂದು ಕಂಪನಿಗೆ ಶಿಫ್ಟ್ ಆಗಬಹುದು, ಕಡಿಮೆ ದರಗಳು, ಉತ್ತಮ ಸೇವೆ, ಇತ್ಯಾದಿಗಳೆಲ್ಲವೂ ಬೊಗಳೆ ಮಾತುಗಳಾಗಿವೆ. ಏಕೆಂದರೆ, ಮಾರುಕಟ್ಟೆಯಲ್ಲಿ ವಿದ್ಯುತ್ ದರಗಳನ್ನು ನಿಗದಿ ಮಾಡುವುದು, ಹರಾಜಿನ ಮೂಲಕ ನಿಗದಿಯಾಗುವ ದರಗಳ ಆಧಾರದಲ್ಲಿ. ಖಾಸಗಿ ಉತ್ಪಾದಕರೇ ಖಾಸಗಿ ವಿತರಕರೂ ಆಗುವ ಸಾಧ್ಯತೆ ಇರುವುದರಿಂದ ಆರಂಭದಲ್ಲಿ ಕಡಿಮೆ ದರದಲ್ಲಿ PPA ಗಳನ್ನು ಮಾಡಿಕೊಳ್ಳಬಹುದು. ನಂತರ ದುಬಾರಿ PPA ಗಳಿಗೆ ಮುಂದಾಗುತ್ತಾರೆ. ಮಹಾರಾಷ್ಟ್ರ ಸರ್ಕಾರ ಅಮೇರಿಕದ ಎನ್ರಾನ್ ಕಂಪನಿ ಜೊತೆ ಮಾಡಿಕೊಂಡ ದುಬಾರಿ PPA ನಿಂದಾಗಿ MSEB ದಿವಾಳಿಯಾಗಿದ್ದನ್ನು ನೆನಪಿಸಿಕೊಳ್ಳಬಹುದು.

ಖಾಸಗಿಯವರು ಹೆಚ್ಚಿನ ಲಾಭ ಮಾಡಿದರೆ ಸರ್ಕಾರಿ ವಿತರಣಾ ಜಾಲ ಪೂರ್ಣ ನಷ್ಟಕ್ಕೆ ಒಳಗಾಗುತ್ತದೆ. ಅಂತಿಮವಾಗಿ ಅದನ್ನೂ ಖಾಸಗಿಯವರಿಗೇ ಮೂರು ಕಾಸಿಗೆ ಮಾರಬೇಕಾಗುತ್ತದೆ. ಇಂಗ್ಲೆಂಡ್ ಮತ್ತು ಯೂರೋಪಿಯನ್ ದೇಶಗಳಲ್ಲಿ ಉಂಟಾಗಿರುವ ಬಿಕ್ಕಟ್ಟಿಗೆ ಈ ವಿಧಾನವೇ ಕಾರಣವಾಗಿದೆ. ಅದಾನಿ, ರಿಲಯನ್ಸ್, ವೇದಾಂತ, ಟಾಟಾ ಪವರ್ ಮುಂತಾದ ಖಾಸಗಿ ಕಂಪನಿಗಳು ವಿದ್ಯುತ್ ರಂಗವನ್ನು ವಶಪಡಿಸಿಕೊಳ್ಳಲು ಸಾರ್ವಜನಿಕ ಬ್ಯಾಂಕಗಳ ಹಣವನ್ನೇ ಬಳಸುತ್ತಾರೆ. ಇವರಲ್ಲಿ ಬಹುತೇಕರು ತಾವು ದಿವಾಳಿಯಾಗಿದ್ದೇವೆಂದು ಬ್ಯಾಂಕುಗಳಿಗೆ ನಾಮ ಹಾಕುತ್ತಾರೆ. ಇಂತಹವರಿಗೆ ಅನುಕೂಲವಾಗಲೆಂದು "ಹೇರ್ ಕಟ್", "ರೈಟ್ ಆಫ್", ಇತ್ಯಾದಿ ಹೆಸರಲ್ಲಿ ಲಕ್ಷಾಂತರ ಕೋಟಿಗಳ ಮನ್ನಾ ಆಗುತ್ತದೆ. ಇತ್ತೀಚೆಗೆ RBI ಸುತ್ತೋಲೆ ಹೊರಡಿಸಿ "ಉದ್ದೇಶ ಪೂರ್ವಕ ಡಿಫಾಲ್ಟರ್"ಗಳಿಗೆ ಸಾಲ ಮನ್ನಾ ಯೋಜನೆ ರೂಪಿಸಿದೆ.

ಈ ಮಸೂದೆಯು ನವೀಕರಿಸಬಹುದಾದ ವಿದ್ಯುತ್ ಖರೀದಿಸಬೇಕೆಂದು ರಾಜ್ಯ ವಿತರಣಾ ಕಂಪನಿಗಳ ಮೇಲೆ ಒತ್ತಡ ಹೇರುತ್ತದೆ. ಈಗ ದೇಶದಲ್ಲಿ ಶೇ.96 ರಷ್ಟು ನವೀಕರಿಸಬಹುದಾದ ವಿದ್ಯುತ್ ಉತ್ಪಾದನೆ ಮಾಡುತ್ತಿರುವುದು ಖಾಸಗಿಯವರು. ನಿರ್ದಿಷ್ಟ ಪ್ರಮಾಣದಲ್ಲಿ ಖರೀದಿ ಮಾಡದಿದ್ದರೆ ದಂಡ ವಿಧಿಸುವ ಪ್ರಸ್ತಾಪ ಮಸೂದೆಯಲ್ಲಿದೆ. ಎಲ್ಲಾ ವಿದ್ಯುತ್‌ನ್ನು ಖಾಸಗಿಯವರೇ ಉತ್ಪಾದಿಸುವುದರಿಂದ ದುಬಾರಿ PPA ಗಳನ್ನು ಮಾಡಲಾಗುತ್ತದೆ. ಹಣ ಪಾವತಿ ಮಾಡುವುದು ತಡವಾದರೆ, ರಾಜ್ಯ ವಿತರಣಾ ಕಂಪನಿಗಳಿಗೆ ವಿದ್ಯುತ್ ಪೂರೈಕೆಯನ್ನು NLDC (ನ್ಯಾಷನಲ್ ಲೋಡ್ ಡಿಸ್‌ಪ್ಯಾಚ್ ಸೆಂಟರ್) ನಿಲ್ಲಿಸಬಹುದಾಗಿದೆ. ರಾಜ್ಯಗಳು ಸಂಪೂರ್ಣ ವಿಧೇಯರಾಗಿರಬೇಕೆಂದು ಈ ಮಸೂದೆ ಒತ್ತಾಯಿಸುತ್ತದೆ.

2022 ರ ಮಸೂದೆಯ ಉದ್ದೇಶ ವಿದ್ಯುತ್ ವಿತರಣಾ ವ್ಯವಸ್ಥೆಯನ್ನು ಸಂಪೂರ್ಣವಾಗಿ ಖಾಗೀಕರಿಸುವುದಾಗಿದೆ. ಈಗಾಗಲೇ ಹಣಕಾಸು ಸಮಸ್ಯೆಗಳಿಂದ ನರಳುತ್ತಿರುವ ಸರ್ಕಾರಿ ವಿತರಣಾ ಕಂಪನಿಗಳನ್ನು ರೋಗಗ್ರಸ್ತಗೊಳಿಸಿ ಖಾಸಗಿಯವರಿಗೆ ಮಾರಾಟ ಮಾಡುವುದು ಮತ್ತು ಬೃಹತ್ ಸಾರ್ವಜನಿಕ ವಿದ್ಯುತ್ ಸಂರಚನಾ ಜಾಲವನ್ನು ನಾಶ ಮಾಡುವುದರ ಜೊತೆಗೆ, ವಿದ್ಯುತ್ ಕ್ಷೇತ್ರದ ಮೂರು ವಿಭಾಗಗಳಾದ ಉತ್ಪಾದನೆ, ಸಾಗಾಣಿಕೆ ಮತ್ತು ವಿತರಣೆ ಎಲ್ಲವನ್ನೂ ಖಾಸಗಿಯವರಿಗೆ ಹಸ್ತಾಂತರಿಸುತ್ತದೆ. ವಿದ್ಯುತ್ ದರಗಳು ಹೆಚ್ಚಾಗುತ್ತಾ ಹೋಗುತ್ತವೆ ಮತ್ತು ಕೃಷಿಯೂ ಸೇರಿದಂತೆ ಗ್ರಾಮೀಣ ವಿದ್ಯುತ್ ಸೇವೆಗಳು ಇಲ್ಲವಾಗುತ್ತವೆ.

ಇಂತಹ ಸಂರಚನಾ ಬದಲಾವಣೆಗಳು ಇಡೀ ವಿದ್ಯುತ್ ರಂಗದಲ್ಲಿ ಸಂಭವಿಸಿದಾಗ, ರಾಜ್ಯ ಸರ್ಕಾರವು ಈಗ ಘೋಷಿಸಿರುವ ಉಚಿತ ವಿದ್ಯುತ್ ಯೋಜನೆಗಳನ್ನು ಜಾರಿ ಮಾಡಲು ಅಸಾಧ್ಯವಾಗುತ್ತದೆ. ಸರ್ಕಾರದ ಬಳಿ ತನ್ನದೇ ವಿತರಣಾ ಕಂಪನಿಗಳು ಇರುವುದಿಲ್ಲ, ಕ್ರಾಸ್–ಸಬ್ಸಿಡಿಗೆ ಅವಕಾಶ ಇರುವುದಿಲ್ಲ. ಅಂತಹುದೊಂದು ಪರಿಸ್ಥಿತಿ ಪೂರ್ಣವಾಗಿ ಬೆಳೆದಾಗ ಕೇವಲ ಉಚಿತ ವಿದ್ಯುತ್‌ಗಾಗಿಯೇ ರಾಜ್ಯ ಸರ್ಕಾರ ಹತ್ತಾರು ಸಾವಿರ ಕೋಟಿ ಖರ್ಚು ಮಾಡಬೇಕಾಗಬಹುದು. ಆಗ ರಾಜ್ಯ ಸರ್ಕಾರ ತೀವ್ರ ಬಿಕ್ಕಟ್ಟಿಗೆ ಒಳಗಾಗಬಹುದು.

ಮುಂದೇನು?

1. ಪ್ರಸಕ್ತ ಮೋದಿ ಸರ್ಕಾರ ಅನುಸರಿಸುತ್ತಿರುವ ವಿದ್ಯುತ್ ನೀತಿಯು ಅತ್ಯಂತ ಜನವಿರೋಧಿಯಾಗಿದೆ. ಖಾಸಗಿ ಬಂಡವಾಳದಾರರ ಕೈಯಲ್ಲಿ ದೇಶದ ಬೆಳವಣಿಗೆಯ ಭವಿಷ್ಯವನ್ನು ಇಡುವ "ವಿದ್ಯುತ್ ತಿದ್ದುಪಡಿ ಮಸೂದೆ 2022"ನ್ನು ತಿರಸ್ಕರಿಸಬೇಕಾಗಿದೆ. ವಿದ್ಯುತ್ ದರಗಳನ್ನು ವಿಪರೀತವಾಗಿ ಹೆಚ್ಚಿಸುವ ಈ ನೀತಿಗಳನ್ನು ಸೋಲಿಸಬೇಕಾಗಿದೆ.
2. ವಿದ್ಯುತ್ ಕ್ಷೇತ್ರವು ದೇಶದ ಒಟ್ಟಾರೆ ಬೆಳವಣಿಗೆಗೆ ಅತ್ಯಂತ ಮಹತ್ವದ್ದು ಮತ್ತು ವಿದ್ಯುತ್ ಬೆಲೆಗಳು ಜನತೆಯ ಕೈಗೆಟಕುವ ಹಾಗಿರಬೇಕು. ಉಚಿತ ವಿದ್ಯುತ್ ನೀತಿಯನ್ನು ಪ್ರಕಟಿಸಿರುವ ರಾಜ್ಯದ ಕಾಂಗ್ರೆಸ್ ಸರ್ಕಾರವು, ಅದರ ನೆಪದಲ್ಲಿ ವಿದ್ಯುತ್ ರಂಗದ ಖಾಸಗೀಕರಣಕ್ಕೆ ಯಾವುದೇ ಪ್ರಯತ್ನವನ್ನು ಮಾಡಬಾರದು.
3. ಕೇರಳ ರಾಜ್ಯವು ವಿದ್ಯುತ್ ರಂಗವನ್ನು ತ್ರಿಭಜಿಸದೇ ಇರುವ ಏಕೈಕ ರಾಜ್ಯವಾಗಿದೆ. ಜೊತೆಗೆ, ಈಗಾಗಲೇ ಕೇರಳ, ತಮಿಳುನಾಡು ಮತ್ತು ತೆಲಂಗಾಣ ರಾಜ್ಯಗಳು "ವಿದ್ಯುತ್ ತಿದ್ದುಪಡಿ ಮಸೂದೆ 2022"ನ್ನು ಜಾರಿಗೊಳಿಸುವುದಿಲ್ಲವೆಂದು ನಿರ್ಣಯಗಳನ್ನು ಕೈಗೊಂಡಿವೆ. ಇದೇ ರೀತಿಯಲ್ಲಿ ಕರ್ನಾಟಕದ ಕಾಂಗ್ರೆಸ್ ರಾಜ್ಯ ಸರ್ಕಾರವು ಪ್ರಸಕ್ತ ವಿಧಾನಸಭಾ ಅಧಿವೇಶನದಲ್ಲಿ ವಿದ್ಯುತ್ ಮಸೂದೆ–2022 ನ್ನು ರಾಜ್ಯದಲ್ಲಿ ಜಾರಿ ಮಾಡುವುದಿಲ್ಲವೆಂದು ನಿರ್ಣಯವನ್ನು ಅಂಗೀಕರಿಸಬೇಕು. ರಾಜ್ಯದ ಅಧಿಕಾರಗಳನ್ನು ದಮನ ಮಾಡುವ ಮೋದಿ ಸರ್ಕಾರದ ನೀತಿಗಳನ್ನು ದೃಢವಾಗಿ ಎದುರಿಸಬೇಕು.
4. ವಿದ್ಯುತ್ ರಂಗದ ನಷ್ಟವನ್ನು ಕಡಿಮೆ ಮಾಡಲು:– ವಿದ್ಯುತ್ ಘಟಕಗಳ ಸ್ಥಾಪನಾ ವೆಚ್ಚ, ವಿದ್ಯುತ್ ಉತ್ಪಾದನೆಯ ಇಂಧನ (ಕಲ್ಲಿದ್ದಲು, ಇತ್ಯಾದಿ) ವೆಚ್ಚ, ವಿದೇಶೀ ವಿನಿಮಯದ ಹೊರ ಹರಿವು, O&M ವೆಚ್ಚ A&T ನಷ್ಟ, T&D ನಷ್ಟ ಇವುಗಳನ್ನು ಕಡಿಮೆ ಮಾಡಬೇಕು. ಲಭ್ಯವಿರುವ ಇಂಧನ ಸಂಪನ್ಮೂಲಗಳಿಂದ ತಾಂತ್ರಿಕ ಮತ್ತು ಆರ್ಥಿಕ ಅನುಕೂಲಗಳನ್ನು ಪಡೆಯಬೇಕು. ಭ್ರಷ್ಟಾಚಾರವನ್ನು ಪೂರ್ಣವಾಗಿ ತಡೆಗಟ್ಟಬೇಕು.

ಈ ದಿಕ್ಕಿನಲ್ಲಿ ರಾಜ್ಯದ ವಿವಿಧ ವಿಭಾಗದ ಜನರನ್ನು ಅಣಿನೆರೆಸಲು ಪ್ರಯತ್ನಿಸಬೇಕು. ಅದಕ್ಕಾಗಿ ಜನರ ನಡುವೆ ಸಭೆ ಸಮಾವೇಶಗಳನ್ನು ನಡೆಸಿ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು.

ಮಣಿಪುರಕ್ಕೆ ಸಿಪಿಐ(ಎಂ)–ಸಿಪಿಐ ಜಂಟಿ ನಿಯೋಗದ ಸೌಹಾರ್ದ ಭೇಟಿ

"ಮಣಿಪುರದಲ್ಲಿ ನಿಲ್ಲದ ಸಾವು–ನೋವುಗಳ ನಡುವೆಯೂ ಮಹಾರಾಷ್ಟ್ರದಲ್ಲಿ ಪ್ರಧಾನಿ ಬಂಟರುಗಳ ಪಕ್ಷಾಂತರದ ಹೂಟ"



ಮಣಿಪುರದಲ್ಲಿ ಮಾರಣಾಂತಿಕ ಪ್ರಕ್ಷುಬ್ಧತೆ ಮುಂದುವರಿದಿದೆ. ಸಾವುಗಳು ಸಂಭವಿಸುತ್ತಲೇ ಇವೆ, ಜತೆಗೆ ಪರಿಹಾರ ಶಿಬಿರಗಳಲ್ಲಿ ಮತ್ತು ಇತರೆಡೆ ಜನರ ಸಂಕಷ್ಟವೂ ಮುಂದುವರೆಯುತ್ತಲೇ ಇದೆ. ಅಪನಂಬಿಕೆ ಮತ್ತು ಅಭದ್ರತೆಯ ವಾತಾವರಣವಿದೆ. ಇಂಟರ್ನೆಟ್ ಮುಚ್ಚಿಕೆಯೂ ಮುಂದುವರೆದಿದ್ದು ಮಣಿಪುರವನ್ನು ದೇಶದ ಇತರ ಭಾಗಗಳಿಂದ ಮುಚ್ಚಿ ಹಾಕಿದೆ. ದುರದೃಷ್ಟವಶಾತ್, ಬಹುತೇಕ ಮುಖ್ಯವಾಹಿನಿಯ ಮಾಧ್ಯಮಗಳು ಮಣಿಪುರದ ವಿವಿಧ ಜನಾಂಗೀಯ ಗುಂಪುಗಳ ಶೋಚನೀಯ ಸ್ಥಿತಿಯನ್ನು ತೋರಿಸುತ್ತಿಲ್ಲ. 'ಡಬಲ್ ಇಂಜಿನ್' ಸರ್ಕಾರದ ಮೂಲಕ ಮಹಾನ್ ಆಳ್ವಿಕೆ ನೀಡುತ್ತೇವೆಂದ ದಾವೆಗಳು ಈಗ ಸಂಪೂರ್ಣ ಟೊಳ್ಳು ಎಂದು ಬಯಲಾಗಿದೆ. ಪ್ರಧಾನಿ ಮತ್ತು ಗೃಹ ಸಚಿವರು ಸೇರಿದಂತೆ ಅವರ ವಿಶ್ವಾಸಾರ್ಹ ಬಂಟರುಗಳು ವಿರೋಧ ಪಕ್ಷಗಳನ್ನು ದುರ್ಬಲಗೊಳಿಸುವಲ್ಲಿಯೇ ಮತ್ತು ಮಹಾರಾಷ್ಟ್ರದಲ್ಲಿ ಪಕ್ಷಾಂತರವನ್ನು ಹೇರುವಲ್ಲಿಯೇ ಹೆಚ್ಚಿನ ಆಸಕ್ತಿಯನ್ನು ತೋರಿಸುತ್ತಿದ್ದಾರೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಮಣಿಪುರದ ಜನರು ತುರ್ತಾಗಿ ಸಾಮಾನ್ಯ ಸ್ಥಿತಿಯ ಮರುಸ್ಥಾಪನೆ ಮತ್ತು ವಿಭಜಕ ರಾಜಕೀಯದ ಸಂಕೇತವಾಗಿರುವ ಮತ್ತು ಅಧಿಕಾರದಲ್ಲಿ ಮುಂದುವರಿಯಲು ಎಲ್ಲಾ ನ್ಯಾಯಸಮ್ಮತತೆಯನ್ನು ಕಳೆದುಕೊಂಡಿರುವ ಮುಖ್ಯಮಂತ್ರಿಯನ್ನು ತೆಗೆದುಹಾಕುವ ಪ್ರಮುಖ ಬೇಡಿಕೆಯ ಮೇಲೆ ಹೋರಾಟವನ್ನು ಮುಂದುವರೆಸಿದ್ದಾರೆ. ಜೂನ್ 25 ರಂದು ನವದೆಹಲಿಯಲ್ಲಿ ಈ ಬೇಡಿಕೆಗಳ ಮೇಲೆ ನಡೆದ ಒಂದು ರಾಷ್ಟ್ರೀಯ ಸಮಾವೇಶದಲ್ಲಿ ಮಣಿಪುರದಿಂದ 10 ಸಮಾನ ಮನಸ್ಕ ರಾಜಕೀಯ ಪಕ್ಷಗಳು ಮತ್ತು ಚುನಾಯಿತ ಜಿಲ್ಲಾ ಪರಿಷತ್ ಸದಸ್ಯರು ಭಾಗವಹಿಸಿದ್ದರು.

ಸಮಾವೇಶದಲ್ಲಿ ಭಾಗವಹಿಸಿದ್ದ ಸಿಪಿಐ ಮತ್ತು ಸಿಪಿಐ(ಎಂ) ಮಣಿಪುರದ ನೊಂದ ಜನರೊಂದಿಗೆ ಸೌಹಾರ್ದವನ್ನು ಪ್ರದರ್ಶಿಸಲು, ಬುಡಮಟ್ಟದಲ್ಲಿನ ಪರಿಸ್ಥಿತಿಯ ಅಧ್ಯಯನ ಮಾಡಲು ಮತ್ತು ಅದು ಸಹಜ ಸ್ಥಿತಿಗೆ ಮರಳುವಂತೆ ಮಾಡುವ ಬಗ್ಗೆ ಅಧಿಕಾರಿಗಳೊಂದಿಗೆ ಮಾತನಾಡಲು ಜುಲೈ 6–8 ರವರೆಗೆ 5 ಸಂಸದರ ನಿಯೋಗವನ್ನು ಮಣಿಪುರಕ್ಕೆ ಕಳುಹಿಸಲು ನಿರ್ಧರಿಸಿವೆ. ನಿಯೋಗವು ಚುರಾಚಂದ್‌ಪುರ ಮತ್ತು ಇಂಫಾಲ್ ಕಣಿವೆಯಲ್ಲಿ ಎಲ್ಲಾ ಜನಾಂಗೀಯ ಸಮುದಾಯಗಳ ಜನರನ್ನು ಭೇಟಿ ಮಾಡುತ್ತದೆ. ಜುಲೈ 7 ರಂದು ಸಂಜೆ 5.00 ಗಂಟೆಗೆ ರಾಜ್ಯಪಾಲರನ್ನು ಭೇಟಿ ಮಾಡಲಿರುವ ನಿಯೋಗದ ಸದಸ್ಯರು, ಜುಲೈ 8 ರಂದು ಮಾಧ್ಯಮಗಳನ್ನು ಭೇಟಿ ಮಾಡಿ ತಮ್ಮ ಅನುಭವವನ್ನು ಹಂಚಿಕೊಳ್ಳಲಿದ್ದಾರೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿಕೆ ತಿಳಿಸಿದೆ.

ನಿಯೋಗದಲ್ಲಿ ಸಿಪಿಐ(ಎಂ) ರಾಜ್ಯಸಭಾ ಸದಸ್ಯರುಗಳಾಗಿರುವ ಬಿಕಾಶ್ ರಂಜನ್ ಭಟ್ಟಾಚಾರ್ಯ ಮತ್ತು ಜಾನ್ ಬ್ರಿಟಾಸ್ ಮತ್ತು ಸಿಪಿಐ ರಾಜ್ಯಸಭಾ ಸದಸ್ಯರುಗಳಾಗಿರುವ ಬಿನೋಯ್ ವಿಶ್ವಂ, ಸಂತೋಷ್ ಕುಮಾರ್ ಪಿ. ಮತ್ತು ಕೆ. ಸುಬ್ಬರಾಯನ್ ಇರುತ್ತಾರೆ.



ಕ್ಷುಲ್ಲಕ ಮತ್ತು ಕೇಂದ್ರದ ನಡುವೆ ಮರೆಯಾದ ಅಂತರ

ಬಿಜೆಪಿ ಸರಕಾರ ಹೇಳೋದೆ ಒಂದು–ಮಾಡೋದೇ ಇನ್ನೊಂದು

ಅಮೆರಿಕದ ಮಾಧ್ಯಮದ ಜೊತೆ ನಡೆಸಿದ ಅಪರೂಪದ ಸಂವಾದದಲ್ಲಿ ಪ್ರಧಾನಿ ನರೇಂದ್ರ ಮೋದಿಯವರು 'ಜಾತಿ, ಜನಾಂಗ, ಧರ್ಮ, ವಯಸ್ಸು ಅಥವಾ ಭಾರತದಲ್ಲಿನ ಭೌಗೋಳಿಕ ಸ್ಥಳವನ್ನು ಆಧರಿಸಿ ಯಾವುದೇ ತಾರತಮ್ಯ ನಡೆಯುತ್ತಿಲ್ಲ' ಎಂದು ಬಡಾಯಿ ಕೊಚ್ಚಿಕೊಂಡಿದ್ದಾರೆ. ಇವೆಲ್ಲವೂ ಸುಳ್ಳು ಎನ್ನುವುದು ಅವರು ಹಾಗೆ ಹೇಳಿದ ಬೆನ್ನಲ್ಲೇ ಸಾಬೀತಾಗಿದೆ. ಈದ್ ಸಂದರ್ಭದಲ್ಲಿ ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ ನಡೆದ ಸರಣಿ ದಾಳಿಗಳು ಮತ್ತು ಅಂಥ ಆಕ್ರಮಣಗಳನ್ನು ನಡೆಸಿದವರಿಗೆ ಸರ್ಕಾರವೇ ನೀಡಿದ ಪ್ರತ್ಯಕ್ಷ ಅಥವಾ ಪರೋಕ್ಷ ರಕ್ಷಣೆಯು ಬಿಜೆಪಿ ಸರಕಾರದ ನುಡಿ ಮತ್ತು ನಡೆ ನಡುವೆ ದೊಡ್ಡ ಅಂತರವಿದೆ ಎಂಬುದಕ್ಕೆ ಸಾಕ್ಷಿಯಾಗಿದೆ.

ಪ್ರಕಾಶ್ ಕಾರತ್

ಪ್ರಧಾನ ಮಂತ್ರಿ ದೊಡ್ಡದಾಗಿ ಬಡಾಯಿ ಕೊಚ್ಚಿಕೊಂಡ ಕೇವಲ 24 ಗಂಟೆಯೊಳಗೆ, ಕಾಶ್ಮೀರದ ಪುಲ್ವಾಮಾ ಜಿಲ್ಲೆಯ ಝದೂರಾ ಗ್ರಾಮದ ಮಸೀದಿಗೆ ಭಾರತೀಯ ಸೇನೆಯ ಮೇಜರ್ ಒಬ್ಬರ ನೇತೃತ್ವದಲ್ಲಿ ನುಗ್ಗಿದ ಸೈನಿಕರು 'ಜೈ ಶ್ರೀ ರಾಮ್' ಘೋಷಣೆ ಕೂಗುವಂತೆ ಒತ್ತಾಯಿಸಿದರು. ದಕ್ಷಿಣ ಕಾಶ್ಮೀರದ ಈ ಗ್ರಾಮದ ಅತಿ ದೊಡ್ಡ ಮಸೀದಿಯಾದ ಜಾಮಿಯಾ ಮಸೀದಿಯಲ್ಲಿ ಅವರು ದಾಂಧಲೆಯನ್ನೂ ನಡೆಸಿದರು ಎನ್ನಲಾಗಿದೆ. ಈ ಮೂಲಕ ಧಾರ್ಮಿಕ ಸ್ವಾತಂತ್ರ್ಯದ ಮೇಲೆ ದೌರ್ಜನ್ಯ ನಡೆಸಲಾಗಿದೆ. ಸೇನೆಯಂಥ ಒಂದು ಜಾತ್ಯತೀತ ಸಂಸ್ಥೆ ಸಂವಿಧಾನವನ್ನು ಉಲ್ಲಂಘಿಸಿ ಈ ರೀತಿಯಲ್ಲಿ ಪಕ್ಷಪಾತದಿಂದ ವರ್ತಿಸಿದ್ದು, ಈಗಿನ ಆಳುವ ವ್ಯವಸ್ಥೆಯಡಿಯಲ್ಲಿ ಪ್ರಭುತ್ವದ ಸಂಸ್ಥೆಗಳು ಮಹತ್ವ ಕಳೆದುಕೊಂಡು ದುರ್ಬಲವಾಗುತ್ತಿರುವುದನ್ನು ಬಹುವಾಗಿ ಸೂಚಿಸುತ್ತದೆ.

ಅಮೆರಿಕದ ಮಾಜಿ ಅಧ್ಯಕ್ಷ ಬರಾಕ್ ಒಬಾಮಾ ಮಾಡಿದ ಟೀಕೆಯಿಂದ ಮೋದಿಯನ್ನು ರಕ್ಷಿಸುವಲ್ಲಿ ಹಾಗೂ ಸರಕಾರದ ಸಹಿಷ್ಣುತೆ ನೀತಿಯನ್ನು ವಿವರಿಸುವಲ್ಲಿ ಹಣಕಾಸು ಮಂತ್ರಿ ನಿರ್ಮಲಾ ಸೀತಾರಾಮನ್ ವ್ಯಸ್ತರಾಗಿದ್ದಾಗಲೇ ಮುಂಬಯಿಯಿಂದ 150 ಕಿ.ಮೀ. ದೂರದ ಒಂದು ಊರಿನಲ್ಲಿ, ಗೋಮಾಂಸ ಸಾಗಿಸುತ್ತಿದ್ದ ಎಂಬ ಕಾರಣಕ್ಕೆ ಯುವಕನೊಬ್ಬನನ್ನು ಕೊಚ್ಚಿ ಕೊಲೆ ಮಾಡಲಾಯಿತು. ಮುಂಬಯಿ ಮತ್ತು ನಾಸಿಕ್ ನಡುವಿನ ಆ ಊರಿನಲ್ಲಿ ಕೇವಲ 15 ದಿನದ ಅಂತರದಲ್ಲಿ ಈ ರೀತಿಯಲ್ಲಿ ನಡೆದ ಎರಡನೇ ಕೊಲೆ ಪ್ರಕರಣ ಇದಾಗಿದೆ. ಈ ಎರಡೂ ಪ್ರಕರಣಗಳಲ್ಲಿ ಆಕ್ರಮಣಕ್ಕೆ ಒಳಗಾದವರು ಪಸ್ಮಾಂದ ಮುಸ್ಲಿಮರಾಗಿದ್ದಾರೆ. ತಮ್ಮನ್ನು ತಾವು ಪಸ್ಮಾಂದ ಮುಸಲ್ಮಾನರ ಹಿತ ರಕ್ಷಕರೆಂದು ಹೇಳಿಕೊಳ್ಳುವ ಆರೆಸ್ಸೆಸ್–ಬಿಜೆಪಿ ಕೂಟದ ದ್ವಂದ್ವ ನೀತಿಯನ್ನು ಇದು ಬಯಲುಗೊಳಿಸಿದೆ. ಇಲ್ಲಿ ಇಬ್ಬರೂ ಸಂತ್ರಸ್ತರು ಮಾಂಸ ಹಾಗೂ ತರಕಾರಿ ಸಾಗಿಸುವ ದಿನಗೂಲಿಗಳಾಗಿದ್ದು ಬಡ ಕುಟುಂಬಗಳಿಗೆ ಸೇರಿದವರಾಗಿದ್ದರು. ರಾಷ್ಟ್ರೀಯ ಬಜರಂಗದಳದ ಬ್ಯಾನರ್‌ನಡಿ ಓಡಾಡುವ, 10ರಿಂದ 15ರಷ್ಟಿದ್ದ ಸ್ವಯಂಘೋಷಿತ 'ಗೋ–ರಕ್ಷಕರ' ಗುಂಪು ಆಕ್ರಮಣ ಮಾಡಿ ಈ ಹತ್ಯೆಗಳನ್ನು ನಡೆಸಿದೆ. ಮಹಾರಾಷ್ಟ್ರ ರಾಜ್ಯದ ಪೊಲೀಸರು ಈ ಇಬ್ಬರು ಸಂತ್ರಸ್ತರ ವಿರುದ್ಧವೇ ಪ್ರಾಣಿ ಕ್ರೌರ್ಯ ತಡೆ ಕಾನೂನಿನಡಿ ಕೇಸ್ ದಾಖಲಿಸಿರುವುದು ಸರಕಾರಿ ಯಂತ್ರದ ಮೇಲೆ ಸಂಘ ಪರಿವಾರದ ಸಿದ್ಧಾಂತ ಬೀರಿರುವ ಪರಿಣಾಮ ಮತ್ತು ಆಳವಾಗುತ್ತಿರುವ ಧಾರ್ಮಿಕ ಪಕ್ಷಪಾತವನ್ನು ತೋರಿಸುತ್ತದೆ. ಶಿಂಧೆ–ಫಡ್ನವೀಸ್ ಸರಕಾರದಡಿಯಲ್ಲಿ ಸ್ವಯಂಘೋಷಿತ ಜಾಗೃತಿ ಪಡೆಗಳಿಗೆ ಇನ್ನಷ್ಟು ಬೆಂಬಲ ಸಿಕ್ಕಿದೆ. ಗೋ ರಕ್ಷಕರು ಆಕ್ರಮಣಗಳನ್ನು ನಡೆಸುವುದರಿಂದ ಈಗ ಕೊಲೆಗಡುಕರಾಗಿ ಬಡ್ತಿ ಪಡೆದಿರುವುದು ಇದರ ಪರಿಣಾಮವೇ ಆಗಿದೆ. ಅದು ಮಹಾರಾಷ್ಟ್ರದಲ್ಲಿ ಮೊದನೆಯದಾಗಿದೆ. ಎರಡನೇ ಘಟನೆಯ ನಂತರ, 'ಸುಳ್ಳು ಆರೋಪಗಳ' ಮೇಲೆ ಗೋ ರಕ್ಷಕರಿಗೆ ಕಿರುಕುಳ ಕೊಡದಂತೆ ಪೊಲೀಸರಿಗೆ ಮಹಾರಾಷ್ಟ್ರ ವಿಧಾನ ಸಭೆಯ ಸ್ಪೀಕರ್ ನಿರ್ದೇಶನ ನೀಡಿದ್ದಾರೆ. ಹಾಗೆ ಮಾಡಲು ಅವರಿಗೆ ಯಾವುದೇ ಅಧಿಕಾರವಿಲ್ಲ. ಇವರೆಲ್ಲರೂ ಯಾವ ರೀತಿಯಲ್ಲಿ 'ಗೋ ರಕ್ಷಕರ' ಬೆನ್ನಿಗೆ ನಿಂತಿದ್ದಾರೆ ಮತ್ತು ಅವರ ರಕ್ಷಣೆಗೆ ತಮ್ಮ ಸಾಂವಿಧಾನಿಕ ಸ್ಥಾನಗಳನ್ನು ಕೂಡ ಬಳಸಿಕೊಳ್ಳುತ್ತಾರೆ ಎನ್ನುವುದನ್ನು ಇದು ತೋರಿಸುತ್ತದೆ.

ಹಿಂದೂ ಹಬ್ಬಗಳೇ ಇರಲಿ, ಮುಸ್ಲಿಂ ಹಬ್ಬಗಳೇ ಇರಲಿ, ಹಿಂದೂತ್ವ ಸಂಘಟನೆಗಳು ನಡೆಸುವ ಆಕ್ರಮಣಗಳು ಅಲ್ಪಸಂಖ್ಯಾತರಿಗೆ ಆಘಾತಕಾರಿ ಸಂದೇಶ ಸಾರುವ ಉದ್ದೇಶ ಹೊಂದಿರುತ್ತವೆ: 'ನಿಮಗೆ ಯಾವುದೇ ಹಕ್ಕುಗಳಿಲ್ಲ. ಇಲ್ಲಿ ಇರಬೇಕೆಂದರೆ ನಮ್ಮ ನಿರ್ದೇಶನಗಳಿಗೆ ತಕ್ಕಂತೆ ನಡೆದುಕೊಳ್ಳಬೇಕು. ಯಾರೂ ನಿಮ್ಮನ್ನು ರಕ್ಷಿಸಲಾರರು' ಎಂಬುದೇ ಆ ಸಂದೇಶ.



ದೇಶದಾದ್ಯಂತ ಈ ರೀತಿಯಲ್ಲಿ ಕೊಚ್ಚಿ ಕೊಲ್ಲುವ ಆಘಾತಕಾರಿ ಪ್ರಕರಣಗಳು ಕಳವಳಕಾರಿಯಾಗಿದೆ. ಮಹಾರಾಷ್ಟ್ರದ ಈ ಘಟನೆಗಳ ಕೆಲವು ದಿನಗಳ ನಂತರ, ಬಿಹಾರದ ಶರಣ್ ಜಿಲ್ಲೆಯಲ್ಲಿ ಈದ್ ಸಂದರ್ಭದಲ್ಲಿ ಇನ್ನೊಂದು ಆಕ್ರಮಣ ನಡೆದಿದೆ. ಈ ಘಟನೆಯಲ್ಲಿ, ಸಮೀಪದ ಫ್ಯಾಕ್ಟರಿಗೆ ಪ್ರಾಣಿಗಳ ಎಲುಬುಗಳನ್ನು ಸಾಗಿಸುತ್ತಿದ್ದ 55 ವರ್ಷದ ಅಂಗವಿಕಲ ಮುಸ್ಲಿಂ ಚಾಲಕನನ್ನು ಕೊಚ್ಚಿ ಕೊಲ್ಲಲಾಗಿದೆ. ಕಳೆದ 50 ವರ್ಷಗಳಿಂದ ನಡೆಯುತ್ತಿರುವ ಔಷಧಿ ತಯಾರಿಕೆ ಕಾರ್ಖಾನೆಗೆ ಮದ್ದು ತಯಾರಿಯಲ್ಲಿ ಅಗತ್ಯವಾದ ಎಲುಬುಗಳನ್ನು ಆತ ಸಾಗಿಸುತ್ತಿದ್ದ. ಉತ್ತರಾಖಂಡದ ಪುರೋಲಾದಲ್ಲಿ ಮುಸ್ಲಿಂ ಅಂಗಡಿಕಾರರನ್ನು ಟಾರ್ಗೆಟ್ ಮಾಡಿ ಅಂಗಡಿಗಳನ್ನು ಮುಚ್ಚಿ ಊರು ತೊರೆದು ಹೋಗುವಂತೆ ಮಾಡಿದ ನಂತರ ಅಲ್ಲಿ ಈಗ ಉಳಿದಿರುವ ಮುಸ್ಲಿಮರನ್ನು ಕೂಡ ಪೀಡಿಸಲಾಗುತ್ತಿದೆ. ಈದ್ ಸಂದರ್ಭದಲ್ಲಿ ಮುಸ್ಲಿಮರು ತಮ್ಮ ಮನೆಗಳಂಥ ಖಾಸಗಿ ಜಾಗಗಳಲ್ಲಿ ಕೂಡ ನೆರೆದು ನಮಾಜ್ ಮಾಡದಂತೆ ವಿಶ್ವ ಹಿಂದೂ ಪರಿಷತ್ ಮುಸ್ಲಿಮರಿಗೆ ಎಚ್ಚರಿಸಿದೆ. ಹಾಗೆ ಮಾಡುವುದು 'ಪ್ರಚೋದನಕಾರಿ ಕೃತ್ಯ' ಎನ್ನುವುದು ಹಿಂದೂ ಸಂಘಟನೆಯ ವ್ಯಾಖ್ಯಾನವಾಗಿದೆ. ಅದರ ಪರಿಣಾಮವಾಗಿ, ಹಬ್ಬದ ದಿನದಂದು ಪ್ರಾರ್ಥನೆ ಮಾಡಲು ಮುಸ್ಲಿಮರು ಪುರೋಲಾ ಮತ್ತು ಬಾರ್ಕೋಟ್ ಪಟ್ಟಣಗಳಿಂದ 40 ಕಿ.ಮೀ. ದೂರದ ಕಾಡುಗಳಿಗೆ ಹೋಗುವ ಬಲವಂತಕ್ಕೆ ಒಳಗಾದರು.

ಈದ್ ದಿನದಂದು ಗುಜರಾತ್‌ನ ಮುಂದ್ರಾದಲ್ಲಿ ಖಾಸಗಿ ಶಾಲೆಯೊಂದರ ಪ್ರಿನ್ಸಿಪಾಲ್‌ನನ್ನು ಅಮಾನತು ಮಾಡಲಾಯಿತು. ಈದ್–ಅಲ್–ಅಧಾ ಸಂದರ್ಭ ಪ್ರದರ್ಶಿಸಲಾದ ನಾಟಕದಲ್ಲಿ ವಿದ್ಯಾರ್ಥಿಗಳು ತಲೆಬುರುಡೆ ಟೋಪಿಗಳನ್ನು ಧರಿಸಿದ ವಿಡಿಯೋ ದೃಶ್ಯಗಳು ಸಾಮಾಜಿಕ ಮಾಧ್ಯಮದಲ್ಲಿ ವ್ಯಾಪಕವಾಗಿ ಹರಿದಾಡಿದ ಮೇಲೆ ಈ ಕ್ರಮ ಕೈಗೊಳ್ಳಲಾಗಿದೆ. ಪ್ರಿನ್ಸಿಪಾಲ್ ವಿರುದ್ಧ ಕ್ರಮ ಕೈಗೊಳ್ಳುವಂತೆ ಜಿಲ್ಲಾ ಶಿಕ್ಷಣಾಧಿಕಾರಿ ಶಾಲಾ ಆಡಳಿತ ವರ್ಗದ ಮೇಲೆ ಒತ್ತಡ ಹೇರಿದ್ದರು. 'ಮುಸ್ಲಿಮರು ಧರಿಸಿದ್ದನ್ನು ಧರಿಸುವಂತೆ ಹಿಂದೂ ವಿದ್ಯಾರ್ಥಿಗಳಿಗೆ ಸೂಚಿಸಿದ್ದು ಒಂದು 'ಹೀನ ಕೃತ್ಯ' ಆಗಿದೆ' ಎಂದು ಜಿಲ್ಲಾ ಪ್ರಾಥಮಿಕ ಶಿಕ್ಷಣಾಧಿಕಾರಿ ತನ್ನ ಕೃತ್ಯವನ್ನು ಸಮರ್ಥಿಸಿಕೊಂಡಿದ್ದಾನೆ. ಧಾರ್ಮಿಕ ದ್ವೇಷವು ಹೇಗೆ ಸಮಾಜದಲ್ಲಿ ನುಸುಳಿಕೊಂಡಿದೆ ಎನ್ನುವುದಕ್ಕೆ ಇದು ಇನ್ನೊಂದು ಉದಾಹರಣೆಯಾಗಿದೆ. ಬಹಳ ಮುಖ್ಯವಾಗಿ, ಬಿಜೆಪಿ ಆಡಳಿತದ ರಾಜ್ಯಗಳಲ್ಲಿ ಸರಕಾರಿ ಅಧಿಕಾರಿಗಳು ಸೈದ್ಧಾಂತಿಕವಾಗಿ ಭ್ರಷ್ಟರಾಗಿರುವುದನ್ನೂ ಇದು ತೋರಿಸುತ್ತದೆ. ಧಾರ್ಮಿಕ ದ್ವೇಷ ಹರಡುವುದು ಈಗ ಕ್ಷುಲ್ಲಕ ಶಕ್ತಿಗಳಿಗೆ ಮಾತ್ರ ಸೀಮಿತವಾಗಿಲ್ಲ.

'ಭಾರತದಲ್ಲಿ ಹಲವು ಹುಸೇನ್ ಒಬಾಮಾರನ್ನು ನಾವು ನೋಡಿಕೊಳ್ಳುತ್ತೇವೆ' ಎಂಬುದಾಗಿ ಅಸ್ಸಾಂ ಮುಖ್ಯಮಂತ್ರಿ ಹಿಮಂತ್ ಬಿಶ್ವ ಶರ್ಮಾರಂಥವರೇ ಹೇಳಿರುವಾಗ 'ಕ್ಷುಲ್ಲಕ' ಮತ್ತು 'ಕೇಂದ್ರ' ನಡುವೆ ಯಾವುದೇ ವ್ಯತ್ಯಾಸ ಉಳಿದಿಲ್ಲ. ಮುಸ್ಲಿಮರನ್ನು ಸಮಾನರೆಂದು ಪರಿಗಣಿಸಲಾಗುವುದಿಲ್ಲ. ಅವರನ್ನು ದ್ವಿತೀಯ ದರ್ಜೆ ಪ್ರಜೆಗಳೆಂದು ಪರಿಗಣಿಸುವುದಾಗಿ ಶರ್ಮಾ ಸ್ಪಷ್ಟಪಡಿಸಿದ್ದಾರೆ. ಈದ್ ಹಬ್ಬದ ಸಮಯದಲ್ಲಿ ನಡೆದಂಥ ಈ ಮೇಲೆ ಚರ್ಚಿಸಲಾದ ಘಟನೆಗಳು ಕಾಕತಾಳೀಯವಲ್ಲ. ಹಿಂದೂ ಹಬ್ಬಗಳೇ ಇರಲಿ, ಮುಸ್ಲಿಂ ಹಬ್ಬಗಳೇ ಇರಲಿ, ಹಿಂದೂತ್ವ ಸಂಘಟನೆಗಳು ನಡೆಸುವ ಆಕ್ರಮಣಗಳು ಅಲ್ಪಸಂಖ್ಯಾತರಿಗೆ ಆಘಾತಕಾರಿ ಸಂದೇಶ ಸಾರುವ ಉದ್ದೇಶ ಹೊಂದಿರುತ್ತವೆ: 'ನಿಮಗೆ ಯಾವುದೇ ಹಕ್ಕುಗಳಿಲ್ಲ. ಇಲ್ಲಿ ಇರಬೇಕೆಂದರೆ ನಮ್ಮ ನಿರ್ದೇಶನಗಳಿಗೆ ತಕ್ಕಂತೆ ನಡೆದುಕೊಳ್ಳಬೇಕು. ಯಾರೂ ನಿಮ್ಮನ್ನು ರಕ್ಷಿಸಲಾರರು' ಎಂಬುದೇ ಆ ಸಂದೇಶ.

ಸಮಾಜವನ್ನು ಕೋಮುವಾದದ ಆಧಾರದಲ್ಲಿ ಧೃವೀಕರಿಸಿ ರಾಜಕೀಯ ಲಾಭ ಪಡೆಯುವ ಆರೆಸ್ಸೆಸ್–ಬಿಜೆಪಿ ಹುನ್ನಾರ ಅದಾಗಿದೆ. ಚುನಾವಣೆ ಸಮೀಪಿಸುತ್ತಿರುವಂತೆ ಇಂಥ ಚಟುವಟಿಕೆಗಳು ಬಿರುಸುಗೊಳ್ಳುತ್ತವೆ. ಪ್ರಭುತ್ವದ ಅಧಿಕಾರವನ್ನು ಬಳಸಿಕೊಂಡು ಆಡಳಿತಶಾಹಿಯ ವಿವಿಧ ವಿಭಾಗಗಳು ಮತ್ತುಅಧಿಕಾರಿಗಳ ನಡುವೆ ತಮ್ಮ ಸೈದ್ಧಾಂತಿಕ ಪ್ರಭಾವವನ್ನು ಅವರು ಹರಡುತ್ತಾರೆ ಹಾಗೂ ತಮ್ಮ ತಾಳಕ್ಕೆ ತಕ್ಕಂತೆ ಕುಣಿಯುವಂತೆ ಮಾಡುತ್ತಾರೆ. ಪ್ರಜಾಪ್ರಭುತ್ವ ಮತ್ತು ಸಹಿಷ್ಣುತೆ ಬಗ್ಗೆ ಅಂತಾರಾಷ್ಟ್ರೀಯ ವೀಕ್ಷಕ ಸಮುದಾಯವನ್ನು ಉದ್ದೇಶಿಸಿ ಪ್ರಧಾನಿ ಮೋದಿ ಏನೇ ಹೇಳಿದ್ದರೂ ಅಲ್ಪಸಂಖ್ಯಾತರ ಮೇಲಿನ ಈ ದಾಳಿಗಳನ್ನು ಮರೆಮಾಚಲಾಗದು. ಅಲ್ಪಸಂಖ್ಯಾತರ ಮೇಲಿನ ಪ್ರತಿಯೊಂದು ದಾಳಿಯನ್ನು ವಿರೋಧಿಸುವುದು ಮತ್ತು ಪ್ರತಿರೋಧಿಸುವುದು ಪ್ರಜಾಪ್ರಭುತ್ವ ಹಾಗೂ ಜಾತ್ಯತೀತತೆ ರಕ್ಷಣೆಗೆ ಅಗತ್ಯವಾಗಿದೆ. ಫ್ಯಾಸಿಸ್ಟ್‌ವಾದಿ ಹಿಂದೂತ್ವ ಶಕ್ತಿಗಳ ಹಿಂಸಾತ್ಮಕ ಕ್ರೌರ್ಯಗಳ ವಿರುದ್ಧ ಜನರನ್ನು ಅಣಿನೆರೆಯಿಸಲು ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ಸತತವಾಗಿ ಪ್ರಯತ್ನಿಸಬೇಕು.


ಅನು: ವಿಶ್ವ

ಚಂದಾ ವಿವರ

ವಾರ್ಷಿಕ ಚಂದಾ : ರೂ.500.00
ದ್ವೈವಾರ್ಷಿಕ ಚಂದಾ : ರೂ.1000.00

ಚಂದಾದಾರರು ಸಂರ್ಕಿಸಿ :
ಕ್ರಿಯಾ ಪ್ರಕಾಶನ, ಸೂರಿ ಭವನ
ನಂ.40/5, 2ನೇ 'ಬಿ' ಮುಖ್ಯರಸ್ತೆ, 16ನೇ ಅಡ್ಡರಸ್ತೆ, ಸಂಪಂಗಿರಾಮನಗರ,
ಬೆಂಗಳೂರು 560027
ಕಛೇರಿ ದೂರವಾಣಿ:
080–22234369
ಫೋನ್:
9448578021, 9483966467

ಬಜೆಟ್: ಅಲ್ಪ ಸಾಂತ್ವನ ಇಳಿಯದ ಹೊರೆ ಶ್ರಮಜೀವಿ ಹಿತಗಳಿಗೆ ಮೌನ! ಕಾರ್ಪೊರೇಟ್ ಪರ ನೀತಿಗಳ ಮುಂದುವರಿಕೆ



ಯು. ಬಸವರಾಜ

ಚುನಾವಣೆಯಲ್ಲಿ ಗೆದ್ದು ಬಂದರೆ ತಾನು ಜನತೆಗೆ ನೀಡಿದ್ದ ಐದು ಖಾತರಿ ಭರವಸೆ (ಗ್ಯಾರಂಟಿ) ಗಳನ್ನು ಜಾರಿಗೆ ತರುವುದಾಗಿ ಕಾಂಗ್ರೆಸ್ ಪಕ್ಷ ಹೇಳಿತ್ತು. ಅದರಂತೆ ಅದು ಅಧಿಕಾರ ಪಡೆದ ಕೂಡಲೇ ಆ ಕುರಿತು ಆದೇಶಗಳನ್ನು ಹೊರಡಿಸಿತು. ಇದು ರಾಜ್ಯದಾದ್ಯಂತ ಹಾಗೂ ದೇಶವ್ಯಾಪ್ತಿಯಾಗಿ ಚರ್ಚೆಗೊಳಗಾಯಿತು. ಮುಖ್ಯವಾಗಿ, ಈ ಗ್ಯಾರಂಟಿಗಳ ಜಾರಿಗಾಗಿ ಸರಕಾರ ಎಲ್ಲಿಂದ ಹಣ ತರಲಿದೆ ? ಮತ್ತು ಅವುಗಳನ್ನು ಜಾರಿಗೊಳಿಸಿದಲ್ಲಿ ರಾಜ್ಯವು ಆರ್ಥಿಕವಾಗಿ ದಿವಾಳಿಯಾಗದೇ? ಎಂಬ ಪ್ರಶ್ನೆಗಳನ್ನು ಅದು ಎದುರಿಸಿತು. ಇಂತಹ ಅಭಿಪ್ರಾಯ ವ್ಯಕ್ತ ಪಡಿಸಿದವರಲ್ಲಿ ಸ್ವತಃ ಪ್ರಧಾನ ಮಂತ್ರಿಗಳೂ ಸೇರಿದ್ದರು. ಹೀಗಾಗಿ ಈ ಬಜೆಟ್ ಜನತೆಯ ಕುತೂಹಲಕ್ಕೂ ಕಾರಣವಾಗಿತ್ತು.

ಇದೀಗ ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯನವರು ಈ ಎಲ್ಲದಕ್ಕೂ ತೆರೆ ಎಳೆದು 2023–24 ರ ಸಾಲಿಗೆ ಸುಮಾರು 85 ಸಾವಿರ ಕೋಟಿ ರೂ.ಗಳ ಋಣ ಭಾರದ 3.27 ಲಕ್ಷ ಕೋಟಿ ರೂಗಳ ರಾಜ್ಯ ಬಜೆಟ್ ನ್ನು ವಿಧಾನ ಸಭೆಯಲ್ಲಿ ಮಂಡಿಸಿದ್ದಾರೆ.

ಖಂಡಿತಾ, ಇದೊಂದು ಬಹು ನಿರೀಕ್ಷಿತ ಬಜೆಟ್ ಆಗಿತ್ತು. ಬಜೆಟ್ ನೋಡಿದ ನಂತರ ರಾಜ್ಯದ ಜನತೆ ಸಂತೋಷ, ನಿರಾಶೆ ಎರಡು ರೀತಿಯ ಭಾವನೆಗಳನ್ನು ವ್ಯಕ್ತ ಪಡಿಸಿದ್ದಾರೆ.


ಕಾಂಗ್ರೆಸ್ ಪಕ್ಷ ತಾನು ಚುನಾವಣೆಯಲ್ಲಿ ನೀಡಿದ ವಾಗ್ದಾನಗಳಲ್ಲಿ ಕೆಲವನ್ನು ಈ ಬಜೆಟ್ ಮೂಲಕ ಈಡೇರಿಸಿದಂತಾಗಿದೆ ಯೆಂದು ಹರ್ಷವನ್ನು ವ್ಯಕ್ತ ಪಡಿಸಿದೆ.

ವಿರೋಧ ಪಕ್ಷವಾದ ಬಿಜೆಪಿ ಈ ಬಜೆಟ್ ಮೂಲಕ ರಾಜ್ಯ ಸರಕಾರ ಜನತೆಯ ಮೇಲೆ ಸುಮಾರು 85 ಸಾವಿರ ಕೋಟಿ ರೂ.ಗಳ ಋಣಭಾರವನ್ನು ಹೇರಿದೆಯೆಂದು ಟೀಕಿಸಿದೆ. ಹಾಗೇ ಅದು ಟೀಕಿಸುವಾಗ ಹಿಂದೆ ರಾಜ್ಯದ ಮೇಲೆ ಬಲವಂತವಾಗಿ ಹೇರಲಾಗಿದ್ದ ಅದರ (ಬಿಜೆಪಿ) ಸರಕಾರವು ನಾಲ್ಕು ವರ್ಷಗಳಲ್ಲಿ ಸುಮಾರು 2.55 ಲಕ್ಷ ಕೋಟಿ ರೂ.ಗಳ ಋಣ ಭಾರ ಹೇರಿದ್ದುದನ್ನು ಅದು ಜಾಣತನದಿಂದ ಮರೆಮಾಚಿದೆ.

ಬಹು ನಿರೀಕ್ಷೆಯ ಹಿನ್ನೆಲೆ

ಕಳೆದ ನಾಲ್ಕು ವರ್ಷಗಳ ಕಾಲ ರಾಜ್ಯದ ಮೇಲೆ ಬಲವಂತವಾಗಿ ಹೇರಲ್ಪಟ್ಟ ಬಿಜೆಪಿ ನೇತೃತ್ವದ ರಾಜ್ಯ ಸರಕಾರ ಮತ್ತು ಒಕ್ಕೂಟ ಸರಕಾರಗಳು ದೇಶ ಹಾಗೂ ರಾಜ್ಯದ ಜನತೆಯ ಮೇಲೆ ಇನ್ನಿಲ್ಲದ ಬೆಲೆ ಏರಿಕೆಯನ್ನು ಹೇರಿ ಜನತೆ ತತ್ತರಿಸುವಂತೆ ಮಾಡಿದ್ದವು. ವ್ಯವಸಾಯವನ್ನು ರೈತರ ಕೈಯ್ಯಿಂದ ಕಿತ್ತು ಕಾರ್ಪೋರೇಟ್ ಕಂಪನಿಗಳಿಗೆ ವಹಿಸಿ ಕೊಡುವ ಮೂರು ಕೃಷಿ ಕಾಯ್ದೆಗಳಾದ ಭೂ ಸುಧಾರಣಾ ತಿದ್ದುಪಡಿ ಕಾಯ್ದೆ– 2020, ಎಪಿಎಂಸಿ ತಿದ್ದುಪಡಿ ಕಾಯ್ದೆ – 2020 ಹಾಗೂ ಜಾನುವಾರು ಹತ್ಯೆ ನಿಷೇಧ ತಿದ್ದುಪಡಿ ಕಾಯ್ದೆ – 2020 ನ್ನು ಬಲವಂತವಾಗಿ ಹೇರಿದ್ದವು. ಆದರೆ 554 ರೈತ ಸಂಘಟನೆಗಳ ನೇತೃತ್ವದಲ್ಲಿ ದೇಶದ ಎಲ್ಲ ಕಾರ್ಮಿಕ ಸಂಘಟನೆಗಳ ಬೆಂಬಲದೊಂದಿಗೆ ದೆಹಲಿ ಸುತ್ತಲೂ 13 ತಿಂಗಳ ಕಾಲ ನಿರಂತರವಾಗಿ ನಡೆಸಿದ ರೈತರ ಚಾರಿತ್ರಿಕ ಹಾಗೂ ಸಮರ ಶೀಲ ಹೋರಾಟಕ್ಕೆ ಮಣಿದು, ಪ್ರಧಾನಿ ನರೇಂದ್ರ ಮೋದಿಯವರು ಜಗತ್ತಿನ ಮುಂದೆ ಮಂಡಿಯೂರಿ ಕ್ಷಮೆ ಕೋರಿ ಈ ಕಾಯ್ದೆಗಳನ್ನು ವಾಪಾಸು ಪಡೆದಿದ್ದೀಗ ಇತಿಹಾಸ. ಆದರೇ ಕರ್ನಾಟಕದ ಬಿಜೆಪಿ ಸರಕಾರ ಅವುಗಳನ್ನು ಹಿಂಪಡೆಯದೇ ಉದ್ಧಟತನವನ್ನು ಮೆರೆದಿತ್ತು. ಇದರಿಂದ ರೈತ ವಲಯದಲ್ಲಿ ತೀವ್ರ ಪ್ರತಿರೋಧ ಮತ್ತು ಅಸಮಾಧಾನ ಬೆಳೆದಿತ್ತು.

ಜಮೆ- ರೂಪಾಯಿ ಎಷ್ಟು ಭಾಗ ಯಾವುದರಿಂದ? (ಪೈಸೆಗಳಲ್ಲಿ)



ಅದೇ ರೀತಿ, ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೊಳಿಸಿದ್ದರಿಂದ ಶೈಕ್ಷಣಿಕ ವಲಯದಲ್ಲಿ ಹಾಗೂ ಸಾಮಾಜಿಕ ವಲಯಗಳಲ್ಲಿ ಶಿಕ್ಷಣದ ಹಾಗೂ ಉದ್ಯೋಗದ ಹಕ್ಕು ಕಳೆದುಕೊಳ್ಳುವ ಭೀತಿ ಉಂಟಾಗಿತ್ತು. ರಾಜ್ಯಕ್ಕೆ ಕಾರ್ಪೋರೇಟ್ ಬಂಡವಾಳವನ್ನು ಸ್ವಾಗತಿಸುವ ಭರದಲ್ಲಿ ಕಾರ್ಮಿಕರ ಹಕ್ಕುಗಳನ್ನು ಗಾಳಿಗೆ ತೂರಲಾಗಿತ್ತು. ಕಾರ್ಮಿಕರ ಶ್ರಮವನ್ನು ಯಥೇಚ್ಛವಾಗಿ ಲೂಟಿಗೊಳಪಡಿಸಲು ಕಾರ್ಖಾನೆಗಳ ಕಾಯ್ದೆಗೆ ತಿದ್ದುಪಡಿ ತರಲಾಗಿತ್ತು. ದುಡಿಮೆಯ ಅವಧಿಯನ್ನು 8ತಾಸುಗಳಿಂದ 12ತಾಸುಗಳಿಗೆ ಏರಿಸಿತ್ತು. ಅದೇ ರೀತಿ, ಒಕ್ಕೂಟ ಸರಕಾರ ಕಾರ್ಮಿಕ ವಿರೋಧಿ ನಾಲ್ಕು ಕಾರ್ಮಿಕ ಸಂಹಿತೆಗಳ ಜಾರಿಗೆ ಕ್ರಮ ವಹಿಸಿತ್ತು. ಅದೇ ಸಂದರ್ಭದಲ್ಲಿ, ಗೌರವ ವೇತನಕ್ಕೆ ದುಡಿಯುವವರು, ಗುತ್ತಿಗೆ ಆಧಾರದಲ್ಲಿ ಅತ್ಯಂತ ಕಡಿಮೆ ವೇತನಕ್ಕೆ ದುಡಿಯುವವರು, ಹಳೆಯ ಪಿಂಚಣಿ ಯೋಜನೆಗಾಗಿ ಒತ್ತಾಯಿಸುವ ನೌಕರರು, ಗುತ್ತಿಗೆ ಕಾಮಗಾರಿಗಳಲ್ಲಿ ನೀಡ ಬೇಕಾದ ಶೇಕಡಾ 40 ಕಮಿಷನ್ ಭ್ರಷ್ಟತೆಯ ವಿರುದ್ಧ ಧ್ವನಿ ಎತ್ತಿದ ಗುತ್ತಿಗೆದಾರರೂ ಸೇರಿದಂತೆ ಎಲ್ಲ ದುಡಿಯುವ ಜನತೆ ತಮ್ಮ ಅಸಮಾದಾನಗಳನ್ನು ಚಳುವಳಿಗಳ ಮೂಲಕ ಹೊರಗೆಡಹಿದ್ದರು. ಈ ಅಸಮಾಧಾನದ ದಿಕ್ಕು ತಪ್ಪಿಸಲು ಆರ್.ಎಸ್.ಎಸ್. ಅಧಿಕಾರ ರೂಢ ಬಿಜೆಪಿ ಮತ್ತು ಸರಕಾರಗಳು ಇತರೆ ಮತಾಂಧ ಶಕ್ತಿಗಳ ಜೊತೆ ಸೇರಿ ಕೋಮು ಆಧಾರದಲ್ಲಿ ರಾಜ್ಯವನ್ನು ವಿಭಜಿಸಿ ಆಳಲು ಗಂಭೀರ ಪ್ರಯತ್ನ ವನ್ನು ನಡೆಸಿದವು. ಇವು ಅಲ್ಪ ಸಂಖ್ಯಾತ ಸಮುದಾಯಗಳ ಮೇಲೆ, ಬುದ್ಧಿ ಜೀವಿ ವಲಯದ ಮೇಲೆ, ಶಿಕ್ಷಣ ಹಾಗೂ ಇತಿಹಾಸದ ಮೇಲೆ ಧಾಳಿಯನ್ನು ಸಂಘಟಿಸಿದವು. ಇವುಗಳು ಕೂಡಾ, ಸೌಹಾರ್ದತೆಗಾಗಿ ಮತ್ತು ಮತಾಂಧತೆಯ ವಿರುದ್ಧ ರಾಜ್ಯದ ಜನತೆಯನ್ನು ಒಗ್ಗೂಡುವಂತೆ ➚

ಕೃಷಿ ಉತ್ಪಾದನೆ, ಕೃಷಿ ಭೂಮಿ ರಕ್ಷಣೆ ನಿರ್ಲಕ್ಷಕ್ಕೆ ಕೆಪಿಆರ್‌ಎಸ್ ಆಕ್ಷೇಪ

ನವ ಉದಾರೀಕರಣ ಧೋರಣೆಗಳನ್ನೇ ಮುಂದುವರೆಸಿರುವ ರಾಜ್ಯ ಸರ್ಕಾರದ ಇತ್ತೀಚಿನ ಬಜೆಟ್ ಕೃಷಿ ಉತ್ಪಾದನೆ, ಕೃಷಿ ಭೂಮಿ ರಕ್ಷಣೆ ನಿರ್ಲಕ್ಷಿರುವುದನ್ನು ಹಾಗೂ ರೈತ ವಿರೋಧಿ ಭೂ ಸುಧಾರಣಾ ತಿದ್ದುಪಡಿ ಕಾಯ್ದೆ 2020, ಜಾನುವಾರು ಹತ್ಯೆ ನಿಷೇಧ ಕಾಯ್ದೆ 2020 ರ ಬಗ್ಗೆ ಮೌನ ವಹಿಸಿರುವುದಕ್ಕೆ ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್) ಬಲವಾದ ಅಕ್ಷೇಪವನ್ನು ವ್ಯಕ್ತಪಡಿಸಿದೆ.

ಸಾಲಭಾಧೆಗೆ ತುತ್ತಾಗಿರುವ ಹಾಗೂ ಕೃಷಿ ಉತ್ಪನ್ನಗಳ ಬೆಲೆ ಕುಸಿತದಿಂದ ಕಂಗೆಟ್ಟಿರುವ ರೈತ ಸಮುದಾಯಕ್ಕೆ ಯಾವುದೇ ಪರಿಹಾರ ಒದಗಿಸಿಲ್ಲ. ಕೃಷಿ ಉತ್ಪನ್ನಗಳ ಸಂಸ್ಕರಣೆ, ಮೌಲ್ಯವರ್ಧನೆಯಲ್ಲಿ ಖಾಸಗಿ ಸಹಭಾಗಿತ್ವವನ್ನು ಪ್ರೋತ್ಸಾಹಿಸುವ ಘೋಷಣೆ ಮಾಡಲಾಗಿದೆ. ಕರ್ನಾಟಕ ಭೂ ಕಂದಾಯ ಕಾಯ್ದೆ ಸೆಕ್ಷನ್ 95 ಕ್ಕೆ ತಿದ್ದುಪಡಿ ತಂದು ಸ್ವಯಂ ಘೋಷಣೆ ಮೂಲಕ, ಕೃಷಿಯೇತರ ಉದ್ದೇಶಕ್ಕೆ ಭೂ ಪರಿವರ್ತನೆಗೆ ಅವಕಾಶ ಕಲ್ಪಿಸುವ ಘೋಷಣೆ ಮಾಡಲಾಗಿದೆ. ರಾಜಸ್ವ ಸಂಗ್ರಹದ ಗುರಿ ಮುಟ್ಟಲು ಗಣಿಗಾರಿಕೆಗೆ ಉತ್ತೇಜನದ ಪ್ರಸ್ತಾಪ ಮಾಡಲಾಗಿದೆ. ಯಾರೂ ಬೇಕಾದರೂ, ಎಷ್ಟು ಬೇಕಾದರೂ ಕೃಷಿ ಭೂಮಿ ಖರೀದಿ ಮಾಡಿಕೊಳ್ಳುವ ಭೂ ಸುಧಾರಣಾ ತಿದ್ದುಪಡಿ ಕಾಯ್ದೆ 2020 ಅನ್ನು ರದ್ದುಪಡಿಸದೇ ಕೃಷಿಯೇತರ ಭೂ ಪರಿವರ್ತನೆಗೆ ಅವಕಾಶ ನೀಡುವುದು ರೈತರ ಭೂಮಿ ಹಕ್ಕಿಗೆ ಗಂಭೀರ ಧಕ್ಕೆ ಉಂಟು ಮಾಡುತ್ತದೆ ಎಂದು ಅದು ಅಭಿಪ್ರಾಯ ಪಟ್ಟಿದೆ.

ಮೋದಿ ನೇತೃತ್ವದ ಬಿಜೆಪಿ ಕೇಂದ್ರ ಸರ್ಕಾರದ ಒಕ್ಕೂಟ ವಿರೋಧಿ ನಡವಳಿಕೆ, ಕಾರ್ಪೊರೇಟ್ ಪರವಾದ ನೀತಿಗಳು, ಕಲ್ಯಾಣ ಕಾರ್ಯಕ್ರಮ ವಿರೋಧಿ ಧೋರಣೆಗಳನ್ನು ಪ್ರತಿರೋಧಿಸಲು ಅಗತ್ಯವಾದ ಕೃಷಿ ಉತ್ಪಾದನಾ ವೆಚ್ಚ ಕಡಿಮೆ ಮಾಡುವುದು ಸೇರಿದಂತೆ ಕೃಷಿ ಬಿಕ್ಕಟ್ಟಿಗೆ ಪರಿಹಾರ, ಗ್ರಾಮೀಣ ನಿರುದ್ಯೋಗ ಕಡಿಮೆ ಮಾಡುವ ಕ್ರಮಗಳು, ಬೆಲೆ ಏರಿಕೆ ನಿಯಂತ್ರಣದ ಮಧ್ಯಪ್ರವೇಶಗಳು ಹಾಗೂ ಸಹಕಾರಿ ವ್ಯವಸ್ಥೆಯನ್ನು ಬಲಪಡಿಸುವ ನಿರ್ಧಾರಗಳು ಈ ಬಜೆಟ್ ನಲ್ಲಿ ಪ್ರಾಮುಖ್ಯತೆ ಪಡೆದಿಲ್ಲ. ಆದರೂ ಹಿಂದಿನ ಬಿಜೆಪಿ ರಾಜ್ಯ ಸರ್ಕಾರದ ಅದಕ್ಷ–ಕಳಪೆ ನಿರ್ವಹಣೆ, ಆರ್ಥಿಕ ಆಶಿಸ್ತು, ಕಾರ್ಪೊರೇಟ್ ಲೂಟಿಗೆ ಮುಕ್ತ ಅವಕಾಶ ಮುಂತಾದವುಗಳಿಗೆ ಹೋಲಿಸಿದರೆ, ಐದು ಗ್ಯಾರಂಟಿ ಯೋಜನೆಗಳ ಜಾರಿಗೆ ಪ್ರಯತ್ನ ನಡೆಸಿರುವುದು ಸ್ವಾಗತಾರ್ಹವಾಗಿದೆ ಎಂದು ಸಂಘಟನೆ ತಿಳಿಸಿದೆ.

ಅನ್ನಭಾಗ್ಯ ಯೋಜನೆಗೆ ಅಗತ್ಯ ಧಾನ್ಯ ನೀಡದೇ ಕೇಂದ್ರ ಸರ್ಕಾರ ಅಸಹಕಾರ ನೀಡುತ್ತಿದೆ. ಕರ್ನಾಟಕ ರಾಜ್ಯಕ್ಕೆ ಬೇಕಾದ ಆಹಾರ ಧಾನ್ಯವನ್ನು ಭಾರತ ಆಹಾರ ನಿಗಮ (ಎಫ್‌ಸಿಐ) ದ ಒಪನ್ ಮಾರ್ಕೆಟ್ ಸೇಲ್ಸ್ ಯೋಜನೆ ಮೂಲಕ ಪಡೆಯಲು ನಿರ್ಬಂಧ ಹೇರಿಕೆ ಮೂಲಕ ಕಿರುಕುಳ ನೀಡುತ್ತಿದೆ. ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯ ಪರಿಮಿತಿ ಆಚೆಗೂ ರಾಜ್ಯದಲ್ಲಿ ಸುಮಾರು 40 ಲಕ್ಷ ಬಿಪಿಎಲ್ ಕಾರ್ಡ್ ದಾರರು ಇದ್ದಾರೆ. ಈ ಹಿನ್ನಲೆಯಲ್ಲಿ ಆಹಾರ ಭದ್ರತೆ ಒದಗಿಸಲು, ಆಹಾರ ಧಾನ್ಯಗಳ ಉತ್ಪಾದನೆಗೆ ಹೆಚ್ಚಿನ ಒತ್ತು ನೀಡುವ ತುರ್ತು ಇದ್ದರೂ ಈ ಬಜೆಟ್ ಯಾವುದೇ ಕ್ರಮ ವಹಿಸಿಲ್ಲ. ರಾಜ್ಯಾದ್ಯಂತ ಲಕ್ಷಾಂತರ ಸಂಖ್ಯೆಯಲ್ಲಿರುವ ಬಗರ್ ಹುಕಂ ಹಾಗೂ ಅರಣ್ಯ ಭೂಮಿ ಸಾಗುವಳಿದಾರರಿಗೆ ಭೂಮಿ ಹಕ್ಕು ನೀಡಿ ಕನಿಷ್ಠ ಬೆಂಬಲ ಬೆಲೆಯ ಖಾತರಿ ಖರೀದಿ ಮೂಲಕ ಆಹಾರ ಧಾನ್ಯ ಉತ್ಪಾದನೆಯನ್ನು ಪ್ರೊತ್ಸಾಹಿಸಬೇಕಾಗಿತ್ತು. ಅರಣ್ಯ ಹಕ್ಕು ಕಾಯ್ದೆ 2006 ಅನ್ನು ಪರಿಣಾಮಕಾರಿಯಾಗಿ ಜಾರಿ ಮಾಡಬೇಕಾಗಿತ್ತು.ಆದರೆ ಬೃಹತ್ ಕೈಗಾರಿಕಾ ಟೌನ್ ಶಿಪ್ ನಂತಹ ಪ್ರಸ್ತಾಪದ ಮೂಲಕ ಈ ಬಜೆಟ್ ಕೃಷಿ ಭೂಮಿ ಕಬಳಿಕೆಗೆ ಉತ್ತೇಜನ ನೀಡುವಂತೆದೆ ಎಂದು ಕೆಪಿಆರ್‌ಎಸ್ ರಾಜ್ಯಾಧ್ಯಕ್ಷ ಜಿಸಿ ಬಯ್ಯಾರೆಡ್ಡಿ, ಪ್ರಧಾನ ಕಾರ್ಯದರ್ಶಿ ಟಿ.ಯಶವಂತ ಪ್ರಕಟಣೆ ಮೂಲಕ ತಿಳಿಸಿದ್ದಾರೆ.

ಕೊರತೆಗಳಿದ್ದರೂ, ರಾಜ್ಯ ಬಜೆಟ್ ಒಟ್ಟಾರೆ ಸ್ವಾಗತಾರ್ಹವೇ! – ಸಿಪಿಐ(ಎಂ)

2023–24 ರ ಸಾಲಿನ ರಾಜ್ಯ ಬಜೆಟ್ ನ್ನು ಮುಖ್ಯಮಂತ್ರಿ ಸಿದ್ದಾಮಯ್ಯನವರು ಇಂದು ವಿಧಾನ ಸಭೆಯಲ್ಲಿ ಮಂಡಿಸಿದ 3.27. ಲಕ್ಷ ಕೋಟಿ ರೂಗಳ ಬಜೆಟ್ ಕೆಲವು ಕೊರತೆಗಳನ್ನು ಹೊಂದಿದ್ದರೂ ಒಟ್ಟಾರೆ ಸ್ವಾಗತಾರ್ಹವಾಗಿದೆ.

ಮುಖ್ಯಮಂತ್ರಿಗಳು ಐದು ಗ್ಯಾರಂಟಿಗಳನ್ನು ಈಡೇರಿಸುವುದಕ್ಕೆ ಒತ್ತುಕೊಟ್ಟಿದ್ದಾರೆ. ಅದೇ ರೀತಿ, ಹಿಂದಿನ ಬಿಜೆಪಿ ನೇತೃತ್ವದ ಜನಾದೇಶವಿಲ್ಲದ ಸರಕಾರ ರಾಜ್ಯದ ಎಲ್ಲ ಬಡವರಿಗೆ ಹಾಗೂ ಮಹಿಳೆಯರಿಗೆ ಶಿಕ್ಷಣವನ್ನು ನಿರಾಕರಿಸುವ ದುರುದ್ದೇಶದಿಂದ ಜಾರಿಗೊಳಿಸಿದ್ದ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯ ಜಾರಿಯನ್ನು ಮತ್ತು ರೈತ ವಿರೋದಿ ಎಪಿಎಂಸಿ ತಿದ್ದುಪಡಿ ಕಾಯ್ದೆಯನ್ನು ವಾಪಾಸು ಪಡೆದಿರುವುದು ಎಲ್ಲವೂ ಸ್ವಾಗತಾರ್ಹವಾದವುಗಳಾಗಿವೆಯೆಂದು ಸಿಪಿಐ(ಎಂ) ಸ್ವಾಗತಿಸಿದೆ.

ಗ್ಯಾರಂಟಿಗಳಲ್ಲಿ ಮುಖ್ಯವಾಗಿ ಗೃಹ ಜ್ಯೋತಿ ಯೋಜನೆಯು ಮುಖ್ಯವಾಗಿ ಭಾಗ್ಯಜ್ಯೋತಿ, ಕುಠೀರ ಜ್ಯೋತಿ ಮುಂತಾದ ಜ್ಯೋತಿಗಳ ಫಲಾನುಭವಿಗಳಿಗೆ ಪ್ರಯೋಜನಕಾರಿಯಾಗಿಲ್ಲವೆಂದು ಈಗಾಗಲೇ ಸಿಪಿಐ(ಎಂ) ಮುಖ್ಯಮಂತ್ರಿಗಳಿಗೆ ಪತ್ರ ಬರೆದು ತಿಳಿಸಿದೆ. ಮುಖ್ಯವಾಗಿ ಹಳೆಯ ಬಾಕಿ ಮನ್ನಾ ಮಾಡದೇ ಮತ್ತು ಅವರ ಯುನಿಟ್ ಬಳಕೆಯ ಮಿತಿಯನ್ನು ರದ್ದು ಮಾಡದೇ ಹೆಚ್ಚಿನ ಪ್ರಯೋಜನವಿಲ್ಲವಾಗಿದೆ ಎಂದು ಸ್ಪಷ್ಟಪಡಿಸಿದೆ. ರಾಜ್ಯದ ಅಭಿವೃದ್ಧಿಗೆ ಮಾರಕವಾದ ವಿದ್ಯುತ್ ಬೆಲೆ ನಿಯಂತ್ರಣದ ಕುರಿತು ಬಜೆಟ್ ಮೌನ ವಹಿಸಿದೆ.

ಅದೇ ರೀತಿ, ಕೃಷಿ ಹಾಗೂ ರಾಜ್ಯದ ಅಭಿವೃದ್ಧಿ ವಿರೋದಿಯಾದ ಮತ್ತು ಕಾರ್ಪೋರೇಟ್ ಲೂಟಿಗೆ ಪೂರಕವಾಗಿದ್ದ ಭೂ ಸುಧಾರಣಾ ತಿದ್ದುಪಡಿ ಕಾಯ್ದೆ–2020 ಹಾಗೂ ಜಾನುವಾರು ಹತ್ಯೆ ನಿಷೇಧ ತಿದ್ದುಪಡಿ ಕಾಯ್ದೆ–2020 ಮತ್ತು ರಾಜ್ಯದ ಕಾರ್ಮಿಕ ವಿರೋಧಿ ಕಾರ್ಖಾನೆಗಳ ತಿದ್ದುಪಡಿ ಕಾಯ್ದೆ ಮುಂತಾದವುಗಳ ಕುರಿತು ಸರಕಾರ ಜಾಣ ಮೌನ ಅನುಸರಿಸಿದೆ.

ರೈತರ ಸಾಲ ಮನ್ನಾ ಕುರಿತಂತೆ ಮತ್ತು ಕೃಷಿರಂಗದ ಕನಿಷ್ಠ ವೇತನ 424 ರೂ.ಗಳನ್ನು ಉದ್ಯೋಗ ಖಾತ್ರಿಗೆ ವಿಸ್ಥರಿಸುವ ಕುರಿತು ಮೌನವಾಗಿದೆ.

ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರಕ್ಕೆ ಒದಗಿಸಲಾದ ಮೊತ್ತವು ಸಮರ್ಪಕವಾಗಿಲ್ಲ. ಈ ಕೊರತೆಗಳನ್ನು ಈ ಬಜೆಟ್ ಹೊಂದಿದೆ.

ಮುಖ್ಯಮಂತ್ರಿಗಳು ಈ ಕುರಿತಂತೆ ಬಜೆಟ್ ನಲ್ಲಿ ಸೇರ್ಪಡೆ ಮಾಡುವುದು ಅಗತ್ಯವಿದೆಯೆಂದು ಸಿಪಿಐ(ಎಂ) ಒತ್ತಾಯಿಸಿದೆ.

ಶ್ರಮಿಕ ವರ್ಗಕ್ಕೆ ಬಜೆಟ್ ನಲ್ಲಿ ಅನ್ಯಾಯ: ಸಿಐಟಿಯು

ಶ್ರಮಿಕ ವರ್ಗಕ್ಕೆ ಬಜೆಟ್‌ನಲ್ಲಿ ಅನ್ಯಾಯ ಮಾಡಿಲಾಗಿದೆ ಎಂದು ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿಸುಂದರಂ ಹೇಳಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಕೋವಿಡ್ ಸಾಂಕ್ರಾಮಿಕದ ಅಸಮರ್ಥ ನಿರ್ವಹಣೆ ಮತ್ತು ಹಿಂದಿನ ಸರ್ಕಾರದ ಕಾರ್ಮಿಕ ವಿರೋಧಿ ನಿಲುವುಗಳು ಕಾರ್ಮಿಕರ ಬದುಕನ್ನು ದುಸ್ತರಗೊಳಿಸಿತ್ತು. ರಾಜ್ಯದಲ್ಲಿ ಕಾರ್ಮಿಕ ಸ್ನೇಹಿ ವಾತಾವರಣ ನಿರ್ಮಿಸಿ, ಅವರ ಆರೋಗ್ಯ ಹಾಗೂ ಕ್ಷೇಮಾಭಿವೃದ್ಧಿಗೆ ತಮ್ಮ ಸರ್ಕಾರ ಒತ್ತು ನೀಡಲಿದೆ ಎಂದು ಮುಖ್ಯಮಂತ್ರಿಗಳು ಬಜೆಟ್ ಭಾಷಣದಲ್ಲಿ ಉಲ್ಲೇಖಿರುವುದರ ಮೂಲಕ, ಕಳೆದ ಮೂರು ದಶಕಗಳಿಂದ ಸ್ವತಃ ಕಾಂಗ್ರೆಸ್ ಪಕ್ಷ ಜಾರಿಗೊಳಿಸಿದ ಉದಾರವಾದಿ ಆರ್ಥಿಕ ನೀತಿಗಳು ಜನತೆಯ ಬದುಕನ್ನು ದುಸ್ತರಗೊಳಿಸಿದೆ ಎನ್ನುವ ಸತ್ಯವನ್ನು ಈ ಬಜೆಟ್ ಮೂಲಕ ಒಪ್ಪಿಕೊಂಡಿದ್ದಾರೆ. ಆದರೂ ರಾಜ್ಯದ ಕಾರ್ಮಿಕ ವರ್ಗದ ದೃಷ್ಟಿಯಿಂದ ಬಜೆಟ್ ಅನ್ಯಾಯ ಮಾಡಿದೆ ಎಂದು ಹೇಳಿದ್ದಾರೆ.

ಕೆಲಸದ ಅವಧಿ ಹೆಚ್ಚಳ ರದ್ದು ಮಾಡಬೇಕಿತ್ತು:

ಹಿಂದಿನ ಬಿಜೆಪಿ ಸರ್ಕಾರ ಕಾರ್ಖಾನೆ ಕಾಯ್ದೆಗೆ ತಿದ್ದುಪಡಿ ತಂದು 8 ಗಂಟೆ ಕೆಲಸದ ಅವಧಿಯನ್ನು 12 ಗಂಟೆಗೆ ಏರಿಸಿತ್ತು ಮತ್ತು ರಾತ್ರಿ ಪಾಳಿ ದುಡಿಮೆಯನ್ನು ಮಹಿಳೆಯರಿಗೆ ಕಡ್ಡಾಯಗೊಳಿಸಿತ್ತು. ಇದ್ದನ್ನು ರದ್ದು ಮಾಡಲು ಕಾಂಗ್ರೆಸ್ ಸರ್ಕಾರ ಹಿಂದೇಟು ಹಾಕಿದೆ. ಕನಿಷ್ಠ ವೇತನ ಪತಿಷ್ಕರಣೆ ವಿಷಯದಲ್ಲೂ ಸರ್ಕಾರ ಯಾವುದೇ ಬದ್ದತೆಯನ್ನು ಪ್ರದರ್ಶನ ಮಾಡದೇ ಮಾಲೀಕರ ಒತ್ತಡಕ್ಕೆ ಮಣಿದಿದೆ ಎಂದು ಆರೋಪಿಸಿದ್ದಾರೆ.

ಅಸಂಘಟಿತ ಕಾರ್ಮಿಕರ ಕಲ್ಯಾಣ ನಿರ್ಲಕ್ಷ್ಯ:

ರಾಜ್ಯದಲ್ಲಿ ಕೋಟ್ಯಾಂತರ ಕಾರ್ಮಿಕರು ಮನೆಗೆಲಸ, ಹಮಾಲಿ, ಅಟೋ, ಟೈಲರ್ಸ್, ಬೀಡಿ ಉದ್ಯಮ, ಬೀದಿಬದಿ ವ್ಯಾಪಾರಿಗಳು ಹಾಗೂ ಸಣ್ಣ ವ್ಯಾಪಾರಿಗಳು, ಮೆಕಾನಿಕ್ ಗಳು, ವಿಮಾ ಪ್ರತಿನಿಧಿಗಳು ಇವರುಗಳ ಕಲ್ಯಾಣಕ್ಕಾಗಿ ಬಜೆಟ್ ನಲ್ಲಿ ಹಣ ಮೀಸಲಿರಿಸದೇ ಇರುವುದು ಹಾಗೂ ಭವಿಷ್ಯನಿಧಿ ಯೋಜನೆ ಸೇರಿ ಇತರೆ ಕಾರ್ಯಕ್ರಮಗಳನ್ನು ಘೋಷಿಸದಿರುವ ಮೂಲಕ ಅಸಂಘಟಿತ ಕಾರ್ಮಿಕರನ್ನು ಬಜೆಟ್ ನಲ್ಲಿ ನಿರ್ಲಕ್ಷಿಸಲಾಗಿದೆ.

ಸ್ಕೀಂ ನೌಕರರ ವೇತನ ಗ್ಯಾರಂಟಿ ಇಲ್ಲ:

ಕಾಂಗ್ರೆಸ್ ಚುನಾವಣೆಗೂ ಮುನ್ನ ಅಂಗನವಾಡಿ, ಬಿಸಿಯೂಟ ನೌಕರರಿಗೆ ಕೊಟ್ಟ ವೇತನ ಭರವಸೆಯನ್ನು ಈಡೇರಿಸಿಲ್ಲ. 4,000 ಶಿಶುಪಾಲನಾ ಕೇಂದ್ರಗಳನ್ನು ಪಂಚಾಯತ್ ರಾಜ್ ಇಲಾಖೆಯಿಂದ ಸ್ಥಾಪಿಸುವ ನಿರ್ಧಾರ ಐಸಿಡಿಎಸ್ ಯೋಜನೆಗೆ ದೊಡ್ಡ ಪೆಟ್ಟು ಕೊಡಲಿದೆ. ಅಂಗನವಾಡಿ ನೌಕರರಿಗೆ ಮೊಬೈಲ್ ಕೊಡಬಹುದು ಎಂಬ ನಿರೀಕ್ಷೆಯೂ ಸುಳ್ಳಾಗಿದೆ.

ಕಟ್ಟಡ ಕಲ್ಯಾಣ ನಿಧಿ ದುರುಪಯೋಗಕ್ಕೆ ಅವಕಾಶ:

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ನಿಧಿಯಲ್ಲಿ ಹಿಂದಿನ ಸರ್ಕಾರದಂತೆ ಸಂಚಾರಿ ಕ್ಲಿನಿಕ್ ಆರಂಭ ಹಾಗೂ ಬಸ್ ಪಾಸ್ ವಿತರಣೆ ಮುಂದುವರೆಸಿರುವುದು ಕಲ್ಯಾಣ ಮಂಡಳಿ ನಿಧಿಯ ದುರುಪಯೋಗಕ್ಕೆ ಮತ್ತಷ್ಟು ಎಡೆಮಾಡಿಕೊಡಲಿದೆ.

ಗುತ್ತಿಗೆ ಹೊರಗುತ್ತಿಗೆ ನಿಯಂತ್ರಣ ಬೇಕಿತ್ತು:

ರಾಜ್ಯದ ಖಾಸಗಿ ಹಾಗೂ ಸರ್ಕಾರದ ಇಲಾಖೆಗಳಲ್ಲಿ ಲಕ್ಷಾಂತರ ಜನರು ಗುತ್ತಿಗೆ, ಹೊರಗುತ್ತಿಗೆ, ನಿಗದಿತ ಅವಧಿಯಲ್ಲಿ ದುಡಿಯುತ್ತಿದ್ದಾರೆ. ಇವರುಗಳ ವೇತನಕ್ಕೆ ಸರ್ಕಾರ ಮತ್ತು ಮಾಲೀಕರು ನೂರಾರು ಕೋಟಿ ಹಣವನ್ನು ಗುತ್ತಿಗೆ ಏಜೆನ್ಸಿಗಳಿಗೆ ನೀಡುತ್ತಿವೆ. ಆದರೆ ಗುತ್ತಿಗೆದಾರರು ಕಾರ್ಮಿಕರಿಗೆ ಸರಿಯಾದ ಕಾನೂನು ಬದ್ದವೇತನ ಸೇರಿ ಇತರೆ ಸೌಲಭ್ಯಗಳನ್ನು ನೀಡದೆ ವಂಚಿಸುತ್ತಿದ್ದಾರೆ. ಹೀಗಾಗಿ ಈ ಗುತ್ತಿಗೆ ಹೊರಗುತ್ತಿಗೆ ನಿಯಂತ್ರಿಸುವ ಹಾಗೂ ಕಾರ್ಮಿಕರಿಗೆ ನೇರಪಾವತಿ ವ್ಯವಸ್ಥೆ ಜಾರಿಗೊಳಿಸುವ ಕುರಿತು ರಾಜ್ಯ ಬಜೆಟ್ ನಲ್ಲಿ ಯಾವುದೇ ಪ್ರಸ್ತಾಪಗಳು ಇಲ್ಲವಾಗಿವೆ.

ಸ್ವಾಗತಾರ್ಹ ಕ್ರಮಗಳು:

ಗಿಗ್ ಆರ್ಥಿಕ ವಲಯಗಳಲ್ಲಿ ದುಡಿಯುತ್ತಿರುವ 'Gig workers', ಅಂದರೆ ಸ್ವಿಗ್ಗಿ, ಜೊಮಾಟೋ, ಮೊದಲಾದ ಕಾರ್ಮಿಕರಿಗೆ 2 ಲಕ್ಷ ರೂ.ಗಳ ಜೀವವಿಮಾ ಸೌಲಭ್ಯ ಹಾಗೂ 2 ಲಕ್ಷ ರೂ.ಗಳ ಅಪಘಾತ ವಿಮಾ ಸೌಲಭ್ಯ ಸೇರಿದಂತೆ ಒಟ್ಟು 4 ಲಕ್ಷ ರೂ.ಗಳ ವಿಮಾ ಸೌಲಭ್ಯ ಕಲ್ಪಿಸಿ, ಇದರ ಸಂಪೂರ್ಣ ವಿಮಾ ಕಂತನ್ನು ಸರ್ಕಾರದ ವತಿಯಿಂದ ಭರಿಸಲಾಗುವುದು ಎಂದು ಪ್ರಕಟಿಸಿರುವುದು ಸ್ವಾಗತಾರ್ಹವಾಗಿದೆ. ಎಪಿಎಂಸಿ ಹಮಾಲಿ ಕಾರ್ಮಿಕರಿಗೆ ಶವಸಂಸ್ಕಾರ ಧನ ಸಹಾಯ ಹೆಚ್ಚಳ ಹಾಗೂ ಹಳದಿ ಬೋರ್ಡ್ ಹೊಂದಿರುವ ವಾಣಿಜ್ಯ ಚಾಲಕರಿಗೆ ಕೆಲವು ಕಲ್ಯಾಣ ಕಾರ್ಯಕ್ರಮಗಳನ್ನು ಪ್ರಕಟಿಸಿರುವುದು ಸ್ವಾಗತಾರ್ಹವಾಗಿದೆ.

ಬಜೆಟ್ ನಲ್ಲಿ ಕೆಲ ಸ್ವಾಗತಾರ್ಹ ಅಂಶಗಳಿದ್ದಾಗ್ಯೂ ಒಟ್ಟಾರೆ ಕಾರ್ಮಿಕ ವರ್ಗಕ್ಕೆ ಸಮಗ್ರವಾಗಿ ನ್ಯಾಯ ಒದಗಿಸುವಲ್ಲಿ ವಿಫಲವಾಗಿದೆ ಎನ್ನದೆ ಬೇರೆ ದಾರಿ ಇಲ್ಲ. ಮೇಲ್ಕಂಡ ಅಂಶಗಳ ಕುರಿತು ಕಾರ್ಮಿಕ ಸಚಿವರ ಉಪಸ್ಥಿತಿಯಲ್ಲಿ ಕಾರ್ಮಿಕ ಸಂಘಟನೆಗಳು ಹಲವು ಹಕ್ಕೊತ್ತಾಯಗಳನ್ನು ಮಂಡಿಸಿದ್ದರೂ ಅದಕ್ಕೆ ಯಾವುದೇ ಆಧ್ಯತೆ ಸಿಗದಿರುವುದು ವಿಷಾಧನೀಯ ಎಂಬುದು ಸಿಐಟಿಯುವಿನ ಸ್ಪಷ್ಟ ಅಭಿಪ್ರಾಯವಾಗಿದೆ ಮೀನಾಕ್ಷಿಸುಂದರಂ ತಿಳಿಸಿದ್ದಾರೆ.

ಮಾಡಿದ್ದವು. ಈ ಎಲ್ಲ ಅಸಮಾಧಾನಗಳ ಪರಿಣಾಮವಾಗಿ ಮತ್ತು ಕಾಂಗ್ರೆಸ್ ನೀಡಿದ ಗ್ಯಾರಂಟಿಗಳ ಕಾರಣದಿಂದ ಕಳೆದ ವಿಧಾನ ಸಭಾ ಚುನಾವಣಾ ಫಲಿತಾಂಶ ಹೊರ ಬಿದ್ದಿತು. ಹೀಗಾಗಿ ಈ ಎಲ್ಲ ಅಸಮಾಧಾನಗಳು ಸಹಜವಾಗಿಯೇ ಈ ಬಜೆಟ್ ನಲ್ಲಿ ಬಹು ನಿರೀಕ್ಷೆಯನ್ನು ಸೃಷ್ಟಿಸಿದ್ದವು.

2023–24 ರ ಬಜೆಟ್ ನ ಸಕಾರಾತ್ಮಕ ಅಂಶಗಳು ಮತ್ತು ಕೊರತೆಗಳು


ಗೃಹಲಕ್ಷ್ಮಿ, ಗೃಹ ಜ್ಯೋತಿ, ಅನ್ನ ಭಾಗ್ಯ, ಶಕ್ತಿ ಹಾಗೂ ಯುವ ನಿಧಿ ಜಾರಿಗಾಗಿ ವಾರ್ಷಿಕ ಸುಮಾರು 57,000 ಕೋಟಿ ರೂಗಳ ವೆಚ್ಚ ಮಾಡುವುದಾಗಿ ಬಜೆಟ್ ಘೋಷಿಸಿದೆ. ಈ ಗ್ಯಾರಂಟಿಗಳ ಜಾರಿಗೆ ಈ ಬಜೆಟ್ ಪ್ರಾಮುಖ್ಯತೆ ನೀಡಿದೆ. ಈ ಗ್ಯಾರಂಟಿಗಳಿಂದ ರಾಜ್ಯದ ಸುಮಾರು 1. 25 ಕೋಟಿಗೂ ಅಧಿಕ ಕುಟುಂಬಗಳು ನೆರವು ಪಡೆಯಲಿವೆ ಎಂದು ಹೆಗ್ಗಳಿಕೆಯಿಂದ ಹೇಳಿಕೊಂಡಿದೆ.

ಇದು, ದೇಶದಾದ್ಯಂತ ನವ ಉದಾರೀಕರಣದ ನೀತಿಗಳನ್ನು ಬಿರುಸಿನಿಂದ ಜಾರಿಗೊಳಿಸುತ್ತಿರುವ ಮತ್ತು ಅದರ ಭಾಗವಾಗಿ ಎಲ್ಲೆಡೆ ಸಾರ್ವಜನಿಕ ವೆಚ್ಚದ ಕಡಿತಕ್ಕೆ ಆದ್ಯತೆ ನೀಡುತ್ತಿರುವಾಗ, ಈ ಬಜೆಟ್ ಅಂತಹ ಮಿತಿಗಳನ್ನು ಮೀರಿ ಸಾರ್ವಜನಿಕ ವೆಚ್ಚವನ್ನು ಹೆಚ್ಚಿಸಿರುವುದು ವಿಶೇಷವಾಗಿದೆ.

ಖಂಡಿತಾ! ಈ ಕ್ರಮವು ಮಹಿಳೆಯರು, ದಲಿತರು ಮತ್ತಿತರೆ ಬಡವರಿಗೆ ಸ್ವಲ್ಪವಾದರೂ ನೆರವು ನೀಡುವ ದಿಟ್ಟ ಹೆಜ್ಜೆಯಾಗಿದೆ.

ಅದೇ ಸಂದರ್ಭದಲ್ಲಿ ಎಪಿಎಂಸಿ ತಿದ್ದುಪಡಿ ಕಾಯ್ದೆ – 2020 ಹಾಗೂ ರಾಜ್ಯದ ದಲಿತರು, ಮಹಿಳೆಯರ ಶಿಕ್ಷಣದ ಹಕ್ಕನ್ನು ನಿರಾಕರಿಸುವ ಹಾಗೂ ಸಾರ್ವಜನಿಕ ಶಿಕ್ಷಣ ವಲಯದ ಉದ್ಯೋಗದ ಹಕ್ಕಿನ ಮೇಲೆ ಎರಗುವ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯ ಜಾರಿಯನ್ನು ತಡೆಯುವುದಾಗಿ ಬಜೆಟ್ ಪ್ರಕಟಿಸಿದೆ. ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ವಿಶೇಷ ಘಟಕ ಯೋಜನೆಯ ಅನುದಾನದ ಸೋರಿಕೆ ತಡೆಯಲು ಸದರಿ ಕಾಯ್ದೆಯ 7 (ಡಿ)ಯನ್ನು ತೆಗೆದು ಹಾಕುವುದಾಗಿಯೂ ಅದು ಹೇಳಿದೆ. ಆದಿವಾಸಿಗಳಿಗೆ ನೀಡುವ ಪೌಷ್ಠಿಕ ಆಹಾರವನ್ನು 6 ತಿಂಗಳಿನಿಂದ ವರ್ಷ ಪೂರ್ತಿಗೆ ವಿಸ್ತರಿಸಿದ್ದು ಇವುಗಳೆಲ್ಲವೂ ಖಂಡಿತಾವಾಗಿಯೂ ಸಕಾರಾತ್ಮಕವಾದವು ಮತ್ತು ಸ್ವಾಗತಾರ್ಹವಾದವುಗಳಾಗಿವೆ. ಇವು ಜನರಿಗೆ ಕೊಂಚ ಪರಿಹಾರ ಒದಗಿಸುವ ಜೊತೆಗೆ ರಾಜ್ಯದ ಆರ್ಥಿಕ ಬಿಕ್ಕಟ್ಟಿನ ನಿವಾರಣೆಗೆ, ಮಾರುಕಟ್ಟೆ ವಿಸ್ತರಣೆಗೆ ಆ ಮಟ್ಟಿಗೆ ನೆರವು ನೀಡಲಿವೆ.

ಮುಖ್ಯವಾಗಿ, ಗೃಹ ಜ್ಯೋತಿ ಯೋಜನೆಯು, ಬಡವರಿಗೆ ಅಂದರೇ ಭಾಗ್ಯ ಜ್ಯೋತಿ, ಕುಠೀರ ಮುಂತಾದ ಜ್ಯೋತಿಗಳ ಫಲಾನುಭವಿಗಳ ವಿದ್ಯುತ್ ಬಳಕೆಯ ಮೇಲೆ ಮಿತಿ ಹಾಗೂ



ಹಳೆ ಬಾಕಿ ಕಟ್ಟಲೇ ಬೇಕೆಂಬ ಷರತ್ತುಗಳನ್ನು ಸರಕಾರ ಹೇರಿದುದರಿಂದ ಇದು ಈ ಜನರಿಗೆ ಪ್ರಯೋಜನಕಾರಿಯಾಗಿಲ್ಲ. ಇದರ ಪ್ರಯೋಜನ ಸಿಗ ಬೇಕಿದ್ದರೆ ಅವರ ವಿದ್ಯುತ್ ಬಾಕಿ ಮನ್ನಾ ಮಾಡಬೇಕಿತ್ತು. ಮತ್ತು ವಿದ್ಯುತ್ ಬಳಕೆಯ ಮಿತಿಯನ್ನು ಎಲ್ಲ ಇತರೆ ಫಲಾನುಭವಿಗಳಿಗೆ ಸಿಗುವಂತೆ ವಿಸ್ತರಿಸ ಬೇಕಿತ್ತು. ಬಜೆಟ್ ನಲ್ಲಿ ಈ ಪ್ರಸ್ತಾಪಗಳು ಇಲ್ಲದಿರುವುದರಿಂದ ಆ ಮಟ್ಟಿಗೆ ಈ ಯೋಜನೆ ಅಪಯಶಸ್ಸು ಕಾಣುವ ಸಂಭವಗಳಿವೆ. ಅದೇ ರೀತಿ, ಈಚೆಗೆ ಕೆ.ಇ.ಆರ್.ಸಿ. ಸೂಚನೆಯಂತೆ ಉಂಟಾದ ವಿದ್ಯುತ್ ದರ ಏರಿಕೆಯು ರಾಜ್ಯದ ಜನತೆಯನ್ನು, ಸಣ್ಣ ಕೈಗಾರಿಕೆಗಳನ್ನು ಮತ್ತು ವಿದ್ಯುತ್ ಮಗ್ಗ ಬಳಸುವ ನೇಕಾರರನ್ನು ತೀವ್ರವಾಗಿ ಬಾಧಿಸಿ ಅವುಗಳು ಮುಚ್ಚಿಕೊಂಡು ಹೋಗುವ ಸಂಕಷ್ಟ ಎದುರಿಸುತ್ತಿರುವಾಗ ಮತ್ತು ಈ ಬೆಲೆ ಏರಿಕೆಯು ಉಳಿದೆಲ್ಲಾ ಅಗತ್ಯ ವಸ್ತುಗಳ ಬೆಲೆ ಏರಿಕೆಗೆ ಪ್ರಚೋಧನಾಕಾರಿಯಾಗಿರುವಾಗ ಬಜೆಟ್ ಈ ಕುರಿತು ಮಾತನಾಡದೇ ಮೌನ ವಹಿಸಿದೆ. ಇವುಗಳ ಜೊತೆ ಬಹು ನಿರೀಕ್ಷೆಯಲ್ಲಿದ್ದ ಎಲ್ಲ ಜನತೆ ಈ ಬಜೆಟ್ ನಿಂದ ನಿರಾಶೆ ಹೊಂದಿದ್ದಾರೆ.

ನಿಜ! ಎಲ್ಲ ಅಧಿಕಾರ ಮತ್ತು ಸಂಪನ್ಮೂಲಗಳು ಒಕ್ಕೂಟ ಸರಕಾರದಡಿ ಕೇಂದ್ರೀಕೃತ ಗೊಂಡಿರುವಾಗ ಮತ್ತು ಸೀಮಿತ ಸಂಪನ್ಮೂಲಗಳಡಿ ಕಾರ್ಯ ನಿರ್ವಹಿಸುವ ರಾಜ್ಯ ಸರಕಾರಗಳು ಎಲ್ಲವನ್ನು ಒಳಗೊಳ್ಳಲು ಸಾಧ್ಯವಿಲ್ಲ. ವಿರೋಧ ಪಕ್ಷವಾದ ಬಿಜೆಪಿಯೇ ಒಕ್ಕೂಟ ಸರಕಾರವನ್ನು ಮುನ್ನಡೆಸುತ್ತಿದ್ದರೂ ರಚನಾತ್ಮಕ ವಿರೋಧ ಪಕ್ಷವಾಗಿ ಒಕ್ಕೂಟ ಸರಕಾರದಿಂದ ಹೆಚ್ಚಿನ ಅನುದಾನ ಸಿಗುವಂತೆ ಕ್ರಮವಹಿಸಿದ್ದರೇ ಬಹುಶಃ ರಾಜ್ಯ ಸರಕಾರ ಇನ್ನಷ್ಟು ನೆರವು ನೀಡಲು ಸಾಧ್ಯವಿತ್ತೇನೋ? ಆದರೆ ವಿರೋಧ ಪಕ್ಷ ರಚನಾತ್ಮಕವಾಗಿ ರಾಜ್ಯದ ಅಭಿವೃದ್ಧಿಗೆ ಪೂರಕವಾಗಿ ಕಾರ್ಯ ನಿರ್ವಹಿಸದೇ ವಿರೋಧಕ್ಕಾಗಿ ವಿರೋಧ ಮಾಡುವ, ಅನುಭವದಂತೆ ಹೇಗಾದರೂ ಮಾಡಿ ಕಾಲೆಳೆಯುವ ನೀತಿಯನ್ನೇ ಅದು ಅನುಸರಿಸುತ್ತಿದೆ.

ಅದೇ ರೀತಿ, ಹಾಗೆ ಜನತೆಯ ಒತ್ತಾಸೆಗಳು ಒಳಗೊಳ್ಳಬೇಕೆಂದರೆ ಅಂತಹ ರಾಜಕೀಯ ಇಚ್ಛಾಶಕ್ತಿಯನ್ನು ಈ ಸರಕಾರ ಹೊಂದಿರ ಬೇಕಾಗುತ್ತದೆ. ಇಲ್ಲಿ ಅಂತಹ ಪುಟ 14 ಕ್ಕೆ

ಆದಿವಾಸಿಗಳ ಪ್ರಶ್ನೆಗಳಿಗೆ ಸರಕಾರದ ಸ್ಪಂದನ ಬಜೆಟ್ ನ ಕೆಲವು ಅಂಶಗಳಿಗೆ ಸ್ವಾಗತ

ಕರ್ನಾಟಕದ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು ಮಂಡಿಸಿದ 2023–24 ನೇ ಸಾಲಿನ ಆಯವ್ಯಯವನ್ನು ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯು ವಿಮರ್ಶಾತ್ಮಕವಾಗಿ ಸ್ವಾಗತಿಸಿದೆ.

ಈ ಆಯವ್ಯವನ್ನು ಮಂಡಿಸುವ ಸಂದರ್ಭದಲ್ಲಿಯೂ ಕರ್ನಾಟಕವನ್ನು ಸರ್ವ ಜನಾಂಗದ ಶಾಂತಿಯ ತೋಟವಾಗಿ, ಶಾಂತಿ ಮತ್ತು ಸೌಹಾರ್ದತೆಯ ನೆಲಬೀಡಾಗಿ ಕಾಪಾಡಿಕೊಳ್ಳುವ ಬದ್ಧತೆಯನ್ನು ಪುನರುಚ್ಚರಿಸಿರುವುದು ಕೂಡ ಸ್ವಾಗತಾರ್ಹ.

ಈ ಬಜೆಟ್ ನಲ್ಲಿ ಆದಿವಾಸಿ ಸಮುದಾಯಗಳ ಬಹು ದಿನಗಳ ಮುಖ್ಯ ಬೇಡಿಕೆಯಾದ ಎಸ್.ಸಿ.ಪಿ ಮತ್ತು ಟಿ.ಎಸ್. ಪಿ.ಉಪಯೋಜನೆಗೆ ಹಣವನ್ನು ಇತರೆ, ಉದ್ದೇಶಗಳಿಗೆ ಮತ್ತು ಇತರೆ ಇಲಾಖೆಗಳ ಬಳಕೆಗೆ ಅವಕಾಶ ಮಾಡಿಕೊಡುತ್ತಿದ್ದ ಕಾಯ್ದೆಯ ಏ7– ಡಿ ಪರಿಚ್ಛೇದವನ್ನು ಕೈ ಬಿಟ್ಟಿರುವುದು ಅತ್ಯಂತ ಸ್ವಾಗತ ಅರ್ಹವಾದದ್ದು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗೆ ಮೀಸಲಾಗಿಸಿರುವ ದಲಿತ–ಬುಡಕಟ್ಟು ಉಪ ಯೋಜನೆ–ಎಸ್. ಸಿ.ಪಿ ಮತ್ತು ಟಿ.ಎಸ್. ಪಿ.ಗೆ ಈ ಬಜೆಟ್ ನಲ್ಲಿ 34,294 ಕೋಟಿ ರೂ.ಗಳನ್ನು ಒದಗಿಸಿರುವುದು ಅಂದರೆ ಹಿಂದಿನ ಬಜೆಟ್ ಗಿಂತ 4000 ಕೋಟಿ ರೂ.ಗಳನ್ನು ಹೆಚ್ಚಿಗೆ ನೀಡಿದ್ದಾರೆ. ಇದನ್ನು ಸ್ವಾಗತಿಸಿರುವ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯು ಪೂರ್ಣ ಹಣವನ್ನು ಈ ಸಮುದಾಯಗಳ ಅಭಿವೃದ್ಧಿಗೆ, ಅವರ ಮೂಲಭೂತ ಸಮಸ್ಯೆಗಳ ಪರಿಹಾರಕ್ಕೆ ವಿನಿಯೋಗಿಸಬೇಕು, ಅದಕ್ಕೆ ತಕ್ಕುದಾದ ಪ್ರಾಯೋಗಿಕ ಕಾರ್ಯ ಯೋಜನೆಯನ್ನು ಸಮುದಾಯಗಳ ಪ್ರತಿನಿಧಿಗಳು, ಸಂಘಟನೆಗಳೊಂದಿಗೆ ಸಮಾಲೋಚಿಸಿ ರೂಪಿಸಬೇಕು ಎಂದು ಆಗ್ರಹಿಸಿದೆ.

ಹಾಗೆಯೇ ಈ ಬಜೆಟ್ ನಲ್ಲಿ ಆದಿವಾಸಿ ಸಮುದಾಯಗಳಿಗೆ ನೀಡಲಾಗುತ್ತಿದ್ದ ಪೌಷ್ಠಿಕ ಆಹಾರವನ್ನು 6 ತಿಂಗಳಿನಿಂದ 12 ತಿಂಗಳಿಗೆ ವಿಸ್ತರಿಸಿರುವುದು ಸ್ವಾಗತಾರ್ಹ. ನಮ್ಮ ಬಹುದಿನಗಳ ಈ ಅಗತ್ಯ ಬೇಡಿಕೆಯನ್ನು ಒಪ್ಪಿದ್ದಾರೆ. ಹಾಗೇ ಹಸಲರು, ಮುಂತಾದ ಮೂಲ ಆದಿವಾಸಿ ಸಮುದಾಯಗಳಿಗೆ ವಿಸ್ತರಿಸಬೇಕು ಎಂದು ಆಗ್ರಹಿಸಿದೆ.

ಇದೇ ಹೊತ್ತಿನಲ್ಲಿ ಆದಿವಾಸಿಗಳ ಬದುಕಿನಲ್ಲಿ ಪರಿವರ್ತನೆ ತರುವಲ್ಲಿ ಅರಣ್ಯ ಹಕ್ಕುಗಳ ಕಾಯ್ದೆ 2006 ರಂತೆ ಭೂಮಿ, ಅರಣ್ಯ, ಸಮುದಾಯ ಹಕ್ಕುಗಳು ದಕ್ಕುವಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಭೂಮಿ ಖರೀದಿ, ನಿವೇಶನ, ಮನೆ ನಿರ್ಮಾಣಕ್ಕೆ ಅನುದಾನವನ್ನು ಹೆಚ್ಚಿಸಬೇಕು. ಇವಕ್ಕೆ ಅತೀ ಪ್ರಾಮುಖ್ಯತೆಯನ್ನು ನೀಡಬೇಕಿದೆ.

ಈದೆಸೆಯಲ್ಲಿ ಸರಕಾರವು ಸಮುದಾಯಗಳು, ಸಂಘಟನೆಗಳ ಪ್ರತಿನಿಧಿಗಳ ಸಮಾಲೋಚನಾ ಸಭೆಯನ್ನು ಮುಖ್ಯಮಂತ್ರಿಗಳ ಅದ್ಯಕ್ಷತೆಯಲ್ಲಿ ಕೂಡಲೇ ಕರೆಯ ಬೇಕೆಂದು ಒತ್ತಾಯಿಸಿದೆ.

ರಾಜಕಾರಣಿಗಳು ಮೆತ್ತಿಕೊಂಡಿರುವ 'ಕಳಂಕ' ಎಂಬ ಕಲೆಗಳನ್ನು ತೆಗೆದುಹಾಕುವ ಬಿಜೆಪಿ ವಾಷಿಂಗ್ ಮೆಷಿನ್

ಬಿಜೆಪಿ ಎಂಬ ವಾಷಿಂಗ್ ಮೆಷಿನ್ ಗೆ ಹಾಕಿದರೆ ಎಂತಹ ಕೊಳೆಯನ್ನೂ ತೆಗೆಯುವ ಶಕ್ತಿ ಆ ಪಕ್ಷಕ್ಕಿದೆ. ಜಾರಿ ನಿರ್ಧೇಶನಾಲಯ (ಇಡಿ), ಆದಾಯ ತೆರಿಗೆ ಇಲಾಖೆ ಇತ್ಯಾದಿಗಳು ಆ ವಾಷಿಂಗ್ ಮೆಷಿನ್ ನ ಅಘೋಷಿತ ಏಜೆಂಟ್ ಗಳಾಗಿ ಕಾರ್ಯನಿರ್ವಹಿಸುತ್ತಿವೆ. ಪ್ರಧಾನಿ ನರೇಂದ್ರ ಮೋದಿ ಅಧಿಕಾರಕ್ಕೆ ಬಂದ 9 ವರ್ಷಗಳಲ್ಲಿ ಜಾರಿ ನಿರ್ದೇಶನಾಲಯ 3,000 ಸ್ಥಳಗಳಲ್ಲಿ ದಾಳಿ ನಡೆಸಿದೆ. ಸಾವಿರ ಪ್ರಕರಣಗಳಲ್ಲಿ ಚಾರ್ಜ್ ಶೀಟ್ ಸಹ ಸಲ್ಲಿಕೆಯಾಗಿಲ್ಲ. 50 ವ್ಯಕ್ತಿಗಳು ಅಥವಾ ಘಟಕಗಳು ಸಹ ತಪ್ಪಿತಸ್ಥರೆಂದು ಕಂಡುಬಂದಿಲ್ಲ. ಜಾರಿ ಪ್ರಕರಣಗಳಲ್ಲಿ 30 ಕ್ಕಿಂತ ಕಡಿಮೆ ಜನರಿಗೆ ಶಿಕ್ಷೆಯಾಗಿದೆ. ಜಾರಿ ನಿರ್ಧೇಶನಾಲಯದ ಉದ್ದೇಶ ಭ್ರಷ್ಟಾಚಾರವನ್ನು ಪತ್ತೆ ಮಾಡುವುದು ಮಾತ್ರ, ಅದನ್ನು ತೊಡೆದುಹಾಕಲು ಅಲ್ಲ, ಭ್ರಷ್ಟರಿಗೆ ಶಿಕ್ಷೆ ಕೊಡಿಸುವುದೂ ಅಲ್ಲ. ಕಳಂಕಿತರಿಗೆ ಬಿಜೆಪಿ ಒಂದು ಅಡಗುದಾಣದಂತಾಗಿದೆ. ಇದನ್ನು ಸ್ವತಃ ಪ್ರಧಾನಿ ಮೋದಿ ಒಪ್ಪಿಕೊಂಡಿದ್ದಾರೆ. ಜಾರಿ ನಿರ್ಧೇಶನಾಲಯ ವಿರೋಧ ಪಕ್ಷಗಳನ್ನು ಒಗ್ಗೂಡಿಸುತ್ತಿದೆ ಎಂದು ಹೇಳುವ ಮೂಲಕ ಪಾಟ್ನಾದಲ್ಲಿ ವಿರೋಧ ಪಕ್ಷಗಳ ಸಭೆಯನ್ನು ಗೇಲಿ ಮಾಡುತ್ತ, ಈ ಸತ್ಯವನ್ನು ಅವರು ಒಪ್ಪಿಕೊಳ್ಳುತ್ತಿದ್ದಾರೆ.

70,000 ಕೋಟಿ ರೂ. ವಂಚನೆ ಆರೋಪಿ ಅಜಿತ್ ಪವಾರ್

2014ರಲ್ಲಿ ಅಜಿತ್ ಪವಾರ್ ಮೇಲೆ 70.000 ಕೋಟಿ ರೂ. ವಂಚನೆ ಆರೋಪ ಹೊರಿಸಿದ ಮಹಾರಾಷ್ಟ್ರ ಬಿಜೆಪಿ ಅಧ್ಯಕ್ಷ ಹಾಗೂ ಹಾಲಿ ಉಪ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರು, ವಿಧಾನಸಬೆಯಲ್ಲಿ ವಿರೋಧ ಪಕ್ಷದ ನಾಯಕನಾಗಿದ್ದ ಅಜಿತ್ ಪವಾರ್ ಮತ್ತು ಅವರ ಬೆಂಬಲಿಗ ಶಾಸಕರ ಬೆಂಬಲ ಪಡೆದು, ತಾವೇ ಆರೋಪ ಹೊರಿಸಿದ ಆರೋಪಿಯನ್ನು ಉಪ ಮುಖ್ಯಮಂತ್ರಿಯನ್ನಾಗಿ ಮಾಡಿ ತಮ್ಮ ಪಕ್ಕದಲ್ಲೇ ಕುಳ್ಳಿರಿಸಿಕೊಂಡಿದ್ದಾರೆ. ಬಿಜೆಪಿ ವಾಷಿಂಗ್ ಮೆಷಿನ್ ಅಜಿತ್ ಕುಮಾರ್ ಮಾಡಿದ ವಂಚನೆಯ ಕಳಂಕವನ್ನು ಶುಚಿಗೊಳಿಸಿ, ಅವರನ್ನು ಪರಿಶುದ್ಧರನ್ನಾಗಿ ಮಾಡಿದೆ. ಮಹಾರಾಷ್ಟ್ರ ಸಹಕಾರಿ ಬ್ಯಾಂಕ್ ಹಗರಣದಲ್ಲಿ ಅಜಿತ್ ಪವಾರ್ ಮತ್ತು ಅವರ ಪತ್ನಿಯನ್ನೂ ಹೆಸರಿಸಲಾಗಿತ್ತು. ಜಾರಿ ನಿರ್ದೇಶನಾಲಯ ಕೂಡ ಪ್ರಕರಣದ ತನಿಖೆ ನಡೆಸಿದೆ. ಅಜಿತ್ ಪವಾರ್ ಬಿಜೆಪಿಗೆ ಹತ್ತಿರವಾದ ತಕ್ಷಣ ಇಡಿ ಇಬ್ಬರ ಹೆಸರನ್ನು ತೆರವುಗೊಳಿಸಿತ್ತು. ಅವರು ಆಡಳಿತ ಒಕ್ಕೂಟಕ್ಕೆ ಸೇರಿದಾಗ, ಸಹಸ್ರ ತೋಳುಗಳನ್ನು ಚಾಚಿ ಪ್ರೀತಿಯಿಂದ ಅಪ್ಪಿಕೊಂಡರು.

2014ರಿಂದ ಇತರೆ ಕುದುರೆಗಳು ಹೆದರಿ ಓಡುವ ಮಟ್ಟಕ್ಕೆ ಬಿಜೆಪಿ ಕುದುರೆ ವ್ಯಾಪಾರ ರಾಜಕಾರಣ ಮಾಡುತ್ತಿದೆ. ಅದರ ಮುಂದುವರಿದ ಭಾಗವೇ ಅಜಿತ್ ಪವಾರ್ ಅವರನ್ನು ಮಹಾರಾಷ್ಟ್ರದಲ್ಲಿ ಆಡಳಿತಾರೂಢ ಸಮ್ಮಿಶ್ರಕ್ಕೆ ಕರೆತಂದು ಮತ್ತೆ ಉಪಮುಖ್ಯಮಂತ್ರಿಯನ್ನಾಗಿ ಮಾಡಿತು. ಅವರ ಮೇಲಿನ ಭ್ರಷ್ಟಾಚಾರದ ದೂರುಗಳು ವ್ಯಾಪಕವಾಗಿವೆ.

ಬಲೆಗೆ ಬಿದ್ದ ತೆಲಂಗಾಣ ರಾಷ್ಟ್ರ ಸಮಿತಿ

ದೆಹಲಿಯ ಉಪಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಅವರನ್ನು ಜಾರಿ ನಿರ್ದೇಶನಾಲಯ ವಿಚಾರಣೆ ನಡೆಸಿ ಬಂಧಿಸಿದೆ. ದೆಹಲಿ ಮದ್ಯ ಹಗರಣ ಪ್ರಕರಣದಲ್ಲಿ ತೆಲಂಗಾಣ ಮುಖ್ಯಮಂತ್ರಿ ಚಂದ್ರಶೇಖರ ರಾವ್ ಅವರ ಪುತ್ರಿ ಕವಿತಾ ಅವರನ್ನೂ ವಿಚಾರಣೆಗೆ ಒಳಪಡಿಸಲಾಗಿತ್ತು. ಕೇಂದ್ರ ಸರ್ಕಾರ ನಡೆಸಿದ ಯಾವುದೇ ಸಭೆಗಳಲ್ಲಿ ಚಂದ್ರಶೇಖರ ರಾವ್ ಅವರ ಪಕ್ಷ ಭಾಗವಹಿಸಿರಲಿಲ್ಲ. ಚಾರ್ಜ್‌ಶೀಟ್‌ನಲ್ಲಿ ಕವಿತಾ ಹೆಸರು ಕಾಣಿಸಿಕೊಂಡಿಲ್ಲ, ಬಿಜೆಪಿಯ ವಿರೋಧವು ಸ್ವಲ್ಪಮಟ್ಟಿಗೆ ಕ್ಷೀಣಿಸಿತು, ಪಾಟ್ನಾದಲ್ಲಿ ನಡೆದ ವಿರೋಧ ಪಕ್ಷಗಳ ಸಭೆಗೂ ಪಕ್ಷ ಹೋಗಿಲ್ಲ. ಆದರೆ ಮಣಿಪುರಕ್ಕೆ ಸಂಬಂಧಿಸಿದಂತೆ ಅಮಿತ್ ಶಾ ನಡೆಸಿದ ಸಭೆಯಲ್ಲಿ ಪಕ್ಷ ಭಾಗವಹಿಸಿದೆ.



'ಸುಲಭವಾಗಿ ಒಗೆಯುವ ಮತ್ತು ಬಟ್ಟೆಯ ಮೇಲಿನ ಕಠಿಣ ಕಲೆಗಳನ್ನು ತೆಗೆದುಹಾಕುವ ವಾಷಿಂಗ್ ಪೌಡರ್' ಎಂಬ ಹಿಂದೂಸ್ತಾನ್ ಯೂನಿಲಿವರ್ ಕಂಪೆನಿಯ ಸರ್ಫ್ ಎಕ್ಸೆಲ್ ವಾಷಿಂಗ್ ಪೌಡರ್ ಜಾಹಿರಾತನ್ನು ನಾವು ನೋಡಿದ್ದೇವೆ. ಅದೇ ರೀತಿ ಬಿಜೆಪಿ ಎಂಬ ಕಂಪನಿ, ರಾಜಕಾರಣಿಗಳು ಮೆತ್ತಿಕೊಂಡಿರುವ 'ಕಳಂಕ' ಎಂಬ ಕಲೆಗಳನ್ನು ತೆಗೆದುಹಾಕುವ ಉತ್ತಮ ಕಂಪನಿ ಎಂದು ಪ್ರಚಾರ ಮಾಡದೆ, ಕಳಂಕಿತರನ್ನು ತನ್ನ ಪಕ್ಷದಲ್ಲಿ ಸೇರಿಸಿಕೊಂಡು, ಅವರ ಮೇಲಿನ ಕಳಂಕಿತವೆಂಬ ಕೊಳೆಯನ್ನು ತೊಳೆದು ಪರಿಶುದ್ಧ ಮಾಡತೊಡಗಿದೆ. ತಾವು ಮಾಡಿರುವ ಭ್ರಷ್ಟಾಚಾರ ಎಂಬ ಕಳಂಕಗಳನ್ನು ಬಿಜೆಪಿ ಎಂಬ ವಾಷಿಂಗ್ ಮೆಷಿನ್ ಮೂಲಕ ತೊಳೆದು ಶುದ್ದಗೊಂಡಿರುವ ಭ್ರಷ್ಟ, ಕಳಂಕಿತ ರಾಜಕಾರಣಿಗಳೆಷ್ಟೊ.

ಇಡಿ ಅಧಿಕಾರಿಗಳಿಗೆ ವಿರೂಪಕ್ಷಪ್ಪ ಅವರ ಪುತ್ರನ ಮನೆ ವಿಳಾಸ ಸಿಗಲಿಲ್ಲ!!

ಬಿಹಾರದ ಮಾಜಿ ಮುಖ್ಯಮಂತ್ರಿ ಲಾಲು ಪ್ರಸಾದ್ ಯಾದವ್, ರಾಬ್ರಿ ದೇವಿ ಮತ್ತು ಹಾಲಿ ಉಪಮುಖ್ಯಮಂತ್ರಿ ತೇಜಸ್ವಿ ಯಾದವ್ ಅವರು ಜಾರಿ ನಿರ್ದೇಶನಾಲಯದ ತನಿಖೆಯ ಬಲೆನಲ್ಲಿ ಸಿಕ್ಕಿಬಿದ್ದಿದ್ದಾರೆ. ಕಾಂಗ್ರೆಸ್, ನ್ಯಾಶನಲಿಸ್ಟ್ ಕಾಂಗ್ರೆಸ್, ಬಹು ಜನ ಸಮಾಜ ಪಕ್ಷ, ಸಮಾಜವಾದಿ ಪಕ್ಷ, ತೃಣಮೂಲ ಕಾಂಗ್ರೆಸ್, ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನೆ, ವೈಎಸ್ಆರ್ ಕಾಂಗ್ರೆಸ್ ಮತ್ತು ಇತರ ವಿರೋಧ ಪಕ್ಷದ ನಾಯಕರನ್ನು ಇಡಿ ಸುತ್ತುವರೆದಿದೆ. ಕರ್ನಾಟಕದ ಬಿಜೆಪಿ ಶಾಸಕ ಮಾಡಾಳ್ ವಿರೂಪಕ್ಷಪ್ಪ ಅವರ ಪುತ್ರನ ಮನೆ ಮೇಲೆ ದಾಳಿ ನಡೆಸಿರುವ ಲೋಕಾಯುಕ್ತ ಪೊಲೀಸರು 6 ಕೋಟಿ ರೂ. ವಶಕ್ಕೆ ಪಡೆದಿದ್ದಾರೆ. ಆದರೆ ಇಡಿ ಅಧಿಕಾರಿಗಳಿಗೆ ಅವರ ಮನೆ ವಿಳಾಸ ಸಿಗಲೇ ಇಲ್ಲ.

ಬಿಜೆಪಿ ಸೇರಿದ ನಂತರ ಕಳಂಕ ರಹಿತರು

ತಮಿಳುನಾಡಿನಲ್ಲಿ ಗುಟ್ಕಾ ಹಗರಣಕ್ಕೆ ಸಂಬಂಧಿಸಿದಂತೆ ಮುಖ್ಯ ಕಾರ್ಯದರ್ಶಿ ಕಚೇರಿಯಲ್ಲಿ ದಾಳಿ ನಡೆದಿದೆ. ಆ ಸಂದರ್ಭದಲ್ಲಿ, ಕೇಂದ್ರ ಗುಪ್ತಚರ ಇಲಾಖೆ ಕ್ರಿಮಿನಲ್ ಮೊಕದ್ದಮೆಯನ್ನೂ ದಾಖಲಿಸದೆ ಹಣ ಕೇಳುವುದರಲ್ಲೇ ತುಂಬಾ ಆಯಾಸಪಟ್ಟಿದೆ. ಮಹಾರಾಷ್ಟ್ರ ಸ್ವಾಭಿಮಾನ್ ಪಕ್ಷವನ್ನು ಪ್ರಾರಂಭಿಸುವ ಮೊದಲು, ನಾರಾಯಣ್ ಸ್ವತಃ ರೂ. 300 ಕೋಟಿ ಅಕ್ರಮ ಹಣ ವರ್ಗಾವಣೆ ಪ್ರಕರಣದ ಆರೋಪಿ. ಅವರು ಬಿಜೆಪಿ ಸೇರಿದ ತಕ್ಷಣ ಅವರ ಮೇಲಿದ್ದ ಪ್ರಕಣರಣ ಮಾಯವಾಗಿತ್ತು. ಪಶ್ಚಿಮ ಬಂಗಾಳದಲ್ಲಿ ತೃಣಮೂಲ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಸುವೆಂದು ಅಧಿಕಾರಿ, ನಾರದ ಕುಟುಕು ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದರು. ಬಿಜೆಪಿಗೆ ಹೋಗಿ ಆಪರೇಷನ್ ಮಾಡಿದ ತಕ್ಷಣ ಅವರ ವಿರುದ್ಧದ ತನಿಖೆ ಕೋಮಾಕ್ಕೆ ಬಿದ್ದಿತ್ತು. ಸುವೆಂದು ಈಗ ಬಿಜೆಪಿಯಲ್ಲಿ ಶಾಸಕಾಂಗ ಪಕ್ಷದ ನಾಯಕರಾಗಿ ಅವತಾರವೆತ್ತಿದ್ದಾರೆ. 2010 ರಲ್ಲಿ, ಅಸ್ಸಾಂನಲ್ಲಿ ಕಾಂಗ್ರೆಸ್ ಸದಸ್ಯರಾಗಿದ್ದ ಬಿಸ್ವಾ ಶರ್ಮಾ ವಿರುದ್ಧ ಬಿಜೆಪಿ ಭ್ರಷ್ಟಾಚಾರದ ಆರೋಪವನ್ನು ದಾಖಲಿಸಿತು. ಅವರ ವಿರುದ್ಧದ ಭ್ರಷ್ಟಾಚಾರ ಆರೋಪಗಳನ್ನು 2015ರಲ್ಲಿ ಬಿಜೆಪಿ ವರದಿಯಾಗಿ ಪ್ರಕಟಿಸಿತ್ತು. ತಮ್ಮ ಪಕ್ಷ ಸೇರಿದ ನಂತರ ಭ್ರಷ್ಟಾಚಾರದ ಕಳಂಕವೆಲ್ಲ ಸಂಪೂರ್ಣವಾಗಿ ತೊಳೆದುಹೋಗಿ ಈಗ ಅಸ್ಸಾಂನ ಮುಖ್ಯಮಂತ್ರಿಯಾಗಿದ್ದಾರೆ.

ಸುದ್ದಿ ಸಂಸ್ಥೆಗಳನ್ನೂ ಬಿಡಲೊಲ್ಲರು

ಕೇಂದ್ರ ಸರ್ಕಾರವು ತಮ್ಮ ಉದ್ದೇಶಕ್ಕೆ ಉಪಯುಕ್ತವಾಗದಿದ್ದರೆ ಸುದ್ದಿ ಸಂಸ್ಥೆಗಳನ್ನೂ ಸುಮ್ಮನೆ ಬಿಡುವುದಿಲ್ಲ. ದೈನಿಕ್ ಭಾಸ್ಕರ್, ಭಾರತ್ ಸಮಾಚಾರ್, ನ್ಯೂಸ್ ಕ್ಲಿಕ್, ನ್ಯೂಸ್ ಲಾಂಡ್ರಿ, ದಿ ಕ್ವಿಂಟ್, ಗ್ರೇಟರ್ ಕಾಶ್ಮೀರ್ ಮತ್ತು ದಿ ವೈರ್ ಬಗ್ಗೆಯೂ ತನಿಖೆ ನಡೆಸಲಾಯಿತು. ಎನ್‌ಡಿಟಿವಿ ನಿರಂತರ ಪರಿಶೀಲನೆಗೆ ಒಳಗಾದಾಗ ಮೋದಿಯವರ ಸ್ನೇಹಿತ ಅದಾನಿ ಕಂಪನಿಯನ್ನೇ ತನ್ನ ವಶಕ್ಕೆ ಪಡೆದುಕೊಂಡರು. ಗುಜರಾತ್ ಹಿಂಸಾಚಾರದ ಕುರಿತು ಸಾಕ್ಷ್ಯಚಿತ್ರವನ್ನು ಪ್ರಕಟಿಸಿದ್ದಕ್ಕಾಗಿ ಆದಾಯ ತೆರಿಗೆ ಇಲಾಖೆ ಬಿಬಿಸಿಗೆ ಕಪಾಳಮೋಕ್ಷ ಮಾಡಿದೆ.

ಉತ್ತರಾಖಂಡದಲ್ಲಿ

2016ರ ಏಪ್ರಿಲ್‌ನಲ್ಲಿ ಬಿಜೆಪಿಯ ಪ್ರಚೋದನೆಯಿಂದ ಉತ್ತರಾಖಂಡದಲ್ಲಿ ಮುಖ್ಯಮಂತ್ರಿ ಹರೀಶ್ ರಾವತ್ ವಿರುದ್ಧ ಕೆಲವು ಕಾಂಗ್ರೆಸ್ ಶಾಸಕರು ಗಲಭೆ ನಡೆಸಿದ್ದರು. ಅವ್ಯವಸ್ಥೆಯ ಲಾಭ ಪಡೆದ ಮೋದಿ ಸರ್ಕಾರ ಅಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಿತು. ಆದರೆ ನ್ಯಾಯಮೂರ್ತಿ ಕೆ.ಎಂ.ಜೋಸೆಫ್ ನೇತೃತ್ವದ ಹೈಕೋರ್ಟ್ ಪೀಠ ರಾಷ್ಟ್ರಪತಿ ಆಳ್ವಿಕೆಯನ್ನು ರದ್ದುಗೊಳಿಸಿ, ಹರೀಶ್ ರಾವತ್ ಸರ್ಕಾರಕ್ಕೆ ವಿಶ್ವಾಸಮತ ಯಾಚಿಸುವಂತೆ ಆದೇಶ ನೀಡಿತು. ರಾವತ್ ಅಧಿಕಾರ ಉಳಿಸಿಕೊಂಡರು. ರಾಷ್ಟ್ರಪತಿ ಆಳ್ವಿಕೆ ರದ್ದುಪಡಿಸಿದ ಕೆ.ಎಂ.ಜೋಸೆಫ್ ಅವರ ಬಡ್ತಿ ಕೇಂದ್ರ ಸಚಿವರಿಂದ ವಿಳಂಬವಾಗಿ, ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗುವ ಅವಕಾಶವೂ ಅವರ ಕೈತಪ್ಪಿತು.

ತ್ರಿಪುರಾ

2018 ರಲ್ಲಿ ತ್ರಿಪುರಾದಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವ ಮೊದಲು, ಪಕ್ಷವು ವಿಧಾನಸಭೆಯಲ್ಲಿ ಒಬ್ಬ ಸದಸ್ಯರನ್ನೂ ಹೊಂದಿರಲಿಲ್ಲ. ತೃಣಮೂಲ ಕಾಂಗ್ರೆಸ್ ಮತ್ತು ಕಾಂಗ್ರೆಸ್ ಶಾಸಕರುಗಳನ್ನು ಬಲೆಗೆ ಬೀಳಿಸುವ ಮೂಲಕ, ಅಲ್ಲಿ ಬಿಜೆಪಿ ವಿರೋಧ ಪಕ್ಷವಾಗಿ ಮಾರ್ಪಟ್ಟಿತು.

ಪುದುಚೇರಿ

ಪುದುಚೇರಿಯಲ್ಲಿ 2016ರಲ್ಲಿ 30 ಸ್ಥಾನಗಳ ಪೈಕಿ 15ರಲ್ಲಿ ಕಾಂಗ್ರೆಸ್ ಗೆದ್ದಿತ್ತು. ಅದು ಡಿಎಂಕೆ ಶಾಸಕರ ಬೆಂಬಲದೊಂದಿಗೆ ವಿ. ನಾರಾಯಣಸ್ವಾಮಿ ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಿ ಸರ್ಕಾರ ರಚಿಸಿತು. ಚುನಾವಣೆಗೆ ಇನ್ನು ಮೂರು ತಿಂಗಳು ಮಾತ್ರ ಬಾಕಿ ಇರುವಾಗ ಕಾಂಗ್ರೆಸ್ ಪಕ್ಷದ ಇಬ್ಬರು ಸಚಿವರು ಹಾಗೂ 6 ಶಾಸಕರನ್ನು ಬಲೆಗೆ ಬೀಳಿಸುವ ಮೂಲಕ ಆ ಸರ್ಕಾರವನ್ನು ಬಿಜೆಪಿ ಉರುಳಿಸಿತು. ಬಿಜೆಪಿಯಿಂದ ಈಗಾಗಲೇ ಮೂವರು ಸದಸ್ಯರು ನಾಮನಿರ್ದೇಶಿತ ಸದಸ್ಯರಾಗಿರುವುದು ಬಿಜೆಪಿಗೆ ಅನುಕೂಲಕರವಾಗಿದೆ. ಅದೇ ನಾಮನಿರ್ದೇಶನ ಸದಸ್ಯರ ತಂತ್ರವನ್ನು ಬಳಸಿಕೊಂಡು, ಬಿಜೆಪಿಯು ಎನ್ಆರ್ ಕಾಂಗ್ರೆಸ್ ಶಾಸಕರಿಗಿಂತ ಹೆಚ್ಚಿನ ಸಂಖ್ಯೆಯ ಶಾಸಕರನ್ನು ಹೊಂದಿದೆ. ಈಗ ರಂಗಸ್ವಾಮಿ ಹೆಸರಿಗಷ್ಟೇ ಮುಖ್ಯಮಂತ್ರಿ. ಲೆಫ್ಟಿನೆಂಟ್ ಗವರ್ನರ್ ಆಗಿರುವ ತಮಿಳಿಸೈ ಸೌಂದರ್ ರಾಜನ್ ಅವರು ಎಲ್ಲಾ ಅಧಿಕಾರಗಳನ್ನು ತಮ್ಮ ಕೈಯಲ್ಲಿ ಹಿಡಿದಿದ್ದಾರೆ. ಪರೋಕ್ಷವಾಗಿಯೂ ಅಲ್ಲ; ಅವರು ನೇರವಾಗಿ ಆಳುತೊಡಗಿದ್ದಾರೆ.

ಮಾಜಿ ಮುಖ್ಯಮಂತ್ರಿ ಕಲಿಖೋ ಪುಲ್ ಆತ್ಮಹತ್ಯೆ

2016ರಲ್ಲಿ ಅರುಣಾಚಲ ಪ್ರದೇಶದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಿದ್ದು, 60ರಲ್ಲಿ 11 ಸದಸ್ಯರನ್ನು ಮಾತ್ರ ಪಡೆದಿತ್ತು. ಇವರನ್ನು ನಂಬಿದ ಮಾಜಿ ಮುಖ್ಯಮಂತ್ರಿ ಕಲಿಖೋ ಪುಲ್ ಆತ್ಮಹತ್ಯೆ ಮಾಡಿಕೊಂಡರು. ಸುಪ್ರೀಂ ಕೋರ್ಟ್ ಅವರನ್ನು ಪದಚ್ಯುತಗೊಳಿಸಿ ತನ್ನ ಪ್ರತಿಸ್ಪರ್ಧಿ ನಬಮ್ ತುಕಿಯನ್ನು ಮರುಸ್ಥಾಪಿಸಿದ ಒಂದು ತಿಂಗಳ ನಂತರ, ಮುಖ್ಯಮಂತ್ರಿಯವರ ಅಧಿಕೃತ ಬಂಗಲೆಯ ಬೆಡ್ ರೂಂನಲ್ಲಿ ಸೀಲಿಂಗ್ ಫ್ಯಾನ್‌ಗೆ ನೇಣು ಬಿಗಿದ ಸ್ಥಿತಿಯಲ್ಲಿ ಶ್ರೀ ಪುಲ್ ಅವರ ಮೃತದೇಹ ಪತ್ತೆಯಾಗಿತ್ತು, ಆ ಬಂಗಲೆಯನ್ನು ಅವರು ಇನ್ನೂ ಖಾಲಿ ಮಾಡಿರಲಿಲ್ಲ.

ಗೋವಾ, ಮಣಿಪುರ, ಮೇಘಾಲಯ

2017ರಲ್ಲಿ ಬಿಜೆಪಿ ಗೋವಾದಲ್ಲಿ ಕುದುರೆ ವ್ಯಾಪಾರ ನಡೆಸುವ ಮೂಲಕ ಅಡ್ಡದಾರಿಯಲ್ಲಿ ಅಧಿಕಾರಕ್ಕೆ ಬಂದಿತ್ತು. ಅದೇ ರೀತಿ ಮಣಿಪುರದಲ್ಲಿ ಬಿಜೆಪಿ ಡಬಲ್ ಇಂಜಿನ್ ಆಡಳಿತ ನಡೆಸುತ್ತಿದ್ದು, ಅಲ್ಲಿ ಇದೀಗ ಬೆಂಕಿ ಹೊತ್ತಿಕೊಂಡಿದೆ. 2018ರ ಮೇಘಾಲಯ ಚುನಾವಣೆಯಲ್ಲಿ ಕಾಂಗ್ರೆಸ್ 21 ಸ್ಥಾನಗಳನ್ನು ಗೆದ್ದುಕೊಂಡಿತ್ತು, ಕೇವಲ 2 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದ್ದ ಬಿಜೆಪಿ, 19 ಸ್ಥಾನಗಳನ್ನು ಗೆದ್ದ ರಾಷ್ಟ್ರೀಯ ಪೀಪಲ್ಸ್ ಪಾರ್ಟಿ (ಓಕಕ)ಯೊಂದಿಗೆ ಅಧಿಕಾರವನ್ನು ಹಂಚಿಕೊಂಡಿತು. 2023ರಲ್ಲಿ ನಡೆದ ಚುನಾವಣೆಯಲ್ಲಿ ಎನ್.ಪಿ.ಪಿ. 26 ಸ್ಥಾನಗಳನ್ನು ಪಡೆದಿದ್ದರೆ, ಬಿಜೆಪಿ 2 ಸ್ಥಾನವನ್ನಷ್ಟೇ ಪಡೆದು ಸರ್ಕಾರದ ಭಾಗವಾಗಿದೆ.

ಕರ್ನಾಟಕ

2018 ರ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಗೆ ಸಂಪೂರ್ಣ ಬಹುಮತವಿಲ್ಲದಿದ್ದರೂ, ರಾಜ್ಯಪಾಲರ ಆಶೀರ್ವಾದದೊಂದಿಗೆ ಯಡಿಯೂರಪ್ಪ ಸರ್ಕಾರ ರಚಿಸಿದರು. ಆದರೆ, ಬಹುಮತ ಸಾಬೀತುಪಡಿಸಲು ಸಾಧ್ಯವಾಗದೆ ಕೆಲವೇ ದಿನಗಳಲ್ಲಿ ಅಧಿಕಾರದಿಂದ ಇಳಿಯಬೇಕಾಯಿತು. ಆದರೆ, ಪಟ್ಟು ಬಿಡದ ವಿಕ್ರಮಾಧಿತ್ಯನತೆ ರಾಜ್ಯದಲ್ಲಿ ಅಧಿಕಾರ ಹಿಡಿಯುವ ತನ್ನ ಪ್ರಯತ್ನವನ್ನು ಮುಂದುವರಿಸಿತು. ಆಡಳಿತಾರೂಢ ಕಾಂಗ್ರೆಸ್ ಮತ್ತು ಜಾತ್ಯತೀತ ಜನತಾದಳದ ಶಾಸಕರನ್ನು ಖರೀದಿಸಿ 2021ರಲ್ಲಿ ಮತ್ತೆ ಸರ್ಕಾರ ರಚಿಸಿತು. 2023ರ ಚುನಾವಣೆಯಲ್ಲಿ ಕರ್ನಾಟಕದ ಜನತೆ ಬಿಜೆಪಿಗೆ ತಕ್ಕ ಪಾಠ ಕಲಿಸಿದ್ದಾರೆ.

ಜಮ್ಮು ಕಾಶ್ಮೀರ

ಕೇಂದ್ರ ಬಿಜೆಪಿ ಸರ್ಕಾರವು ಮೇಘಬೂಬ ಮುಫ್ತಿ ಆಡಳಿತಕ್ಕೆ ದ್ರೋಹ ಬಗೆದು ರಾಜ್ಯ ವಿಧಾನಸಭೆಯನ್ನು ವಿಸರ್ಜಿಸಿ ಮುಖ್ಯಮಂತ್ರಿ ಆಳ್ವಿಕೆಯನ್ನು ಜಾರಿಗೆ ತಂದಿತು. ರಾಜ್ಯವನ್ನು 2 ಕೇಂದ್ರಾಡಳಿತ ಪ್ರದೇಶಗಳಾಗಿ ಒಡೆದು ಸಂವಿಧಾನದ 370 ನೇ ವಿಧಿಯನ್ನು ರದ್ದುಗೊಳಿಸಿತು. ಅಲ್ಲಿ ಶಾಂತಿ ನೆಲೆಸಿದೆ ಎಂದು ಹೇಳಿಕೊಂಡರೂ ರಾಜ್ಯ ಇನ್ನೂ ಸಹಜ ಸ್ಥಿತಿಗೆ ಬಂದಿಲ್ಲ. ಜೂನ್ 2018 ರಿಂದ 5 ವರ್ಷಗಳು ಕಳೆದಿವೆ. ಅಲ್ಲಿ ಇನ್ನೂ ಚುನಾವಣೆ ನಡೆದಿಲ್ಲ. ಬಿಜೆಪಿ ರಾಜ್ಯಪಾಲರ ಮೂಲಕ ಆಡಳಿತ ನಡೆಸುತ್ತಿದೆ.

ಸಿಕ್ಕಿಂ

2019 ರಲ್ಲಿ, ಸಿಕ್ಕಿಂನ 32 ಕ್ಷೇತ್ರಗಳಲ್ಲಿ, ಸಿಕ್ಕಿಂ ಕ್ರಾಂತಿಕಾರಿ ಮೋರ್ಚಾ 17

ಪುಟ 15 ಕ್ಕೆ

ಮೋದಿ ಸರ್ಕಾರದ 9 ವರ್ಷಗಳ ಸಾಧನೆಗಳಲ್ಲಿ ಅಸಂಘಟಿತ ಕಾರ್ಮಿಕರಿಗೆ ಪಿಂಚಣಿ ಎಂಬ ಘೋಷಣೆಯೊಂದಿಗೆ ಜಾರಿಗೆ ತಂದಿರುವ 'ಅಟಲ್ ಪಿಂಚಣಿ ಯೋಜನೆ'ಯೂ ಒಂದು. 'ಮೋದಿ ಸರ್ಕಾರ ಅಸಂಘಟಿತ ಕಾರ್ಮಿಕರ ವೃದ್ಯಾಪ್ಯ ಜೀವನಕ್ಕೆ ಆರ್ಥಿಕ ಭದ್ರತೆ ಮತ್ತು ಭರವಸೆಯನ್ನು ಒದಗಿಸುವ ಕಾಳಜಿಯಿಂದ ಈ ಪಿಂಚಣಿ ಯೋಜನೆ ಜಾರಿಗೆ ತಂದಿದೆ, 60 ವರ್ಷ ವಯಸ್ಸಿನ ನಂತರ ತಿಂಗಳಿಗೆ 3000 ರೂಪಾಯಿ ಪಿಂಚಣಿ ದೊರೆಯುತ್ತದೆ' ಎಂದು ದೊಡ್ಡ ಧ್ವನಿಯಲ್ಲಿ ಪ್ರಚಾರ ಮಾಡತೊಡಗಿದ್ದಾರೆ. ಆದರೆ, ನವ–ಉದಾರವಾದಿ ನೀತಿಗಳ ಜಾರಿಯ ಭಾಗವಾಗಿ, ಸರ್ಕಾರ ತನ್ನ ಸಾಮಾಜಿಕ ಜವಾಬ್ದಾರಿಗಳಿಂದ ಕಳಚಿಕೊಳ್ಳಲು ಈ ಯೋಜನೆ ರೂಪುಗೊಳಿಸಲಾಗಿದೆ ಎಂಬ ಸತ್ಯವನ್ನು ಇವರು ಮರೆಮಾಚುತ್ತಾರೆ.

ಸರ್ಕಾರ ತನ್ನ ಸಾಮಾಜಿಕ ಜವಾಬ್ದಾರಿಗಳಿಂದ ಕಳಚಿಕೊಳ್ಳಲು ತಂದ ಯೋಜನೆ

ಅಟಲ್ ಪಿಂಚಣಿ ಯೋಜನೆ

ಸಿ. ಸಿದ್ದಯ್ಯ

ಮೋದಿ ಭಾರತದ ಹಿರಿಯ ನಾಗರಿಕರಿಗೆ ಆರ್ಥಿಕ ಭದ್ರತೆ ಮತ್ತು ಭರವಸೆಯನ್ನು ಒದಗಿಸಲು ಪಿಂಚಣಿ ಯೋಜನೆ ರೂಪಿಸಿದ್ದಾರೆ. 60 ವರ್ಷ ವಯಸ್ಸಿನ ನಂತರದ ಎಲ್ಲರಿಗೂ ಪಿಂಚಣಿ ವ್ಯವಸ್ಥೆ ತಂದಿದ್ದಾರೆ. ತಿಂಗಳಿಗೆ 3,000 ರೂ ಪಿಂಚಣಿ ಸಿಗುತ್ತಂತೆ. ವೃದ್ಧಾಪ್ಯ ಜೀವನಕ್ಕೆ ಮೋದಿ ಆಸರೆ ಒದಗಿಸಿದ್ದಾರೆ. ಇಂತಹ ಮಾತುಗಳು ಅಟಲ್ ಪಿಂಚಣಿ ಯೋಜನೆ ಘೋಷಣೆ ಸಮಯದಲ್ಲಿ ಸಾರ್ವಜನಿಕರ ಮಧ್ಯೆ ಹರಿದಾಡುತ್ತಿತ್ತು. ಇಂದು 600 ರೂ. ಸಿಗುವ ವೃದ್ಧಾಪ್ಯ ವೇತನ 3,000 ರೂ. ಸಿಗುತ್ತದೆ ಎಂದೇ ಅವರು ನಂಬಿದ್ದರು. ಕಾಲಕ್ರಮೇಣ ಇದು ಸರ್ಕಾರದ ಕೊಡುಗೆಯಲ್ಲ, ಬದಲಾಗಿ ಅಟಲ್ ಪಿಂಚಣಿ ಯೋಜನೆ ಮತ್ತು, 12.09.2019 ರಲ್ಲಿ ಪ್ರಾರಂಭವಾದ "ಪ್ರಧಾನ ಮಂತ್ರಿ ಕಿಸಾನ್ ಮಾನ್ ಧನ್ ಯೋಜನೆ (PMKMY)", 18 ರಿಂದ 40 ರ ಪ್ರವೇಶ ವಯಸ್ಸಿನವರಿಗೆ ಸ್ವಯಂಪ್ರೇರಿತ ಮತ್ತು ಕೊಡುಗೆ ಪಿಂಚಣಿ ಯೋಜನೆಗಳು ಎಂಬ ಸತ್ಯ ಅರಿವಾಯ್ತು.

ಪ್ರಜೆಗಳು ತಮ್ಮ ನಿವೃತ್ತಿ ಕಾಲದ ಬದುಕಿಗಾಗಿ ಸರ್ಕಾರದಿಂದ ಆರ್ಥಿಕ ಸಹಾಯ ಪಡೆಯಲು ಬಯಸುವುದು ತಪ್ಪೇನಲ್ಲ. ಏಕೆಂದರೆ, ತಮ್ಮ ದುಡಿಮೆಯ ಮೂಲಕ, ಸರಕುಗಳ ಉತ್ಪನ್ನ ಮತ್ತು ಸೇವೆಗಳಲ್ಲಿ ಭಾಗಿಯಾಗುವ ಮೂಲಕ ದೇಶದ ಒಟ್ಟು ದೇಶೀಯ ಉತ್ಪನ್ನ (ಜಿಡಿಪಿ) ಕ್ಕೆ ಕೊಡುಗೆ ನೀಡುತ್ತಾರೆ. ತನ್ನ ಬದುಕಿನುದ್ದಕ್ಕೂ ವಿವಿಧ ರೀತಿಯ ತೆರಿಗೆಗಳನ್ನು ಕಟ್ಟುವ ಮೂಲಕ ಸರ್ಕಾರದ ಬೊಕ್ಕಸಕ್ಕೆ ಹಣ ತುಂಬುತ್ತಾರೆ. ಪ್ರಭುತ್ವ ಎಂಬುದು ಪ್ರಜೆಗಳಿಂದ, ಪ್ರಜೆಗಳಿಗಾಗಿ, ಪ್ರಜೆಗಳ ಸರ್ಕಾರ. ತನ್ನ ಪ್ರಜೆಗಳಿಗೆ, ನಿವೃತ್ತಿ ನಂತರ, ಮುಪ್ಪಿನ ಕಾಲದಲ್ಲಿನ ಜೀವನಕ್ಕೆ ಸಾಮಾಜಿಕ ಭದ್ರತೆ ಒದಗಿಸುವುದು ಪ್ರಭುತ್ವದ ಕರ್ತವ್ಯ. ಈ ದೃಷ್ಟಿ ಇಟ್ಟುಕೊಂಡೇ ಸರ್ಕಾರ ಹಲವು ಬಗೆಯ ನಿವೃತ್ತಿ ಯೋಜನೆಗಳನ್ನು ರೂಪಿಸಿತ್ತು. ಈ ನಿವೃತ್ತಿ ಯೋಜನೆಗಳಿಗೆ ಫಲಾನುಭವಿಗಳಿಂದ ಯಾವುದೇ ಪ್ರತ್ಯೇಕ ವಂತಿಗೆ/ಕೊಡುಗೆ ಪಡೆಯುತ್ತಿರಲಿಲ್ಲ. ಸರ್ಕಾರಿ ನೌಕರರಿಗೂ ಅವರಿಂದ ವಂತಿಗೆ ಪಡೆಯದೆ ಮೂರನೇ ಸೌಲಭ್ಯವಾಗಿ ಪಿಂಚಣಿ ಒದಗಿಸುತ್ತಿತ್ತು. ಇದನ್ನು ಈಗ ಹಳೆಯ ಪಿಂಚಣಿ ಯೋಜನೆ (OPS) ಎನ್ನುತ್ತಾರೆ. ಹಳೆಯ ಪಿಂಚಣಿಯಲ್ಲಿ ತಮ್ಮ ವೃದ್ಧಾಪ್ಯ ಜೀವನವನ್ನು ಯಾರ ಹಂಗೂ ಇಲ್ಲದೆ ಒಂದಷ್ಟು ನೆಮ್ಮದಿಯಿಂದ ಕಳೆಯುತ್ತಿದ್ದರು. ಈಗ ಇದರ ಜಾಗದಲ್ಲಿ ನೌಕರರಿಂದ ನಿಗದಿತ ವಂತಿಗೆ ಪಡೆದು ಪಿಂಚಣಿ ಸೌಲಭ್ಯ ಒದಗಿಸುವ ಹೊಸ ಪಿಂಚಣಿ ಯೋಜನೆ (NPS) ಜಾರಿಗೆ ಬಂದಿದೆ. ಇದು ಮೂರುಕಾಸಿನ ಪಿಂಚಣಿ ಎನ್ನುವಷ್ಟು ಕಡಿಮೆ ಪಿಂಚಣಿ ದೊರೆಯುತ್ತದೆ. ಮುಂದಿನ ದಿನಗಳಲ್ಲಿ ಸರ್ಕಾರಿ ಉದ್ಯೋಗಿಗಳ ಪಿಂಚಣಿಗಾಗಿ ಸರ್ಕಾರ ವೆಚ್ಚ ಮಾಡಬೇಕಿಲ್ಲ. ಅಷ್ಟರ ಮಟ್ಟಿಗೆ ಪಿಂಚಣಿಗಾಗಿ ವ್ಯಯಿಸುತ್ತಿರುವ ಸರ್ಕಾರದ ಹಣ ಉಳಿತಾಯವಾಗುತ್ತದೆ. ಸರ್ಕಾರಿ ಉದ್ಯೋಗಿಗಳ ಈ ಪಿಂಚಣಿಗಳ ಕುರಿತು ಇಲ್ಲಿ ಬರೆಯುತ್ತಿಲ್ಲ. ಅಸಂಘಟಿತ ವಲಯದಲ್ಲಿ ದುಡಿಯುವ ಜನರಿಗಾಗಿ ಇರುವ ಪಿಂಚಣಿ ಬಗ್ಗೆ ನೋಡೋಣ.

ವೃದ್ಧಾಪ್ಯ ವೇತನ

ಭಾರತದಲ್ಲಿ 2011–12 ರ NSSO ಸಮೀಕ್ಷೆಯ 66 ನೇ ಸುತ್ತಿನ ಪ್ರಕಾರ 47.29 ಕೋಟಿ ಒಟ್ಟು ಕಾರ್ಮಿಕರಲ್ಲಿ ಅಸಂಘಟಿತ ವಲಯದ ಕಾರ್ಮಿಕರೇ 88% (41.61 ಕೋಟಿ) ರಷ್ಟಿದ್ದಾರೆ. ಈ ಎಲ್ಲಾ ಕಾರ್ಮಿಕರಿಗೆ ನಿವೃತ್ತಿ ನಂತರದ ಭದ್ರತೆ ಒದಗಿಸುವುದು ಸರ್ಕಾರದ ಕರ್ತವ್ಯ.



ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ಪಿಂಚಣಿ ಯೋಜನೆ (IGNOAPS) ಭಾರತದಲ್ಲಿ ಸರ್ಕಾರದ ಬೆಂಬಲಿತ ಕಾರ್ಯಕ್ರಮವಾಗಿದ್ದು ಅದು ಹಿರಿಯ ನಾಗರಿಕರಿಗೆ ಹಣಕಾಸಿನ ನೆರವು ನೀಡುತ್ತದೆ. ಇದು ದೇಶದ ಹಿರಿಯರಿಗೆ ಅತ್ಯಂತ ಜನಪ್ರಿಯ ಕಾರ್ಯಕ್ರಮಗಳಲ್ಲಿ ಒಂದಾಗಿದೆ. ಸರ್ಕಾರದ ಮಾರ್ಗಸೂಚಿಗಳ ಪ್ರಕಾರ ಬಡತನ ರೇಖೆಗಿಂತ ಕೆಳಗಿರುವ 60 ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನವರಿಗೆ ಇದನ್ನು ನಿರ್ದಿಷ್ಟವಾಗಿ ವಿನ್ಯಾಸಗೊಳಿಸಲಾಗಿದೆ.

ಸಂಧ್ಯಾ ಸುರಕ್ಷಾ ಯೋಜನೆ ಮುಂತಾದ ಯೋಜನೆಗಳ ಮೂಲಕ ಇಂದಿಗೂ 60 ವರ್ಷ ದಾಟಿದವರು 800 ರಿಂದ 1200 ರೂ. ವರೆಗೆ ವೃದ್ಧಾಪ್ಯ ವೇತನ ಪಡೆಯುತ್ತಿದ್ದಾರೆ. ವಿದವೆಯರು 800 ರೂ. ವಿಧವಾ ವೇತನ ಪಡೆಯುತ್ತಾರೆ. ಅಂಗವಿಕಲರು 800 ರೂ. ಮಾಸಾಶನ ಪಡೆಯುತ್ತಿದ್ದಾರೆ. ಸರ್ಕಾರ ಇವರಿಂದ ಪಿಂಚಣಿಗಾಗಿ ಯಾವುದೇ ಕೊಡುಗೆ ಅಥವಾ ವಂತಿಗೆ ಪಡೆಯುತ್ತಿಲ್ಲ. ಇವೆಲ್ಲವೂ ಸಾಮಾಜಿಕ ಭದ್ರತೆ ಒದಗಿಸುವ ಸರ್ಕಾರದ ಜವಾಬ್ದಾರಿಯಂತೆ ನೀಡುವ ಕೊಡುಗೆಗಳಾಗಿವೆ. ಆದರೆ, ಇಂದು ಸರ್ಕಾರ ಸಾಮಾಜಿಕ ಭದ್ರತೆಗಾಗಿ ನೀಡುತ್ತಿರುವ ಕೊಡುಗೆ ರಹಿತವಾದ ಈ ಯೋಜನೆಗಳು ಹೆಚ್ಚು ಕಾಲ ಉಳಿಯುವುದಿಲ್ಲ.

"ಜನತೆ ತಮ್ಮ ಮುಪ್ಪಿನ ಕಾಲದ ಬದುಕಿಗೆ ತಾವೇ ತಮ್ಮ ದುಡಿಮೆಯ ಒಂದಷ್ಟು ಹಣ ಉಳಿತಾಯ ಮಾಡಿಕೊಳ್ಳಬೇಕು. ಜನರ ಸಾಮಾಜಿಕ ಭದ್ರತೆ ಸರ್ಕಾರದ್ದಾಗಿರಬಾರದು. ಸರ್ಕಾರ ಇದಕ್ಕೆ ಹಣ ವೆಚ್ಚ ಮಾಡಬಾರದು. ಇವೆಲ್ಲವನ್ನೂ ಹಿಂಪಡೆಯಬೇಕು" ಇದು ಮುಕ್ತ ಆರ್ಥಿಕ ನೀತಿಗಳ ನೀತಿಪಾಠ.

ವಿಶ್ವಬ್ಯಾಂಕ್ ಸೂಚಿಸಿದಂತೆ

ಭಾರತ ಸರ್ಕಾರ 1990ರ ದಶಕದಲ್ಲಿ ನವ ಉದಾರವಾದಿ ನೀತಿಗಳನ್ನು ಒಪ್ಪಿಕೊಂಡ ನಂತರ, ವೃದ್ಧಾಪ್ಯ ವೇತನ ಸೇರಿದಂತೆ ಸಮಾಜ ಕಲ್ಯಾಣಕ್ಕಾಗಿ ಮತ್ತು ಸಾಮಾಜಿಕ ಭದ್ರತೆಗಾಗಿ ಸರ್ಕಾರ ಮಾಡುವ ಸಾರ್ವಜನಿಕ ವೆಚ್ಚಗಳನ್ನು ಕಡಿಮೆ ಮಾಡಬೇಕು ಎಂಬ ಒತ್ತಡಕ್ಕೆ ಸಿಲುಕಿದೆ. (ಇದು ನಮ್ಮನ್ನಾಳುವ ಬಂಡವಾಳಶಾಹಿ ವರ್ಗಕ್ಕೆ ಪ್ರಿಯವಾದುದಾಗಿದೆ.) 60 ವರ್ಷ ವಯಸ್ಸಾದ ಜನರಿಗೆ ಸಾಮಾಜಿಕ ಸುರಕ್ಷತಾ ಜಾಲವನ್ನು ಒದಗಿಸಲು ಸರ್ಕಾರವು ಸಾಕಷ್ಟು ಸಂಪನ್ಮೂಲಗಳನ್ನು ಹೊಂದಿಲ್ಲ. ಇಂದು ನಿವೃತ್ತಿ ಪ್ರಯೋಜನಗಳು ಕೊಡುಗೆ ರಹಿತ ಯೋಜನೆಗಳಾಗಿವೆ. ನಿವೃತ್ತಿ ಪ್ರಯೋಜನಗಳನ್ನು ಕೊಡುಗೆ ಯೋಜನೆಗಳಾಗಿ ಪರಿವರ್ತಿಸಬೇಕು. ವೃದ್ಧಾಪ್ಯ ವೇತನ ಪಡೆಯಲು ಬಯಸುವ ದುಡಿಯುವ ಜನರಿಂದಲೇ ನಿಧಿಗಳು ಬರಬೇಕು. ನಿವೃತ್ತಿ ಪ್ರಯೋಜನೆಗಳ ಯೋಜನೆಗಳಲ್ಲಿ ಖಾಸಗೀ ಸಂಸ್ಥೆಗಳಿಗೂ ಅವಕಾಶ ಇರಬೇಕು. ಇದು ವಿಶ್ವ ಬ್ಯಾಂಕ್ ಸೂಚನೆ.

ಇದನ್ನು 90ರ ದಶಕದಿಂದ ಆಳುತ್ತಾ ಬಂದಿರುವ ಸರ್ಕಾರಗಳು ಅನುಸರಿಸುತ್ತಾ ಬಂದಿವೆ. ಇದನ್ನು ಹಂತ ಹಂತವಾಗಿ ಜಾರಿಗೆ ತರುವ ಪ್ರಯತ್ನ ನಡೆಯುತ್ತಲೇ ಇದೆ. ಸಾಮಾಜಿಕ ಭದ್ರತಾ ವ್ಯವಸ್ಥೆಯಲ್ಲಿ ಸರ್ಕಾರ ಕೊಡುತ್ತಿರುವ ವೃದ್ಧಾಪ್ಯ ವೇತನ, ವಿಧವಾ ವೇತನ, ಅಂಗವಿಕಲರ ಮಾಸಾಶನ ಮುಂತಾದವುಗಳೂ ಸೇರಿವೆ. ಈ ಯೋಜನೆಗಳಿಂದ ಸರ್ಕಾರಕ್ಕೆ ಸಾವಿರಾರು ಕೋಟಿ ರೂ.ಗಳ ನಷ್ಟವಾಗುತ್ತಿದೆ, ಸರ್ಕಾರದ ಹೊರೆ ಕಡಿಮೆ ಮಾಡಿಕೊಳ್ಳಬೇಕು, ಸಾಮಾಜಿಕ ಭದ್ರತಾ ಯೋಜನೆಗಳಿಗೆ ಮಾಡುತ್ತಿರುವ ವೆಚ್ಚವನ್ನು ಸಾಧ್ಯವಾದಷ್ಟು ಕಡಿಮೆ ಮಾಡಿಕೊಳ್ಳಬೇಕು ಎಂಬುದು ವಿಶ್ವಬ್ಯಾಂಕ್ ನ ಸೂಚನೆ.

ಅಟಲ್ ಪಿಂಚಣಿ ಯೋಜನೆ (APY)

"ಭಾರತ ಸರ್ಕಾರವು ದುಡಿಯುವ ಜನರ ವೃದ್ಧಾಪ್ಯದ ಆದಾಯ ಭದ್ರತೆಯ ಬಗ್ಗೆ ಹೆಚ್ಚು ಕಾಳಜಿ ವಹಿಸುತ್ತದೆ ಮತ್ತು ಅವರನ್ನು ಪಿಂಚಣಿ ವ್ಯವಸ್ಥೆಗೆ ಸೇರಲು ಪ್ರೋತ್ಸಾಹಿಸುವ ಮತ್ತು ಸಕ್ರಿಯಗೊಳಿಸುವತ್ತ ಗಮನಹರಿಸಿದೆ" ಎನ್ನುವ ರಾಷ್ಟ್ರೀಯ ಪಿಂಚಣಿ ಯೋಜನೆ (NPS) ಎಂಬುದು ವಿಶ್ವ ಬ್ಯಾಂಕ್ ಸೂಚನೆಯ ಪಾಲನೆಗಾಗಿ ರೂಪುಗೊಂಡ ಯೋಜನೆಯಾಗಿದೆ.

ಮೋದಿ ನೇತೃತ್ವದ ಒಕ್ಕೂಟ ಸರ್ಕಾರದ ಹಣಕಾಸು ಸಚಿವರು ತಮ್ಮ 2015–16ರ ಬಜೆಟ್ ಭಾಷಣದಲ್ಲಿ ಅಟಲ್ ಪಿಂಚಣಿ ಯೋಜನೆ (APY) ಎಂಬ ಹೊಸ ಉಪಕ್ರಮವನ್ನು ಘೋಷಿಸಿದರು. APY ಅನ್ನು ಜೂನ್ 1, 2015 ರಿಂದ ಪ್ರಾರಂಭಿಸಲಾಯಿತು. ಪಿಂಚಣಿ ಪುಟ 14 ಕ್ಕೆ

ಕೇಂದ್ರದಲ್ಲಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದು ಮೇ 30 ಕ್ಕೆ 9 ವರ್ಷಗಳು ಕಳೆದಿವೆ. ಮೋದಿ ಆಡಳಿತದ ಸಾಧನೆಗಳ ಬಗ್ಗೆ ಬಿಜೆಪಿ, ಸಂಘಪರಿವಾರ ಹಾಗೂ ಕಾರ್ಪೋರೇಟ್ ಒಡೆತನದ ಮಾಧ್ಯಮಗಳು ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ನಿರಂತರವಾಗಿ ಪ್ರಚಾರ ಮಾಡುತ್ತಿದ್ದಾರೆ. ಅವರು ಸಾಧನೆಗಳೆಂದು ಹೇಳುತ್ತಿರುವುದೆಲ್ಲಾ ನಿಜವಾಗಿಯೂ ಸಾಧನೆಗಳೇ? ಅವುಗಳು ಜನಪರವಾಗಿವೆಯೇ? ರಾಷ್ಟ್ರದ ಹಿತ ರಕ್ಷಿಸುವಂಥವೇ? ಸರ್ಕಾರದ ಈ ಎಲ್ಲಾ ಯೋಜನೆಗಳ ನಿಜವಾದ ಉದ್ದೇಶಗಳೇನು? ನವ ಉದಾರೀಕರಣ ನೀತಿಗಳ ಜಾರಿಗೆ ಈ ಯೋಜನೆಗಳನ್ನು ರೂಪಿಸಿ ಜಾರಿಗೆ ತರಲಾಗುತ್ತಿದೆಯೇ? ಭಾರತದ ಪ್ರತಿಯೊಂದು ವಲಯಗಳನ್ನು ಕಾರ್ಪೋರೇಟ್ ಸಂಸ್ಥೆಗಳಿಗೆ ಒಪ್ಪಿಸಲು ಏನೆಲ್ಲಾ ಯೋಜನೆಗಳನ್ನು ಜಾರಿಗೆ ತರಲಾಗಿದೆ. ವಿದೇಶಿ ನೇರ ಬಂಡವಾಳ ಹೂಡಿಕೆ (FDI)ಗೆ ಮುಕ್ತ ಅವಕಾಶದ ಕಾರಣದಿಂದ ದೇಶದ ಹಲವು ವಲಯಗಳ ಮೇಲೆ ವಿದೇಶಿ ಹಣಕಾಸು ಸಂಸ್ಥೆಗಳು ಹೇಗೆಲ್ಲಾ ಹಿಡಿತ ಸಾಧಿಸಿವೆ. ಖಾಸಗೀಕರಣ ನೀತಿಗೆ ಅನುಗುಣವಾಗಿ ರೂಪಿಸಲಾಗಿರುವ ಯೋಜನೆಗಳನ್ನು 'ಜನಪರ ಯೋಜನೆಗಳು' ಎಂದು ಹೇಗೆಲ್ಲಾ ನಂಬಿಸ ತೊಡಗಿದ್ದಾರೆ. ಈ ಕುರಿತು, ಬಿಜೆಪಿ ಹೇಳುತ್ತಿರುವ ಒಂದೊಂದೇ "ಸಾಧನೆಗಳ" ವಿಮರ್ಶಾತ್ಮಕ ಲೇಖನಗಳ ಸರಣಿ.

ಮೋದಿ ಆಡಳಿತದ 9 ವರ್ಷಗಳ ಸಾಧನೆಗಳೇನು? ಭಾಗ – 6

Age of Joining	Years of Contribution	Indicative Monthly Contribution (in Rs.)	Monthly Pension to the subscribers and his spouse (in Rs.)	Indicative Return of Corpus to the nominee of the subscribers (in Rs.)
18	42	42	1,000	1.7 Lakh
20	40	50	1,000	1.7 Lakh
25	35	76	1,000	1.7 Lakh
30	30	116	1,000	1.7 Lakh
35	25	181	1,000	1.7 Lakh
40	20	291	1,000	1.7 Lakh
18	42	84	2,000	3.4 lakh
20	40	100	2,000	3.4 lakh
25	35	151	2,000	3.4 lakh
30	30	231	2,000	3.4 lakh
35	25	362	2,000	3.4 lakh
40	20	582	2,000	3.4 lakh
18	42	126	3,000	5.1 Lakh
20	40	150	3,000	5.1 Lakh
25	35	226	3,000	5.1 Lakh
30	30	347	3,000	5.1 Lakh
35	25	543	3,000	5.1 Lakh
40	20	873	3,000	5.1 Lakh
18	42	168	4,000	6.8 Lakh
20	40	198	4,000	6.8 Lakh
25	35	301	4,000	6.8 Lakh
30	30	462	4,000	6.8 Lakh
35	25	722	4,000	6.8 Lakh
40	20	1164	4,000	6.8 Lakh
18	42	210	5,000	8.5 Lakh
20	40	248	5,000	8.5 Lakh
25	35	376	5,000	8.5 Lakh
30	30	577	5,000	8.5 Lakh
35	25	902	5,000	8.5 Lakh
40	20	1,454	5,000	8.5 Lakh

ಇದು ಅಮೃತ ಕಾಲ

ರಾಷ್ಟ್ರೀಯ ಸಂಶೋಧನಾ ಪ್ರತಿಷ್ಠಾನ–ಎನ್‌ಆರ್‌ಎಫ್ ‘ಹೊಸ ಕ್ರಾಂತಿಗೆ ಸಿದ್ಧತೆ’ಯೋ–ಅಥವ ಮತ್ತೊಂದು ‘ಜುಮ್ಲಾ’ವೋ?

ನರೇಂದ್ರ ಮೋದಿ ಸರಕಾರ ಒಂದು ‘ರಾಷ್ಟ್ರೀಯ ಸಂಶೋಧನಾ ಪ್ರತಿಷ್ಠಾನ’ (ನ್ಯಾಷನಲ್ ರಿಸರ್ಚ್ ಫೌಂಡೇಶನ್–ಎನ್‌ಆರ್‌ಎಫ್)ವನ್ನು ಸ್ಥಾಪಿಸಲು ನಿರ್ಧರಿಸಿದೆ, ಇದು ಹಲವರಿಗೆ ಸಾಮಾನ್ಯ ಸಂಗತಿಯಾಗಿ ಕಂಡರೂ, ವಾಸ್ತವಿಕವಾಗಿ ವೈಜ್ಞಾನಿಕ ಸಂಶೋಧನೆಯ ರಂಗದಲ್ಲಿ ಒಂದು ಹೊಸ ಕ್ರಾಂತಿಗೆ ಸಿದ್ಧತೆ ಎಂದು ಬಿಜೆಪಿ ಮುಖಂಡ ಮತ್ತು ಆರೆಸ್ಸೆಸ್ ಸಿದ್ಧಾಂತಿ ರಾಂ ಮಾಧವ್ ಹೇಳಿದ್ದಾರೆ(ಇಂಡಿಯನ್ ಎಕ್ಸ್‌ಪ್ರೆಸ್, ಜುಲೈ 1). ಇದರ ಗುರಿ ಸಂಶೋಧನೆ ಮತ್ತು ಅಭಿವೃದ್ಧಿ(ಆರ್&ಡಿ)ಯ ಬೀಜ ಬಿತ್ತುವುದು, ಬೆಳೆಸುವುದು ಮತ್ತು ಪ್ರೋತ್ಸಾಹಿಸುವುದು ಮತ್ತು ಭಾರತೀಯ ವಿಶ್ವ ವಿದ್ಯಾಲಯಗಳು, ಕಾಲೇಜುಗಳು, ಸಂಶೋಧನಾ ಸಂಸ್ಥೆಗಳು ಮತ್ತು ಆರ್&ಡಿ ಪ್ರಯೋಗಾಲಯಗಳ ಮೂಲಕ ಸಂಶೋಧನೆ ಮತ್ತು ನಾವೀನ್ಯತೆಯ ಸಂಸ್ಕೃತಿಯನ್ನು ಪೋಷಿಸುವುದು ಎನ್ನಲಾಗಿದೆ.

ಆದರೆ ಈಗಾಗಲೇ ಸಂಶೋಧನೆಯಲ್ಲಿ ತೊಡಗಿರುವ ವಿಜ್ಞಾನಿಗಳು ಮತ್ತು ಸಂಶೋಧಕರು ಸರಕಾರದ ಈ ನಿರ್ಧಾರದ ಬಗ್ಗೆ ಬಹಳಷ್ಟು ಆತಂಕಗಳನ್ನು ವ್ಯಕ್ತಪಡಿಸಿದ್ದಾರೆ. ಅವರ ಒಂದು ರಾಷ್ಟ್ರವ್ಯಾಪಿ ಸಂಘಟನೆ ‘ಬ್ರೇಕ್‌ಥ್ರೂ ಸೈನ್ಸ್ ಸೊಸೈಟಿ’ ಈ ಬಗ್ಗೆ ಒಂದು ಸಾರ್ವಜನಿಕ ಹೇಳಿಕೆಯನ್ನು ಪ್ರಕಟಿಸಿದೆ. “.. ಎನ್‌ಆರ್‌ಎಫ್ ವೈಯಕ್ತಿಕವಾಗಿ ವಿಜ್ಞಾನಿಗಳ ಸಂಶೋಧನಾ ಪ್ರಸ್ತಾವನೆಗಳನ್ನು ಕುರಿತಂತೆ ನಿರ್ಧರಿಸುವ ಮತ್ತು ಅದನ್ನು ಬೇಂಬಲಿಸುವ ಪ್ರಾಥಮಿಕ ಸಂಸ್ಥೆಯಾಗಿ ಬಿಡುತ್ತದೆ. ಇದು ಸಂಶೋಧನೆಗೆ ಬೆಂಬಲವನ್ನು ಕೇಂದ್ರೀಕರಿಸುವ ಒಂದು ಯೋಜನೆ. ಇದುವರೆಗೆ, ಒಬ್ಬ ಸಂಶೋಧಕನಿಗೆ ತನ್ನ ಸಂಶೋಧನಾ ಪ್ರಸ್ತಾವನೆಯನ್ನು ಸಲ್ಲಿಸಲು ಹಲವು ಆಯ್ಕೆಗಳಿದ್ದವು. ಒಂದು ನಿಧಿ ನೀಡುವ ಸಂಸ್ಥೆ ಅದನ್ನು ತಿರಸ್ಕರಿಸಿದರೆ, ಇನ್ನೊಂದು ಅಂತಹ ಸಂಸ್ಥೆಯಿಂದ ಬೆಂಬಳ ಪಡೆಯುವ ಸಾಧ್ಯತೆಯಿದೆ. ನಿಧಿ ನೀಡಿಕೆಯ ಕೇಂದ್ರೀಕರಣ ಆ ಸಾಧ್ಯತೆಯನ್ನು ಇಲ್ಲವಾಗಿಸುತ್ತದೆ” ಎಂದು ಹೇಳಿಕೆ ವ್ಯಕ್ತಪಡಿಸಿರುವ ಆತಂಕಗಳಲ್ಲಿ ಪ್ರಮುಖವಾದ್ದು.(ಇಂಡಿಯನ್ ಎಕ್ಸ್‌ಪ್ರೆಸ್/ದಿ ವೈರ್, ಜುಲೈ 4)

ವಿವಿಧ ನಿಧಿ/ಬೆಂಬಲ ನೀಡಿಕೆ ಸಂಸ್ಥೆಗಳು ನಿರ್ದಿಷ್ಟ ಸಂಶೋಧನಾ ಕ್ಷೇತ್ರಗಳಿಗೆ ಒತ್ತು ನೀಡುತ್ತಿರುವುದರಿಂದ ಸಂಶೋಧನಾ ನಿಧಿ ಪಡೆಯುವ ಸಾಧ್ಯತೆ ಸಾಪೇಕ್ಷವಾಗಿ ಹೆಚ್ಚು. ಆದರೆ ಈ ಏಕ–ಗವಾಕ್ಷಿ ಯೋಜನೆಯಿಂದ ಆ ಸಾಧ್ಯತೆಗಳು ಮುಚ್ಚಿ ಹೋಗುತ್ತವೆ– ವಿಶೇಷವಾಗಿ ಸಾಮಾಜಿಕ ವಿಜ್ಞಾನಗಳಲ್ಲಿ ಮತ್ತು ತಕ್ಷಣದ ಔದ್ಯಮಿಕ ಪ್ರಯೋಜನಗಳಿಲ್ಲದ ನೈಸರ್ಗಿಕ ವಿಜ್ಞಾನಗಳಲ್ಲಿ ಇದು ಭಾರೀ ದುಷ್ಪರಿಣಾಮ ಉಂಟು ಮಾಡುತ್ತದೆ ಎಂದು ‘ಬ್ರೇಕ್ ಥ್ರೂ ಸೈನ್ಸ್ ಸೊಸೈಟಿ’ಯ ಅಧ್ಯಕ್ಷ ಪ್ರೊ. ಧ್ರುಬಜ್ಯೋತಿ ಮುಖರ್ಜಿ ಹೇಳಿದ್ದಾರೆ.

ನೂತನ ಶಿಕ್ಷಣ ನೀತಿ–2020ರ ಪ್ರಕಾರ ಎನ್‌ಆರ್‌ಎಫ್ ನ ನಿರ್ವಹಣೆಯನ್ನು ಸರಕಾರದಿಂದ ಸ್ವತಂತ್ರವಾಗಿರುವ ಒಂದು ಆವರ್ತಕ ನಿರ್ವಾಹಕ ಮಂಡಳಿ (ರೊಟೇಟಿಂಗ್ ಬೋರ್ಡ್ ಆಫ್ ಗವರ್ನರ್ಸ್) ಮಾಡಬೇಕು. ಆದರೆ ಈಗ ಒಕ್ಕೂಟ ಸರಕಾರ ಈ ಸಂಸ್ಥೆಯ ನಿರ್ವಾಹಕ ಮಂಡಳಿಗೆ ಪ್ರಧಾನ ಮಂತ್ರಿಗಳೇ ಅಧ್ಯಕ್ಷರಾಗಿರುತ್ತಾರೆ, ವಿಜ್ಞಾನ ಮತ್ತು ತಂತ್ರಜ್ಞಾನ ಮಂತ್ರಿಗಳು ಹಾಗೂ ಶಿಕ್ಷಣ ಮಂತ್ರಿಗಳು ಪದನಿಮಿತ್ತ ಉಪಾಧ್ಯಕ್ಷರುಗಳಾಗಿರುತ್ತಾರೆ ಎಂದು ನಿರ್ಧರಿಸಿದೆ. ಅಲ್ಲದೆ ದೈನಂದಿನ ನಿರ್ವಹಣೆಯನ್ನು ನಡೆಸುವ ಕಾರ್ಯಕಾರಿ ಸಮಿತಿಯ ಮುಖ್ಯಸ್ಥರು ಕೂಡ ಸರಕಾರೀ ನೇಮಕದ ವ್ಯಕ್ತಿ(ಪ್ರಧಾನ ವೈಜ್ಞಾನಿಕ ಸಲಹೆಗಾರ)ಯೇ ಆಗಿರುತ್ತಾರೆ. ಅಂದರೆ ಎನ್‌ಆರ್‌ಎಫ್ ಸರಕಾರದಿಂದ ಸ್ವತಂತ್ರವಾಗಿ ಕಾರ್ಯನಿರ್ವಹಿಸುವ ಯೋಚನೆಯೇ ಇಲ್ಲ ಎಂದಾಗುತ್ತದೆ.

ಪ್ರಧಾನ ಮಂತ್ರಿಗಳೇ ಇದರ ಅಧ್ಯಕ್ಷರಾಗಿರುವುದು ಒಂದು ಬಹು ಮಹತ್ವದ ಸಂಗತಿ ಎಂದು ರಾಂ ಮಾಧವ್ ಭಾವಿಸಿದರೆ, ಇದು ಈ ಎನ್‌ಆರ್‌ಎಫ್‌ನ ಆತಂಕಕಾರಿ ಸಂಗತಿಗಳಲ್ಲಿ ಒಂದು ಎಂದು ಸಂಶೋಧಕರು ಮತ್ತು ವಿಜ್ಞಾನಿಗಳ ಸಂಘಟನೆ ಭಾವಿಸುತ್ತಿದೆ.

ಮೋದಿ ಸರಕಾರ ಪಂಚಗವ್ಯ ಇತ್ಯಾದಿಗಳನ್ನು, ತಥಾಕಥಿತ ‘ಭಾರತೀಯ ಜ್ಞಾನ ವ್ಯವಸ್ಥೆ”ಗಳನ್ನು ಪ್ರೋತ್ಸಾಹಿಸುತ್ತಿರುವುದನ್ನು ಕಾಣುತ್ತಿರುವಾಗ, ಪ್ರಾಚೀನ ಭಾರತದಲ್ಲಿ ವಿಮಾನಗಳಿದ್ದವು, ಇಂಟರ್ನೆಟ್ ಟೆಲಿವಿಷನ್, ಸ್ಟೆಮ್‌ಸೆಲ್ ಸಂಶೋಧನೆ, ತಳಿ ಇಂಜಿನಿಯರಿಂಗ್, ಪ್ಲಾಸ್ಟಿಕ್ ಸರ್ಜರಿ ಇದ್ದವು ಎಂದು ಸರಕಾರೀ ಮುಖಂಡರುಗಳೇ ಪ್ರತಿಪಾದಿಸುತ್ತಿರುವ ಹಿನ್ನೆಲೆಯಲ್ಲಿ ರಾಜಕೀಯ ಮುಖಂಡರ ನೇತೃತ್ವದಲ್ಲಿರುವ ಈ ಸಂಸ್ಥೆ ಎಂತಹ ಸಂಶೋಧನೆಯನ್ನು ಪ್ರೋತ್ಸಾಹಿಸಬಹುದು ಎಂಬ ಆತಂಕ ವಿಜ್ಞಾನಿಗಳಲ್ಲಿ ಇದ್ದರೆ ಅದರಲ್ಲಿ ಆಶ್ಚರ್ಯವೇನಿಲ್ಲ.

ರಾಂ ಮಾಧವ ಅವರು ಸರಕಾರದ ಈ ನಿರ್ಧಾರವನ್ನು ಬಲವಾಗಿ ಬೆಂಬಲಿಸುತ್ತ “ಜಗತ್ತು ಉದ್ದಿಮೆ 4.0, ವೆಬ್ 3.0, ತಳಿಶಾಸ್ತ್ರ 2.0ದ ಪರಿವರ್ತನಕಾರೀ ಯುಗವನ್ನು ಪ್ರವೇಶಿಸಿದೆ. ಇದೀಗ ಕೃತಕ ಬುದ್ಧಿಮತ್ತೆ, ಕ್ವಾಂಟಂ ಲೆಕ್ಕಾಚಾರ, ರೊಬೊಟಿಕ್... ಯುಗ. ಭಾರತ ಈ ಹಿಂದಿನ ವೈಜ್ಞಾನಿಕ ಮತ್ತು ತಂತ್ರಜ್ಞಾನದ ಕ್ರಾಂತಿಗಳನ್ನು ತಪ್ಪಿಸಿಕೊಂಡಿತು. ಆದರೆ ಈ ಬಾರಿ, ಇದರ ಅಂತರ್ಗತ ಸಾಮರ್ಥ್ಯವನ್ನು ಪೂರ್ಣವಾಗಿ ಬಳಸಿಕೊಳ್ಳುವ ಅವಕಾಶವಿದೆ” ಎಂದಿದ್ದಾರೆ. ಆದರೆ ಡಾರ್ವಿನನ್ನು, ರಾಸಾಯನಿಕ ಆವರ್ತಕ ಕೋಷ್ಟಕಗಳನ್ನು ಪಠ್ಯದಿಂದ ತೆಗೆಯುತ್ತಿರುವ ಸರಕಾರದ ನೇತೃತ್ವದಲ್ಲಿ ಇದು ನಿಜವಾಗಲೂ ಸಾಧ್ಯವೇ ಎಂಬ ಸಂದೇಹವೂ ಅನುಚಿತವೇನಲ್ಲ.

ಭಾರತದಲ್ಲಿನ ಪರಿಸ್ಥಿತಿಗೆ ಮುಖ್ಯವಾಗಿ ಸಾರ್ವಜನಿಕ ಮತ್ತು ಖಾಸಗೀ ಬೆಂಬಲದ, ಮುಖ್ಯವಾಗಿ ನಿಧಿನೀಡಿಕೆಯ ಕೊರತೆಯೇ ಕಾರಣ ಎಂದು ರಾಂ ಮಾಧವ್ ರವರೂ ಹೇಳುತ್ತಾರೆ. ಅಮೆರಿಕಾ ಮತ್ತು ಚೀನಾದಲ್ಲಿ ಸಂಶೋಧಕರಿಗೆ ಬೃಹತ್ ಪ್ರಮಾಣದಲ್ಲಿ ನಿಧಿ ಒದಗಿಸಲಾಗುತ್ತಿದೆ. ಅಮೆರಿಕಾದಲ್ಲಿ 640 ಬಿಲಿಯ ಡಾಲರ್, ಚೀನಾದಲ್ಲಿ 580 ಬಿಲಿಯ ಡಾಲರ್, ಆದರೆ ಭಾರತದಲ್ಲಿ ಕೇವಲ 15 ಬಿಲಿಯ ಡಾಲರ್ ಎಂದೂ ಅವರೇ ಹೇಳುತ್ತಾರೆ. ಭಾರತ ತನ್ನ ಜಿಡಿಪಿಯ 0.7%ದಷ್ಟು ಮಾತ್ರ ವೈಜ್ಞಾನಿಕ ಮತ್ತು ತಂತ್ರಜ್ಞಾನದ ಸಂಶೋಧನೆಗಳಿಗೆ ಖರ್ಚು ಮಾಡುತ್ತದೆ ಎಂದೂ ಹೇಳುವ ರಾಂ ಮಾಧವ್, ಚೀನಾದ ಜಿಡಿಪಿ ನಮ್ಮ ಜಿಡಿಪಿಯ 5–6 ಪಟ್ಟು ಇದ್ದರೂ, ಅದರ 2.5%ದಷ್ಟು ಖರ್ಚು ಮಾಡುತ್ತಿದೆ ಎಂದೂ ಹೇಳುತ್ತಾರೆ. ಈಗ ಈ ಎನ್‌ಆರ್‌ಎಫ್ ಮುಂದಿನ ಐದು ವರ್ಷಗಳಲ್ಲಿ 50,000 ಕೋಟಿ ರೂ. ವೆಚ್ಚ ಮಾಡಲಿದೆ ಎಂದು ಅವರು ಹೇಳುತ್ತಾರೆ.


ಆದರೆ ಇದರಲ್ಲಿಯೂ 36,000 ಕೋಟಿ ರೂ. ಖಾಸಗಿಯವರಿಂದ ನಿರೀಕ್ಷಿಸಲಾಗಿದೆ. ಅಂದರೆ ಸರಕಾರ ಮುಂದಿನ ಐದು ವರ್ಷಗಳಲ್ಲಿ ಪ್ರತಿವರ್ಷ ಖರ್ಚು ಮಾಡಲಿರುವುದು 2800 ಕೋಟಿ ರೂ. ಮಾತ್ರ. “ಭಾರತದಲ್ಲಿ ನಡೆಸುತ್ತಿರುವ ಸಂಶೋಧನೆಗಳ ಪ್ರಮಾಣದ ಬಗ್ಗೆ ತುಸುವಾದರೂ ತಿಳಿದಿರುವವರಿಗೆ, ಈ ಮೊತ್ತ ಈಗಿನ ಅತ್ಯಲ್ಪ ಬೆಂಬಲದ ಮಟ್ಟವನ್ನು ಉಳಸಿಕೊಳ್ಳಲೂ ಸಾಲದು ಎಂಬುದು ಗೊತ್ತಿದೆ" ಎನ್ನುತ್ತಾರೆ ಪ್ರೊ. ಧ್ರುಬಜ್ಯೋತಿ ಮುಖರ್ಜಿ.

ಹೀಗಿರುವಾಗ ಈ **ಎನ್‌ಆರ್‌ಎಫ್ ಭಾರತದಲ್ಲಿ ಆರ್&ಡಿಗೆ ಭಾರೀ ಬೆಂಬಲ ನೀಡುತ್ತದೆ, ವಿಜ್ಞಾನಿಗಳಿಗೆ ಇದುವರೆಗೆ ಕೇಳಿರದಿದ್ದ ಪ್ರಶ್ನೆಗಳಿಗೆ ಉತ್ತರ ಕಂಡುಹಿಡಿಯಲು ಪ್ರೋತ್ಸಾಹ ನೀಡುತ್ತದೆ** ಎಂಬ ರಾಂ ಮಾಧವ್ ರವರ ಉದ್ಗಾರವಂತೂ ‘ಅಚ್ಛೇ ದಿನ್’ಗಳಲ್ಲೇ ಗೃಹ ಮಂತ್ರಿಗಳು ಅರ್ಥಪೂರ್ಣವಾಗಿ ವರ್ಣಿಸಿರುವ “ಜುಮ್ಲಾ”ಗಳ ಸಾಲಿಗೆ ಸೇರುವಂತದ್ದೇ ಇರಬಹುದೇ ಎಂಬ ವಾಸ್ತವವಾಗಿ ಸಂಶೋಧನೆಯಲ್ಲಿ ತೊಡಗಿರುವ ವಿಜ್ಞಾನಿಗಳ ಆತಂಕವನ್ನು ಪುಷ್ಟೀಕರಿಸುತ್ತದೆ ಎನ್ನಬಹುದು.



ಮಣಿಪುರ ಕುರಿತಂತೆ ಪ್ರಧಾನಿ ಮೌನವನ್ನು ದಾಖಲಿಸಬಲ್ಲ ಒಂದು ಹೈಫೈ ಸಾಧನವನ್ನು ಪರೀಕ್ಷಿಸುತ್ತಿದ್ದೇನೆ ಎನ್.ಆರ್. ಎಫ್ ಕುರಿತಂತೆ ಇ.ಪಿ.ಉನ್ನಿಯವರ ವ್ಯಂಗ್ಯ (ಕೃಪೆ: ಇಂಡಿಯನ್ ಎಕ್ಸ್‌ಪ್ರೆಸ್)


ಪ್ರಾಯಶ್ಚಿತ್ತ !



ವ್ಯಂಗ್ಯಚಿತ್ರ: ಸಂದೀಪ ಅಧ್ವರ್ಯು, ಟೈಂಸ್ ಆಫ್ ಇಂಡಿಯ

ಕಳೆದ ವಾರ ಮಧ್ಯಪ್ರದೇಶದ ಸಿಧಿ ಜಿಲ್ಲೆಯ ಹಳ್ಳಿಯೊಂದರಲ್ಲಿ ವ್ಯಕ್ತಿಯೊಬ್ಬ ಕೆಳಗೆ ದೈನ್ಯನಾಗಿ ಕೂತಿರುವ ವ್ಯಕ್ತಿಯ ಮೇಲೆ ಮೂತ್ರ ಮಾಡುವ ವೀಡಿಯೋ ವೈರಲ್ ಆಯ್ತು. ಪೋಲಿಸರು ಆತನನ್ನು ಈಗ ಬಂಧಿಸಿದ್ದಾರೆ.ಆ ವ್ಯಕ್ತಿಯ ಹೆಸರು ಪ್ರವೇಶ ಶುಕ್ಲ, ಆತನ ಈ ಕುಕೃತ್ಯಕ್ಕೆ ಒಳಗಾದಾತ ಒಬ್ಬ ಬುಡಕಟ್ಟು ಯುವಕ. ಪ್ರವೇಶ ಶುಕ್ಲ ಅಲ್ಲಿನ ಶಾಸಕ ಕೇದಾರ ಶುಕ್ಲರವರ ಬಂಟ ಎಂದು ಹೇಳಲಾಗಿದೆ, ಆದರೆ ಶಾಸಕರು ಅದನ್ನು ನಿರಾಕರಿಸಿದ್ದಾರೆ. ಆದರೂ ಮಧ್ಯಪ್ರದೇಶದ ಮುಖ್ಯಮಂತ್ರಿಗಳು ಈ ಕೃತ್ಯಕ್ಕೆ ಪ್ರಾಯಶ್ಚಿತ್ತವೆಂದು ಸಾರ್ವಜನಿಕವಾಗಿ ಕಾಲುತೊಳೆದಿರುವುದು ಈಗ ದೊಡ್ಡ ಸುದ್ದಿಯಾಗಿದೆ. ಇದಕ್ಕೆ ಮೊದಲು ಆರೋಪಿಗೆ ಶಿಕ್ಷೆಯ ಸಂಕೇತವಾಗಿ ಆತನ ಮನೆಯ ಮೇಲೆ ಬುಲ್‌ಡೋಜರ್ ಓಡಿಸಲಾಯಿತು ಎಂದೂ ವರದಿಯಾಗಿತ್ತು.

ಕರ್ನಾಟಕದಂತೆ ‘ಡಬಲ್ ಇಂಜಿನ್’ ಸರಕಾರ ಕೋಮುವಾದಿ ಕ್ರಮಗಳಿಗೆ “ಹೆಸರಾಗಿರುವ” ಮಧ್ಯಪ್ರದೇಶ ವಿಧಾನಸಭಾ ಚುನಾವಣೆಗೆ ಸಿದ್ಧಗೊಳ್ಳುತ್ತಿದೆ. ವಿದೇಶ ಪ್ರವಾಸದಿಂದ ಮರಳಿದ ಪ್ರಧಾನಿಗಳು ಇಲ್ಲಿ ಬಂದು ಏಕರೂಪ ನಾಗರಿಕ ಸಂಹಿತೆಯ ಪ್ರಶ್ನೆಯನ್ನು ಇತ್ತೀಚೆಗಷ್ಟೇ ಎತ್ತಿದ್ದಾರೆ.



ವ್ಯಂಗ್ಯಚಿತ್ರ: ಸಜಿತ್ ಕುಮಾರ್ ಡೆಕ್ಕನ್ ಹೆರಾಲ್ಡ್

ಗ್ರಾಮೀಣ ಕೂಲಿ ದರಗಳಲ್ಲಿ ಸತತ 16ನೇ ತಿಂಗಳಲ್ಲೂ ಇಳಿಕೆ ಗ್ರಾಮೀಣ ನಿರುದ್ಯೋಗ 8.73%–ಎರಡು ವರ್ಷಗಳಲ್ಲೇ ಅತಿ ಹೆಚ್ಚು

ಹಿಂದಿನ ಹಣಕಾಸು ವರ್ಷದ ಮಾರ್ಚ್ ವೇಳೆಗೆ ಗ್ರಾಮೀಣ ಪ್ರದೇಶಗಳಲ್ಲಿ ನಿಜಕೂಲಿಗಳಲ್ಲಿ ಸತತ 16ನೇ ತಿಂಗಳೂ ಇಳಿಕೆ ಕಂಡು ಬಂದಿದೆ ಎಂದು ಫಿನಾನ್ಶಿಯಲ್ ಎಕ್ಸ್‌ಪ್ರೆಸ್ (ಜುಲೈ 5) ವರದಿ ಮಾಡಿದೆ.

ನಿರುದ್ಯೋಗ ದರವೂ ಏರಿರುವಂತೆ ಕಾಣುತ್ತದೆ. ಏಕೆಂದರೆ ಮನರೇಗದ ಅಡಿಯಲ್ಲಿ 4.42 ಕೋಟಿ ಗ್ರಾಮ ನಿವಾಸಿಗಳು ಕೆಲಸಕ್ಕೆ ಅರ್ಜಿ ಹಾಕಿದ್ದಾರೆ. ಇದು ಕಳೆದ ವರ್ಷದ ಈ ಅವಧಿಗೆ ಹೋಲಿಸಿದರೆ 2.3%ದಷ್ಟು ಹೆಚ್ಚಿದೆ.

ಸಿಎಂಐಇ ದತ್ತಾಂಶಗಳ ಪ್ರಕಾರ ಜೂನ್ ತಿಂಗಳಲ್ಲಿ ಒಟ್ಟಾರೆ ನಿರುದ್ಯೋಗ 8% ಇದ್ದರೆ, ಗ್ರಾಮೀಣ ನಿರುದ್ಯೋಗ 8.73% ಆಗಿದೆ.

ಆದರೆ ಕೆಲವು ಚೇತರಿಕೆಯ ಲಕ್ಷಣಗಳೂ ಇವೆ ಎಂದೂ ಈ ವರದಿ ಗಮನಿಸುತ್ತದೆ. ಟ್ರಾಕ್ಟರ್‌ಗಳ ಮಾರಾಟ ಕಳೆದ ವರ್ಷಕ್ಕೆ ಹೋಲಿಸಿದರೆ 7%ದಷ್ಟು ಏರಿದೆ. ಆದರೆ ತನ್ನ ಅರ್ಧದಷ್ಟು ಉತ್ಪನ್ನಗಳನ್ನು ಗ್ರಾಮೀಣ ಪ್ರದೇಶಗಳಿಗೆ ಕಳಿಸುವ ಹೀರೋ ಮೋಟೋ ಕಾರ್ಪ್ ಕಂಪನಿ ಈ ಬಾರಿ ಕಳಿಸಿದ ದ್ವಿಚಕ್ರ ವಾಹನಗಳ ಸಂಖ್ಯೆಯಲ್ಲಿ 9% ಇಳಿಕೆ ಕಂಡು ಬಂದಿದೆಯಂತೆ. ವಿಪರೀತ ಹಣದುಬ್ಬರ ಗ್ರಾಮೀಣ ಆದಾಯಗಳನ್ನು ತಟ್ಟಿ ಅವರ ಖರೀದಿ ಸಾಮರ್ಥ್ಯವನ್ನು ಕುಗ್ಗಿಸಿದೆ ಎಂದು ಈ ಪತ್ರಿಕಾ ವರದಿ ಹೇಳುತ್ತದೆ.

ಹಣದುಬ್ಬರದ ಸಮಸ್ಯೆಯನ್ನು ನಿಭಾಯಿಸಲು ಆಂತರಿಕ ಉತ್ಪಾದನೆಯನ್ನು ಹೆಚ್ಚಿಸುವ ಬದಲು ತಕ್ಷಣಕ್ಕೆ ಹೆಚ್ಚಿನ ಆಮದಿಗೆ ಮೊರೆ ಹೋಗುವುದೂ ಗ್ರಾಮೀಣ ಬೆಳವಣಿಗೆಯನ್ನು ತಟ್ಟುತ್ತದೆ ಎಂದು ಇನ್ನೊಬ್ಬ ವಿಶ್ಲೇಷಕರು ಗಮನಿಸುತ್ತಾರೆ.

ಅತ್ತ ಸರಕಾರದ ಬಂಡವಾಳಿಗ ಬಂಟರು ರಾಷ್ಟ್ರೀಯ ಆಸ್ತಿಗಳನ್ನು ಲೂಟಿ ಮಾಡುತ್ತಿರುವಾಗ ನಮ್ಮ ಬಹುಪಾಲು ಗ್ರಾಮೀಣ ಜನರ ಪರಿಸ್ಥಿತಿ ಬಿಗಡಾಯಿಸುತ್ತಲೇ ಹೋಗುತ್ತಿದೆ ಎಂದು ಈ ಬಗ್ಗೆ ವಿಮರ್ಶೆ ಮಾಡುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಟಿಪ್ಪಣಿ ಮಾಡಿದ್ದಾರೆ.

ಕರ್ನಾಟಕಕ್ಕೆ ಅಕ್ಕಿ ನಿರಾಕರಿಸುವ ಆಹಾರ ನಿಗಮದ ವಿಲಕ್ಷಣ ತರ್ಕ

ಆಹಾರ ನಿಗಮದಿಂದ ಕರ್ನಾಟಕ ಸರಕಾರದ 'ಅನ್ನಭಾಗ್ಯ' ಯೋಜನೆಗೆ ಅಕ್ಕಿ ಖರೀದಿಗೆ ಸಂಬಂಧಿಸಿದಂತೆ ನಡೆಯುತ್ತಿರುವ ತಿಕ್ಕಾಟವನ್ನು ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿ ಸರ್ಕಾರ ಮತ್ತು ವಿರೋಧ ಪಕ್ಷದ ಆಡಳಿತವಿರುವ ರಾಜ್ಯಗಳ ನಡುವಿನ ಕೇವಲ ಒಂದು ಅಪರೂಪದ ಘರ್ಷಣೆ ಎನ್ನುವಂತಿಲ್ಲ. ಈ ತಿಕ್ಕಾಟವು, ವಿರೋಧ ಪಕ್ಷಗಳ ಸರ್ಕಾರಗಳ ಜನಪರ ಯೋಜನೆಗಳನ್ನು ತಡೆಯುವ ಏಕೈಕ ಉದ್ದೇಶದಿಂದ ಮತ್ತು, ಆ ಸರ್ಕಾರಗಳು ಹೆಚ್ಚು ಜನಪ್ರಿಯತೆ ಗಳಿಸದಂತೆ ನೋಡಿಕೊಳ್ಳುವ ಉದ್ದೇಶವನ್ನು ಹೊಂದಿದೆ. ಇದು ನಂಬಲಾಗದ ಮಟ್ಟದ ವಿಪರೀತ ಕೇಂದ್ರೀಕರಣದ ಪ್ರತೀಕವಾಗಿದೆ. ಹಿಂದೆ ಕಾಂಗ್ರೆಸ್ ಕೇಂದ್ರ ಸರಕಾರವೂ ಇದನ್ನು ಮಾಡಿತ್ತು. ಆದರೆ ಮೋದಿ ಸರ್ಕಾರ ಈ ಅನವಶ್ಯಕ ಕೇಂದ್ರೀಕರಣವನ್ನು ಒಂದು ಅಭೂತಪೂರ್ವ ಮಟ್ಟಕ್ಕೆ ಕೊಂಡೊಯ್ದಿದೆ.

ಪ್ರೊ.ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್



ಕರ್ನಾಟಕ ರಾಜ್ಯ ಸರ್ಕಾರವು ಜುಲೈ 1 ರಂದು ಆರಂಭಿಸಲು ಆಯೋಜಿಸಿದ್ದ, ಬಡತನ ರೇಖೆಯ ಕೆಳಗಿರುವ ಪ್ರತಿ ಕುಟುಂಬಕ್ಕೂ ತಿಂಗಳಿಗೆ 10 ಕೆಜಿ ಅಕ್ಕಿಯನ್ನು ಉಚಿತವಾಗಿ ನೀಡುವ "ಅನ್ನ ಭಾಗ್ಯ" ಯೋಜನೆಗೆ ಹಿನ್ನೆಡೆಯಾಗಿದೆ. ಕರ್ನಾಟಕ ರಾಜ್ಯಕ್ಕೆ ಅಕ್ಕಿಯನ್ನು ಮಾರುವುದಾಗಿ ಒಪ್ಪಿಗೆ ಸೂಚಿಸಿದ್ದ ಮರು ದಿನವೇ ಭಾರತ ಆಹಾರ ನಿಗಮವು(ಎಫ್‌ಸಿಐ) ತನ್ನ ನಿರ್ಧಾರವನ್ನು ಬದಲಿಸಿದೆ. ಕೇಂದ್ರ ಸರ್ಕಾರವು ಪ್ರತಿ ಬಿಪಿಎಲ್ ಕುಟುಂಬಕ್ಕೂ 5 ಕೆಜಿ ಅಕ್ಕಿಯನ್ನು ಉಚಿತವಾಗಿ ನೀಡುತ್ತಿದೆ. ಅದರ ಜೊತೆಗೆ, ಕರ್ನಾಟಕ ಸರ್ಕಾರವು ಅಧಿಕವಾಗಿ ತಿಂಗಳಿಗೆ 5 ಕೆಜಿ ಅಕ್ಕಿಯನ್ನು ಬಿಪಿಎಲ್ ಕಾರ್ಡ್ ಹೊಂದಿರುವ ಮತ್ತು ಅಂತ್ಯೋದಯ ಕಾರ್ಡ್ ಹೊಂದಿರುವ ಸುಮಾರು 1.19 ಕೋಟಿ ಜನರಿಗೆ ಉಚಿತವಾಗಿ ಒದಗಿಸುವ ಯೋಜನೆಯನ್ನು ಘೋಷಣೆ ಮಾಡಿತ್ತು. ಆದರೆ, ಕೊರೊನಾ ಸಂದರ್ಭದಲ್ಲಿ ಉದ್ಭವವಾಗಿದ್ದ ದುರ್ಬರ ಪರಿಸ್ಥಿತಿಗೆ ಸ್ಪಂದನೆಯಾಗಿ ತಾನು ಜಾರಿಗೊಳಿಸಿದ್ದ ಉಚಿತ 5 ಕೆಜಿ ಅಕ್ಕಿ ಯೋಜನೆಯನ್ನು ಕೊನೆಗೊಳಿಸಲು ಕೇಂದ್ರ ಸರ್ಕಾರವು ಬಹಳ ದಿನಗಳಿಂದಲೂ ಯೋಚಿಸುತ್ತಿತ್ತು. ಈ ಸನ್ನಿವೇಶದಲ್ಲಿ, ರಾಜ್ಯದಲ್ಲಿ ಹೊಸದಾಗಿ ಆಯ್ಕೆಯಾದ ಸರ್ಕಾರದ ಚುನಾವಣಾ ಭರವಸೆಯ ಭಾಗವಾಗಿದ್ದ ಕರ್ನಾಟಕದ "ಅನ್ನ ಭಾಗ್ಯ" ಯೋಜನೆಯ ಪ್ರಸ್ತಾಪವು ಸದರಿ ಯೋಜನೆಯನ್ನು ಶಾಶ್ವತಗೊಳಿಸುವ ಗುರಿಯನ್ನು ಹೊಂದಿತ್ತು.

ಕೇಂದ್ರ ಸರ್ಕಾರದ ಇತರ ಸಂಸ್ಥೆಗಳಿಂದ ಮತ್ತು ಬೇರೆ ರಾಜ್ಯ ಸರ್ಕಾರಗಳಿಂದ ಅಕ್ಕಿಯನ್ನು ಕೊಳ್ಳಲು ಕರ್ನಾಟಕ ಸರ್ಕಾರವು ಪ್ರಯತ್ನಿಸುತ್ತಿದೆ. ಇತರ ರಾಜ್ಯ ಸರ್ಕಾರಗಳು ಸದ್ಯದಲ್ಲಿ ಸಾಕಷ್ಟು ದಾಸ್ತಾನು ಹೊಂದಿಲ್ಲ ಮತ್ತು ರಾಜ್ಯ ಸರ್ಕಾರಕ್ಕೆ ಅಕ್ಕಿಯನ್ನು ಮಾರಾಟ ಮಾಡದಂತೆ ಕೇಂದ್ರ ಸರ್ಕಾರವು ಭಾರತ ಆಹಾರ ನಿಗಮವನ್ನು ತಡೆದಿರಬಹುದು. ಅಷ್ಟೇ ಅಲ್ಲದೆ, ಈ ಮೂಲಗಳಿಂದ ಖರೀದಿಸುವ ಕ್ರಮವು ಯೋಜನೆಯ ವೆಚ್ಚವನ್ನು ಗಣನೀಯವಾಗಿ ಹೆಚ್ಚಿಸುತ್ತದೆ. ಹಾಗಾಗಿ, ರಾಜ್ಯದ ಬಜೆಟ್‌ನಿಂದ ಹಣ ಒದಗಿಸುವುದು ಹೆಚ್ಚು ಕಷ್ಟಕರವಾಗುತ್ತದೆ.

ಈ ಸಂಬಂಧವಾಗಿ ನಡೆಯುತ್ತಿರುವ ತಿಕ್ಕಾಟವನ್ನು ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿ ಸರ್ಕಾರ ಮತ್ತು ವಿರೋಧ ಪಕ್ಷದ ಆಡಳಿತವಿರುವ ರಾಜ್ಯಗಳ ನಡುವಿನ ಕೇವಲ ಒಂದು ಅಪರೂಪದ ಘರ್ಷಣೆ ಎನ್ನುವಂತಿಲ್ಲ. ಈ ತಿಕ್ಕಾಟವು, ವಿರೋಧ ಪಕ್ಷಗಳ ಸರ್ಕಾರಗಳ ಜನಪರ ಯೋಜನೆಗಳನ್ನು ತಡೆಯುವ ಏಕೈಕ ಉದ್ದೇಶದಿಂದ ಮತ್ತು ಅದೂ ಕೂಡ ಪೂರ್ಣವಾಗಿ ರಾಜಕೀಯ ಕಾರಣಗಳಿಗಾಗಿ, ಅಂದರೆ ವಿರೋಧ ಪಕ್ಷಗಳು ನಡೆಸುವ ಸರ್ಕಾರಗಳು ಹೆಚ್ಚು ಜನಪ್ರಿಯತೆ ಗಳಿಸದಂತೆ ನೋಡಿಕೊಳ್ಳುವ ಉದ್ದೇಶವನ್ನು ಹೊಂದಿದೆ. ಇದು ನಂಬಲಾಗದ ಮಟ್ಟದ ಕೇಂದ್ರೀಕರಣದ ಪ್ರತೀಕವಾಗಿದೆ. ವಿಪರ್ಯಾಸವೆಂದರೆ, ಕರ್ನಾಟಕದ ಹೊಸ ಸರ್ಕಾರವು ತನ್ನ ಚುನಾವಣಾ ಭರವಸೆಯನ್ನು ಈಡೇರಿಸುವಲ್ಲಿ ಕೇಂದ್ರದ ಬಿಜೆಪಿ ಸರ್ಕಾರವು ಅಡ್ಡಿಪಡಿಸುತ್ತಿರುವ ಸಮಯದಲ್ಲೇ, ಹೊಸ ಸರ್ಕಾರವು ತನ್ನ ಎಲ್ಲಾ ಚುನಾವಣಾ ಭರವಸೆಗಳನ್ನು ಈಡೇರಿಸಬೇಕು ಎಂದು ರಾಜ್ಯದಲ್ಲಿ ವಿರೋಧ ಪಕ್ಷವಾಗಿರುವ ಬಿಜೆಪಿಯೇ ಒತ್ತಾಯಿಸುತ್ತಿದೆ.

ಬಡವರ ಹೊಟ್ಟೆಗೆ ಹೊಡೆಯುವ ರಾಜಕೀಯ

ಖಚಿತವಾಗಿ ಹೇಳುವುದಾದರೆ, ರಾಜ್ಯ ಸರ್ಕಾರಗಳು ಹಮ್ಮಿಕೊಳ್ಳುವ ಕಲ್ಯಾಣ ಯೋಜನೆಗಳಿಗೆ ವ್ಯಕ್ತಗೊಳ್ಳುತ್ತಿರುವ ಕೇಂದ್ರ ಸರ್ಕಾರದ ವಿರೋಧ ಹೊಸದೇನಲ್ಲ. ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಕಾಂಗ್ರೆಸ್ ಸರ್ಕಾರವು ಸಾರ್ವಜನಿಕ ವಿತರಣಾ ವ್ಯವಸ್ಥೆಯ ವ್ಯಾಪ್ತಿಯನ್ನು ಕುಗ್ಗಿಸಿದಾಗ ಮತ್ತು ಸಬ್ಸಿಡಿ ಆಹಾರ ಧಾನ್ಯಗಳನ್ನು ಬಡತನ ರೇಖೆಯ ಕೆಳಗಿರುವ ಜನರಿಗೆ (ಬಿಪಿಎಲ್) ಮಾತ್ರ ಸೀಮಿತಗೊಳಿಸಿದಾಗ, ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು(ಪಿಡಿಎಸ್) ಹೊಂದಿದ್ದ ಕೇರಳದ ಎಡ ಪ್ರಜಾಸತ್ತಾತ್ಮಕ ರಂಗ(ಎಲ್‌ಡಿಎಫ್) ಸರ್ಕಾರವು ತನ್ನ ಅಗ್ಗದ ಸಾರ್ವತ್ರಿಕ ವಿತರಣಾ ವ್ಯವಸ್ಥೆಯನ್ನು ಮುಂದುವರಿಸುವ ಸಲುವಾಗಿ ಆಹಾರ ಧಾನ್ಯಗಳನ್ನು ಸಂಗ್ರಹಿಸಲು ಪ್ರಯತ್ನಿಸಿತು. ಈ ಉದ್ದೇಶಕ್ಕಾಗಿ ಅದು ರಾಜ್ಯದೊಳಗೇ ಲಭ್ಯವಿದ್ದಷ್ಟು ಪ್ರಮಾಣದ ಆಹಾರ ಧಾನ್ಯಗಳನ್ನೂ ಸಂಗ್ರಹಿಸಿತ್ತು. ಆದರೆ, ಭಾರತ ಆಹಾರ ನಿಗಮವು, ಕೇರಳದಿಂದ ಯಾವುದೇ ಧಾನ್ಯಗಳನ್ನು ನೇರವಾಗಿ ಸಂಗ್ರಹಿಸದಿದ್ದರೂ ಮತ್ತು ಕೇರಳವನ್ನು ಕೊರತೆಯ ರಾಜ್ಯವೆಂದು ಗುರುತಿಸಿದ್ದರೂ, ಸಾರ್ವಜನಿಕ ವಿತರಣಾ ವ್ಯವಸ್ಥೆಗಾಗಿ ಆ ರಾಜ್ಯಕ್ಕೆ ಒದಗಿಸುವ ತನ್ನ ಪೂರೈಕೆಯಲ್ಲಿ ನಿಖರವಾಗಿ ಅಷ್ಟೇ ಪ್ರಮಾಣದ ಆಹಾರ ಧಾನ್ಯಗಳನ್ನು ಕಡಿಮೆ ಮಾಡಿತು!

ಆದ್ದರಿಂದ, ಅನವಶ್ಯಕ ಕೇಂದ್ರೀಕರಣದ ಈ ವಿದ್ಯಮಾನವು ಹೊಸದೇನಲ್ಲ. ಆದರೆ, ನಿಗದಿಪಡಿಸಿದ ಬೆಲೆಯನ್ನು ತೆರಲು ಸಿದ್ಧವಾಗಿರುವ ಕರ್ನಾಟಕದ ಸರ್ಕಾರಕ್ಕೆ ಮುಕ್ತ ಮಾರುಕಟ್ಟೆ ಮಾರಾಟವನ್ನು ನಿರಾಕರಿಸುವ ಮೂಲಕ ಬಿಜೆಪಿ ಸರ್ಕಾರವು ಈ ಅನವಶ್ಯಕ ಕೇಂದ್ರೀಕರಣವನ್ನು ಒಂದು ಅಭೂತಪೂರ್ವ ಮಟ್ಟಕ್ಕೆ ಕೊಂಡೊಯ್ದಿದೆ. ರಾಜ್ಯ ಸರ್ಕಾರದ ವಿರುದ್ಧ ತೋರಿಸಿದ ಈ ರಾಜಕೀಯ ತಾರತಮ್ಯವು ಸಾರಭೂತವಾಗಿ ಬಡವರ ಹೊಟ್ಟೆಯ ಮೇಲೆ ಹೊಡೆದ ಹೊಡೆತವೇ ಸರಿ. ಕರ್ನಾಟಕದ ಕಾಂಗ್ರೆಸ್ ಸರ್ಕಾರದ ವಿರುದ್ಧ ಕೇಂದ್ರದ ಬಿಜೆಪಿ ಸರ್ಕಾರವು ಹೊಂದಿರುವ ಬದ್ಧದ್ವೇಷದ ಫಲವನ್ನು ಕರ್ನಾಟಕದ ಬಡಜನರು ಉಣ್ಣುವಂತಾಗಿದೆ.

ಅಸಮರ್ಥನೀಯ ನೆಪಗಳು

ಭಾರತ ಆಹಾರ ನಿಗಮವು ಧಾನ್ಯಗಳನ್ನು ಕರ್ನಾಟಕಕ್ಕೆ ಮಾರಲು ನಿರಾಕರಿಸಿರುವ ಕ್ರಮವು ರಾಜಕೀಯ ಪ್ರೇರಿತವಲ್ಲ ಎಂದು ಬಿಜೆಪಿ ಸರ್ಕಾರ ನಾಟಕವಾಡುತ್ತಿದೆ. ಆದರೆ ಮಾರಾಟ ಮಾಡದಿರಲು ಅವರು ಹೇಳುವ ನೆಪಗಳು ಅಸಮರ್ಥನೀಯವಾಗಿವೆ. ಸರ್ಕಾರದ ಬಳಿ ಸಾಕಷ್ಟು ಸ್ಟಾಕ್ ಇಲ್ಲ ಎಂಬುದು ಮೊದಲನೆಯ ನೆಪ. ಅದು ಒಂದು ವೇಳೆ ನಿಜವೇ ಆಗಿದ್ದರೆ, ಮುಂಬರುವ ವಾರಗಳಲ್ಲಿ 5 ಲಕ್ಷ ಟನ್ ಅಕ್ಕಿಯನ್ನು (4 ಲಕ್ಷ ಟನ್ ಗೋಧಿ ಹೊರತುಪಡಿಸಿ) ಮಾರುವುದಾಗಿ ಹೇಳಿದ್ದ ಯೋಜನೆಯನ್ನು ಕೈಗೊಳ್ಳಬಾರದು. ವಾಸ್ತವವಾಗಿ, ಕರ್ನಾಟಕ ಸರ್ಕಾರವು ಭಾರತ ಆಹಾರ ನಿಗಮದಿಂದ 2.46 ಲಕ್ಷ ಟನ್ ಧಾನ್ಯಗಳನ್ನು ಖರೀದಿಸಲು ಬಯಸಿತ್ತು. ಅದರ ಬದಲಿಗೆ, ಆಹಾರ ನಿಗಮವು ಧಾನ್ಯಗಳನ್ನು ವ್ಯಾಪಾರಿಗಳಿಗೆ ಮಾರಾಟ ಮಾಡಲು ಯೋಜಿಸುತ್ತಿದೆ.

ಧಾನ್ಯಗಳನ್ನು ವ್ಯಾಪಾರಿಗಳಿಗೆ ಮಾರುವ ಕ್ರಮವು ಹಣದುಬ್ಬರವನ್ನು ನಿಯಂತ್ರಿಸುವ ಸಾಧನವಾಗಿದೆ ಎಂಬುದು ಎರಡನೆಯ ನೆಪ. ಈ ಅಂಶವನ್ನು ಭಾರತ ಆಹಾರ ನಿಗಮದ ಅಧ್ಯಕ್ಷರು ಮಾಧ್ಯಮಗಳಿಗೆ ಸ್ವತಃ ತಿಳಿಸಿದ್ದಾರೆ. ಅಂದರೆ, ಧಾನ್ಯಗಳ ಮುಕ್ತ ಮಾರುಕಟ್ಟೆ ಮಾರಾಟ ಯೋಜನೆಯು ಹಣದುಬ್ಬರ ವಿರೋಧಿ ಕ್ರಮವಾಗಿದೆ ಮತ್ತು ಅದು ಆಹಾರ ಧಾನ್ಯಗಳ ಚಿಲ್ಲರೆ ಬೆಲೆಗಳ ಹಣದುಬ್ಬರವನ್ನು ಇಳಿಕೆ ಮಾಡುತ್ತದೆ.

ಇದೊಂದು ವಿಲಕ್ಷಣ ತರ್ಕವೇ ಸರಿ. ಹೆಚ್ಚಿನ ಬೇಡಿಕೆಯೇ ಒಂದು ವೇಳೆ ಆಹಾರ ಧಾನ್ಯಗಳ ಬೆಲೆ ಏರಿಕೆಗೆ ಕಾರಣವಾಗಿದ್ದರೆ, ಮತ್ತು ಅಂಥಹ ಬೆಲೆ ಏರಿಕೆಯನ್ನು ನಿಗ್ರಹಿಸಬೇಕಾದರೆ ಅದನ್ನು ಸಾಧಿಸುವ ಹೆಚ್ಚು ಪರಿಣಾಮಕಾರಿ ಮಾರ್ಗವೆಂದರೆ ಮುಕ್ತ ಮಾರುಕಟ್ಟೆ ವ್ಯಾಪಾರದ ಬದಲು ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಸರ್ಕಾರಿ ದಾಸ್ತಾನುಗಳನ್ನು ಬಿಡುಗಡೆ ಮಾಡುವ ಕ್ರಮವೇ. ಏಕೆಂದರೆ, ಮುಕ್ತ ಮಾರುಕಟ್ಟೆ ವ್ಯಾಪಾರದ ಸಂದರ್ಭದಲ್ಲಿ ಸರ್ಕಾರವು ಧಾನ್ಯದ ಅಂತಿಮ ಬಳಕೆಯ ಮೇಲೆ ಯಾವುದೇ ನಿಯಂತ್ರಣವನ್ನು ಹೊಂದಿರುವುದಿಲ್ಲ. ಆದ್ದರಿಂದ ಬೆಲೆಗಳು ಇಳಿಯುವುದಿಲ್ಲ. ಹಾಗಾಗಿ, ಹಣದುಬ್ಬರವನ್ನು ನಿಯಂತ್ರಿಸುವ ಹೆಚ್ಚು ಪರಿಣಾಮಕಾರಿ ಮಾರ್ಗವೆಂದರೆ, ಈ ಧಾನ್ಯಗಳನ್ನು ಹೆಚ್ಚಿನ ಲಾಭಕ್ಕಾಗಿ ತಮ್ಮಲ್ಲೇ ಇಟ್ಟುಕೊಳ್ಳುವ ವ್ಯಾಪಾರಿಗಳಿಗಿಂತ ಹೆಚ್ಚಾಗಿ ಅವುಗಳನ್ನು ಜನರ ಬಳಕೆಗಾಗಿ ವಿತರಿಸುವ ರಾಜ್ಯ ಸರ್ಕಾರಗಳಿಗೆ ಬಿಡುಗಡೆ ಮಾಡುವ ಕ್ರಮವೇ.

ಹಳೆಯ ತಪ್ಪಿನ ಪುನರಾವರ್ತನೆ

ವಾಸ್ತವವಾಗಿ, ಈ ಅನುಭವ 1972 ರಿಂದಲೂ ಭಾರತದಲ್ಲಿದೆ. ಫಸಲು ನಾಶದ ನಿರೀಕ್ಷೆಯಲ್ಲಿ ಆಹಾರ ಧಾನ್ಯಗಳ ಬೆಲೆಗಳು 1972ರಲ್ಲಿ ಏರಲು ಪ್ರಾರಂಭಿಸಿದಾಗ, ಆಹಾರ ಧಾನ್ಯಗಳ ಸಾಕಷ್ಟು ದಾಸ್ತಾನು ಹೊಂದಿದ್ದ ಇಂದಿರಾ ಗಾಂಧಿ ಸರ್ಕಾರವು ಬೆಲೆಗಳು ಇಳಿಯುವಂತೆ ನೋಡಿಕೊಳ್ಳುವ ಉದ್ದೇಶದಿಂದ ಧಾನ್ಯಗಳ ದಾಸ್ತಾನನ್ನು ಮುಕ್ತ ಮಾರುಕಟ್ಟೆಯಿಂದ ಗ್ರಾಹಕರನ್ನು ದೂರವಿರಿಸುವ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಬಿಡುಗಡೆ ಮಾಡುವುದರ ಬದಲು ಮುಕ್ತ ಮಾರುಕಟ್ಟೆಯಲ್ಲಿ ಮಾರಿತು. ಸರ್ಕಾರ ಮಾರುತ್ತಿದ್ದ ಧಾನ್ಯಗಳನ್ನು ವ್ಯಾಪಾರಿಗಳು ಬಲು ಹಿಗ್ಗಿನಿಂದ ಖರೀದಿಸಿದರು ಮತ್ತು ಅವುಗಳನ್ನು ತಮ್ಮ ಗೊದಾಮುಗಳಲ್ಲಿ ಭದ್ರವಾಗಿ ಸಂಗ್ರಹಿಸಿಟ್ಟುಕೊಂಡರು. ಈ ಉದ್ದೇಶಗೇಡಿ ಕ್ರಮದ ಪರಿಣಾಮವಾಗಿ ಸರ್ಕಾರದ ಆಹಾರ ಧಾನ್ಯಗಳ ದಾಸ್ತಾನು ಕ್ಷೀಣಿಸಿತು ಮತ್ತು ಹಣದುಬ್ಬರವು ಮೊದಲಿನಂತೆಯೇ ಮುಂದುವರಿಯಿತು. ಅರ್ಧ ಶತಮಾನ ಕಾಲಾವಧಿಯ ಅನುಭವದ ನಂತರವೂ, ಬಿಜೆಪಿ ಸರ್ಕಾರವು ಮತ್ತೊಮ್ಮೆ ಅದೇ ತಪ್ಪನ್ನು ಈಗ ಪುನರಾವರ್ತಿಸುತ್ತಿದೆ. ಅಂದರೆ, ಹಣದುಬ್ಬರವನ್ನು ಎದುರಿಸುವ ಸಾಧನವಾಗಿ ಆಹಾರ ಧಾನ್ಯಗಳ ದಾಸ್ತಾನನ್ನು ರಾಜ್ಯ ಸರ್ಕಾರಗಳ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಗ್ರಾಹಕರಿಗೆ ಬಿಡುಗಡೆ ಮಾಡುವುದರ ಬದಲು ವ್ಯಾಪಾರಿಗಳಿಗೆ ಬಿಡುಗಡೆ ಮಾಡುತ್ತಿದೆ.

ಕರ್ನಾಟಕ ಸರ್ಕಾರದ ಯೋಜನೆಯು ಬಡತನ ರೇಖೆಯ ಕೆಳಗಿರುವ ಜನರನ್ನು ಮುಕ್ತ ಮಾರುಕಟ್ಟೆಯಿಂದ ದೂರ ಇಡುವುದರ ಬದಲು ಅವರ ಬಳಕೆಯನ್ನು ಹೆಚ್ಚಿಸುತ್ತದೆ ಎಂದು ಹೇಳಬಹುದು. ಅಂದರೆ, ಯೋಜನೆಯ ಫಲಾನುಭವಿಗಳು ಹೆಚ್ಚು ಧಾನ್ಯಗಳನ್ನು ಸೇವಿಸುತ್ತಾರೆ. ಈ ಧಾನ್ಯಗಳನ್ನು ಅವರು ಮಾರುಕಟ್ಟೆಯಲ್ಲಿ ಖರೀದಿಸುವುದು ಸಾಧ್ಯವಿರಲಿಲ್ಲ. ಅದನ್ನು ಸರ್ಕಾರವು ಈಗ ಒದಗಿಸುವುದರಿಂದ ಮುಕ್ತ ಮಾರುಕಟ್ಟೆಯ ಹೆಚ್ಚುವರಿ ಬೇಡಿಕೆಯಲ್ಲಿ ಯಾವುದೇ ಕಡಿತವಾಗುವುದಿಲ್ಲ. ಆದ್ದರಿಂದ ಹಣದುಬ್ಬರ ಇಳಿಯುವುದಿಲ್ಲ.

ಎರಡು ಕಾರಣಗಳಿಂದಾಗಿ ಈ ವಾದವು ತಪ್ಪಾಗಿದೆ: ಮೊದಲನೆಯದು, ಈ ಊಹೆಯೇ ತಪ್ಪು. ಈ ಯೋಜನೆಯ ವ್ಯಾಪ್ತಿಯಲ್ಲಿ ಬರುವ ಫಲಾನುಭವಿಗಳ ಸಂಖ್ಯೆಯು 4.42 ಕೋಟಿ ಎಂದು ಭಾವಿಸಲಾಗಿದೆ. ಅವರೆಲ್ಲರೂ ಹೊಸ ಸರ್ಕಾರವು ಒದಗಿಸಿದ ಹೆಚ್ಚುವರಿ ಹಣದಿಂದ ತಮ್ಮ ಬಳಕೆಯಲ್ಲಿ ಸ್ವಲ್ಪವೂ ಬದಲಾವಣೆ ಮಾಡಿಕೊಳ್ಳದೆ ತಮ್ಮ ಬಳಕೆಯನ್ನು ಹೆಚ್ಚಿಸಿಕೊಳ್ಳುತ್ತಾರೆ ಮತ್ತು ಮುಕ್ತ ಮಾರುಕಟ್ಟೆ ಖರೀದಿಗಳಲ್ಲಿ ತೊಡಗುತ್ತಾರೆ ಎಂದು ಕಲ್ಪಿಸಿಕೊಳ್ಳುವುದು ತೀರಾ ಅವಾಸ್ತವಿಕವಾಗಿ ತೋರುತ್ತದೆ. ಆದ್ದರಿಂದ, ಕರ್ನಾಟಕದ ಯೋಜನೆಯು ಮುಕ್ತ ಮಾರುಕಟ್ಟೆಯಲ್ಲಿ ಬೇಡಿಕೆಯ ಮೇಲಿನ ಒತ್ತಡವನ್ನು ಸ್ವಲ್ಪ ಕಡಿಮೆ ಮಾಡುತ್ತದೆ ಮತ್ತು ಅದರಿಂದಗಿ ಹಣದುಬ್ಬರವನ್ನೂ ಸ್ವಲ್ಪ ಮಟ್ಟಿಗೆ ಇಳಿಸುತ್ತದೆ.

ಎರಡನೆಯದು, ಹಣದುಬ್ಬರದ ಕಾಳಜಿಗೆ ಸಂಬಂಧಿಸುತ್ತದೆ. ಹಣದುಬ್ಬರದ ಬಗ್ಗೆ ಚಿಂತಿಸಲೇ ಬೇಕಾಗುತ್ತದೆ. ಏಕೆಂದರೆ, ಮೊತ್ತಮೊದಲಿಗೆ ಅದು ದುಡಿಯುವ ಬಡಜನರ ಬಳಕೆಯನ್ನು ಮೊಟಕುಗೊಳಿಸುತ್ತದೆ ಮತ್ತು ಆ ಮೂಲಕ ಅವರಿಗೆ ಹಾನಿ ಉಂಟುಮಾಡುತ್ತದೆ. ಅವರ ಬಳಕೆಯನ್ನು ಒಂದು ವೇಳೆ ನೇರವಾಗಿ ಹೆಚ್ಚಿಸಿದ್ದೇ ಆದರೆ, ಹಣದುಬ್ಬರವು ಇಳಿಯುತ್ತದೆಯೇ ಅಥವಾ ಇಲ್ಲವೇ ಎಂಬುದು ಮುಖ್ಯವಾಗುವುದಿಲ್ಲ. ವಿಶ್ವ ಹಸಿವು ಸೂಚ್ಯಂಕದಲ್ಲಿ ಭಾರತವು 100ಕ್ಕಿಂತಲೂ ಕೆಳಗಿನ ಶ್ರೇಯಾಂಕದಲ್ಲಿ ಮುಂದುವರೆಯುತ್ತಲೇ ಇರುವ ಸನ್ನಿವೇಶದಲ್ಲಿ, ಆಹಾರ ಧಾನ್ಯಗಳಲ್ಲಿ ಹಣದುಬ್ಬರ ನಿಯಂತ್ರಣವನ್ನು ಸಾಧಿಸುವುದು, ಆದ್ಯತೆಗಳು ತಪ್ಪಾಗಿವೆ ಎಂಬುದನ್ನು ಸ್ಪಷ್ಟಪಡಿಸುತ್ತದೆ.

ಬಿಜೆಪಿ ಸರಕಾರದ ಅಕ್ಷಮ್ಯ ಕ್ರಮ

ಬಿಜೆಪಿ ಸರ್ಕಾರದ

ಪುಟ 14 ಕ್ಕೆ



ಬಜೆಟ್: ಅಲ್ಪ ಸಾಂತ್ವನ ಇಳಿಯದ ಹೊರೆ.........

ಪುಟ 9 ರಿಂದ

ಇಚ್ಛಾ ಶಕ್ತಿಯ ಕೊರತೆಯು ಕೂಡಾ ಢಾಳಾಗಿ ಕಂಡು ಬರುತ್ತದೆ.

ಲೂಟಿಕೋರ ಕಾರ್ಪೋರೇಟ್ ಅಭಿವೃದ್ಧಿಗೆ ಮಣೆ

ಕಾಂಗ್ರೆಸ್ ಸರಕಾರ ಗ್ಯಾರಂಟಿಗಳ ಮೂಲಕ ತಾನು ಜನಪರವಾಗಿ ಇರುವೆನೆಂದು ಬಿಂಬಿಸಿಕೊಂಡರೂ ವಾಸ್ತವದಲ್ಲಿ ಅದು ಲೂಟಿಕೋರ ನವ ಉದಾರೀಕರಣದ ನೀತಿಗಳ ಬೆನ್ನು ಬಿಟ್ಟಿಲ್ಲವೆಂಬುದನ್ನು, ಆ ದಿಸೆಯನ್ನು ಈ ಬಜೆಟ್ ಸ್ಪಷ್ಟ ಪಡಿಸುತ್ತದೆ.

ಈ ಬಜೆಟ್ ನಲ್ಲಿ ಕಂಪನಿ ಬೇಸಾಯವನ್ನು ಬಲ ಪಡಿಸುವುದಕ್ಕೆ ಪೂರಕವಾದ ರೈತ ಉತ್ಪಾದಕರ ಸಂಘಗಳಿಗೆ (FPO) ಗಳಿಗೆ ಆಧ್ಯತೆ ನೀಡಲಾಗಿದೆ ಮತ್ತು ಭೂ ಸುಧಾರಣಾ ತಿದ್ದುಪಡಿ ಕಾಯ್ದೆ – 2020 ರ ವಾಪಾಸು ಪಡೆಯುವುದರ ಕುರಿತು ಜಾಣ ಮೌನ ವಹಿಸಿದೆ ಮತ್ತು ಭೂ ಕಂದಾಯ ಕಾಯ್ದೆಗೆ ತಿದ್ದುಪಡಿ ಮಾಡಲು ಉಪಕ್ರಮಿಸಿ, ಕೃಷಿ ಭೂಮಿಯನ್ನು ಸ್ವಯಮೇಚ್ಛೆಯಿಂದ ಕೃಷಿಯೇತರ ಉದ್ದೇಶಗಳಿಗೆ ದೊರೆಯುವಂತೆ ಮಾಡುವುದಾಗಿ ಪ್ರಕಟಿಸಿದೆ. ಅದೇ ರೀತಿ, ಜಾನುವಾರು ಹತ್ಯೆ ನಿಷೇಧ ತಿದ್ದುಪಡಿ ಕಾಯ್ದೆ – 2020 ನ್ನು ವಾಪಾಸು ಪಡೆಯುವುದಿಲ್ಲವೆಂದು ಹೇಳಿರುವುದು. ಮಾತ್ರವಲ್ಲಾ, ಕಾರ್ಖಾನೆಗಳ ತಿದ್ದುಪಡಿ ಕಾಯ್ದೆ – 2022 ನ್ನು ವಾಪಾಸು ಪಡೆಯದಿರುವುದು, ಒಕ್ಕೂಟ ಸರಕಾರ ಜಾರಿಗೆ ತರುತ್ತಿರುವ ವಿದ್ಯುತ್ ತಿದ್ದುಪಡಿ ಮಸೂದೆಯ ವಿರುದ್ಧ ಧ್ವನಿ ಎತ್ತದಿರುವುದು. ಅತಿಥಿಗಳಾಗಿ ಮತ್ತು ಗೌರವ ವೇತನಕ್ಕೆ ಮತ್ತು ಅತ್ಯಂತ ಕಡಿಮೆ ವೇತನಕ್ಕೆ ದುಡಿಯುವ ಗುತ್ತಿಗೆ ಕಾರ್ಮಿಕರು, ನೌಕರರ ಉದ್ಯೋಗದ ಭದ್ರತೆ ಕುರಿತು ಮತ್ತು ನೌಕರರ ಹಳೆ ಪಿಂಚಣಿ ಯೋಜನೆ ಕುರಿತಂತೆ ಮೌನ ವಹಿಸಿರುವುದು. ಕನಿಷ್ಠ ವೇತನ ಹೆಚ್ಚಳದ ಕುರಿತು ಮತ್ತು ಕೃಷಿರಂಗದ ಕನಿಷ್ಠ ವೇತನ 424 ರೂ.ಗಳನ್ನು ಉದ್ಯೋಗ ಖಾತ್ರಿ ಯೋಜನೆಗೆ ವಿಸ್ತರಿಸದಿರುವುದು, ಇವುಗಳೆಲ್ಲವೂ ಬಹಳ ಸ್ಪಷ್ಟವಾಗಿ, ಈ ಸರಕಾರ ಜನಪರವಾದ ನೈಜ ಅಭಿವೃದ್ಧಿಯಿಂದ ದೂರ ಇರುವುದನ್ನು ಮತ್ತು ಲೂಟಿಕೋರ ಕಾರ್ಪೋರೇಟ್ ಅಭಿವೃದ್ಧಿಯ ಪರ ನೀತಿಗಳನ್ನು ಮುಂದುವರೆಸಿರುವುದನ್ನು ಎತ್ತಿ ತೋರಿಸುತ್ತಿದೆ.

ಬಜೆಟ್ ಸಂಪನ್ಮೂಲ ಹಾಗೂ ಸಾರ್ವ ಜನಿಕ ಬ್ಯಾಂಕ್ ಬಂಡವಾಳ ತೊಡಗಿಸಿ ಸಾರ್ವಜನಿಕ ರಂಗದ ಉದ್ದಿಮೆಗಳಿಗೆ ಕ್ರಮವಹಿಸಿ ಉದ್ಯೋಗ ನಿರ್ಮಾಣಕ್ಕೆ ಆ ಮೂಲಕ ರಾಜ್ಯ ಸರಕಾರದ ಬೊಕ್ಕಸಕ್ಕೆ ಆದಾಯದ ಹಾದಿಯನ್ನು ಹಿಡಿಯುವ ಬದಲು, ಬಜೆಟ್ ಸಂಪನ್ಮೂಲ ಹಾಗೂ ಸಾರ್ವಜನಿಕ ಬ್ಯಾಂಕ್ ಬಂಡವಾಳ ಒದಗಿಸಿ ಲೂಟಿಕೋರ ಕಂಪನಿಗಳ ಖಾಸಗೀ ರಂಗದ ಮೂಲಕ ಅಭಿವೃದ್ಧಿ ಹಾದಿಯ ಕಡೆ ಸಾಗುವುದಾಗಿಯೂ ಈ ಬಜೆಟ್ ಅಲವತ್ತುಕೊಂಡಿದೆ.

ಮತಾಂಧತೆಯ ಕುರಿತಂತೆ ಮುಂದುವರೆದ ಮೆದು ಧೋರಣೆ

ಲೂಟಿಕೋರ ಕಾರ್ಪೋರೇಟ್ ಸಂಸ್ಥೆಗಳು ಹಾಗೂ ಭೂಮಾಲಕ ಬಂಡವಾಳದಾರರ ಪರವಾದ ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣದ ಪರವಾಗಿರುವ ಕಾಂಗ್ರೆಸ್ ಪಕ್ಷ ದೇಶದಾದ್ಯಂತ ತನ್ನ ಇದುವರೆಗಿನ ಆಡಳಿತದಲ್ಲಿ ಲೂಟಿಕೋರತನದ ರಕ್ಷಣೆಗಾಗಿ ಜನತೆಯನ್ನು ಒಡೆದಾಳುವ ನೀತಿಯನ್ನು ಅನುಸರಿಸುತ್ತಾ ಬಂದಿರುವುದು ನಮ್ಮ ಅನುಭವವಾಗಿದೆ. ಇದಕ್ಕಾಗಿ ಮತಾಂಧ ಶಕ್ತಿಗಳ ವಿಚಾರದಲ್ಲಿ

ಮೆದು ಧೋರಣೆಯ ನೀತಿಯನ್ನು ಅನುಸರಿಸುತ್ತಾ ಬರುತ್ತಿದೆ. ಈಗಲೂ ಅದರ ಮುಂದುವರಿಕೆ ಕಂಡು ಬರುತ್ತಿದೆ.

ಈ ಹಿಂದಿನ ಬಿಜೆಪಿ ಸರಕಾರ ಮುಸ್ಲಿಂ ಅಲ್ಪ ಸಂಖ್ಯಾತರ ವಿಚಾರದಲ್ಲಿ ತಳೆದ ತಾರತಮ್ಯ ನೀತಿಯನ್ನು ಸರಿ ಪಡಿಸುವ ಕೆಲಸದಲ್ಲಿ ತೊಡಗಿರುವುದು ಸಕಾರಾತ್ಮಕವಾಗಿದ್ದರೂ, ಮತ್ತು ರಾಜ್ಯದಲ್ಲಿನ ಸಾಮರಸ್ಯ ಕುರಿತು, ಸಂವಿಧಾನದ ಪ್ರಜಾಪ್ರಭುತ್ವ ಹಕ್ಕುಗಳ ಕುರಿತು ಹಾಗೂ ಜಾತ್ಯತೀತೆಯ ರಕ್ಷಣೆಯ ಕುರಿತು ಮಾತನಾಡುತ್ತಾ, ಅಣ್ಣ ಬಸವಣ್ಣ, ಕುವೆಂಪು ಮುಂತಾದ ಗಣ್ಯ ಮಾನ್ಯರನ್ನು ಸ್ಮರಿಸಿಕೊಳ್ಳುತ್ತಾ ತಾನು ಕೋಮುವಾದಿ ವಿರೋಧಿ ಎಂದು ತೋರಿಸಿಕೊಳ್ಳುತ್ತಾ ಮತ್ತು ತನ್ನನ್ನು ತಾನು ಬಣ್ಣಿಸಿಕೊಂಡಿರುವುದೆಲ್ಲವೂ ಹಿತಕರವಾಗಿ ಕಂಡರೂ,

ವಾಸ್ತವವಾಗಿ, ಅದು ಹಿಂದುತ್ವವಾದಿ ಮತಾಂಧರಿಗೆ ಕುಮ್ಮಕ್ಕಾಗಿ, ಮುಸ್ಲಿಮ ಅಲ್ಪಸಂಖ್ಯಾತರ ಹಾಗೂ ದಲಿತರ ಮೇಲಿನ ಮಾರಣಾಂತಿಕ ಹಲ್ಲೆಗೆ ಕಾರಣವಾಗಿರುವ, ಅವರ ಉದ್ಯೋಗ ಮತ್ತು ಬದುಕುವ ಹಾಗೂ ಆಹಾರದ ಹಕ್ಕುಗಳ ಮೇಲೆ ಮಾರಣಾಂತಿಕ ಧಾಳಿ ಮಾಡುತ್ತಿರುವ, ಕೊಲೆಗಡುಕ ಗೋ ಸಂರಕ್ಷಕರಿಗೆ ಪ್ರೋತ್ಸಾಹ ನೀಡುವಂತಹ ಮತ್ತು ಹೈನೋದ್ಯಮ, ಮಾಂಸೋದ್ಯಮ ಹಾಗೂ ಚರ್ಮೋದ್ಯಮದ ಮೇಲೆ ಭಾರಿ ಧಾಳಿಗೆ ಕಾರಣವಾಗಿರುವ ಜಾನುವಾರು ಹತ್ಯೆ ನಿಷೇಧ ತಿದ್ದುಪಡಿ ಕಾಯ್ದೆ – 2020 ನ್ನು ವಾಪಾಸು ಪಡೆಯಲು ಮೀನಾ ಮೇಷ ಮಾಡುತ್ತಿದೆ. ಕೆಲ ಮತಾಂಧರ ಪರವಾಗಿರುವ ಮಠಾಧೀಶರು ಪತ್ರಿಕಾ ಗೋಷ್ಟಿ ನಡೆಸಿ ಈ ಕಾಯ್ದೆಯನ್ನು ರದ್ದುಪಡಿಸದಂತೆ ಒತ್ತಾಯಿಸಿದ್ದರಿಂದ ಮತ್ತು ಮುಂಬರುವ ಸಂಸತ್ ಚುನಾವಣೆಯಲ್ಲಿ ಹಿಂದು ಮತ ಬ್ಯಾಂಕ್ ಗೆ ಧಕ್ಕೆಯಾಗಬಹುದೆಂಬ ಭೀತಿಯಿಂದ ಈ ಕಾಯ್ದೆಯನ್ನು ಸದ್ಯಕ್ಕೆ ವಾಪಾಸು ಪಡೆಯುವುದಿಲ್ಲವೆಂದು ಹೇಳಿ ಕೊಂಡಿದೆ. ಇದು ಮತ್ತೊಮ್ಮೆ ಮತಾಂಧತೆಯ ಕುರಿತಂತೆ ಅದರ ಮೆದು ಧೋರಣೆಗೆ ಹಿಡಿದ ಕನ್ನಡಿಯಾಗಿದೆ.

ಬಡಜನತೆಯ ಅಭಿವೃದ್ಧಿಗಿಂತ ಅಹಿಂದ ಸಮುದಾಯದ ಕೆನೆಪದರ ಬೆಳೆಸುವ ಬಜೆಟ್:

ಅಹಿಂದ ಜನ ಬೆಂಬಲವನ್ನು ಉಳಿಸಿಕೊಳ್ಳಲು ಈ ಜನ ಸಮುದಾಯಗಳ ಬಡವರಿಗೆ, ಅವರು ಸ್ವಾವಲಂಬಿಗಳಾಗಲು ಬೇಕಾದ ಅಗತ್ಯ ನೆರವು ಮತ್ತು ವ್ಯವಸ್ಥೆಗೆ ಆ ಸಮುದಾಯಗಳಿಗೆ ನೀಡಿರುವ ಅನುದಾನದ ಮೂಲಕ ಕ್ರಮವಹಿಸ ಬೇಕಾಗಿತ್ತು. ಆದರೆ ಅದರ ಬದಲು, ಅಹಿಂದ ಸಮುದಾಯಗಳ ಶ್ರೀಮಂತ ವಿಭಾಗವಾದ ಕೆನೆಪದರದ ಬೆಂಬಲ ಹೊಂದಲು ಮತ್ತು ಅದನ್ನು ವಿಸ್ತರಿಸಲು, ಈ ಸ್ತರಕ್ಕೆ ಪೂರಕವಾದ ಅನುದಾನ ಒದಗಿಸಿರುವುದು ಈ ಬಜೆಟ್ ನಲ್ಲಿ ಮತ್ತು ಈ ಸರಕಾರದ ಅಭಿವೃದ್ಧಿಯ ನಡೆಯಲ್ಲಿ ಕಾಣಬಹುದಾಗಿದೆ. ಗುತ್ತಿಗೆ ಕಾಮಗಾರಿಗಳಲ್ಲಿ ಇವರಿಗೆ ಮೀಸಲಾತಿ ಹಾಗೂ ನೆರವು ನೀಡಿರುವುದು, ಕೈಗಾರಿಕೆಗಳಲ್ಲಿ ಬಂಡವಾಳ ತೊಡಗಿಸಲು ನೆರವು ನೀಡಲು ಕ್ರಮವಹಿಸಿರುವುದು. ಇದು ಆಸ್ಮಿತೆಯ ರಾಜಕಾರಣದ ಬೆಳವಣಿಗೆಗೆ ಪೂರಕವಾಗಿದೆ.

ಯಾರಿಗಾಗಿ ಈ ಸಾಲದ ಹೊರೆ:

ಹಿಂದಿನ ಬಿಜೆಪಿ ಸರಕಾರ ಚುನಾವಣೆಯ ಪೂರ್ವ ಮಂಡಿಸಿದ ಪೂರ್ಣ ಪ್ರಮಾಣದ ಬಜೆಟ್ ನಲ್ಲಿ 77 ಸಾವಿರ ಕೋಟಿ ರೂ.ಗಳ ಸಾಲ ಎತ್ತುವುದಾಗಿ ಹೇಳಿಕೊಂಡಿತ್ತು. ಈಗ ಸಿದ್ಧರಾಮಯ್ಯನವರ ಬಜೆಟ್ ಅದಕ್ಕೆ ಸುಮಾರು 8,000 ಕೋಟಿ ರೂ.ಗಳ ಹೆಚ್ಚುವರಿ ಸೇರಿಸಿ 85,000 ಕೋಟಿ ರೂ.ಗಳ ಸಾಲ ಮಾಡುವುದಾಗಿ ಪ್ರಕಟಿಸಿದೆ. ಇದು ಖಂಡಿತಾ ರಾಜ್ಯದ ಜನತೆಯ ಮೇಲೆ ಮುಂದಿನ ದಿನಗಳಲ್ಲಿ ತೆರಿಗೆಯ ಭಾರವಾಗಿ ಬರಲಿದೆ. ರಾಜ್ಯದ ಜನತೆಯ ಮೇಲೆ ಹಿಂದಿನ ಸರಕಾರಗಳು ಮಾಡಿದ್ದು ಮತ್ತು ಇದೂ ಸೇರಿದರೆ ಒಟ್ಟು 5.15 ಲಕ್ಷ ಕೋಟಿ ರೂಗಳಷ್ಟಾಗುತ್ತಿದೆ. ಈ ಸಾಲದ ಹೊರೆಯು ಬಡ ಹಾಗೂ ದುರ್ಬಲ ಜನತೆಗೆ ಐದು ಗ್ಯಾರಂಟಿಗಳನ್ನು ಒದಗಿಸಿದ್ದರಿಂದ ಬಂದುದೆಂದು ಪ್ರಚುರಿಸುವ ಮೂಲಕ ಅವುಗಳ ವಿರುದ್ಧದ ಮನಸ್ಥಿತಿಯನ್ನು ರೂಪಿಸುವ ಕೆಲಸವು ಇದೇ ಸಂದರ್ಭದಲ್ಲಿ ನಡೆಯುತ್ತಿದೆ. ಆದರೆ, ಇಲ್ಲಿ ವಾಸ್ತವ ಬೇರೆಯೇ ಇದೆ. ಇದು ಲೂಟಿಕೋರ ಕಾರ್ಪೋರೇಟ್ ಅಭಿವೃದ್ಧಿ ನೀತಿಯ ಭಾಗವಾಗಿ, ಆ ಲೂಟಿಕೋರರಿಗೆ ನೀಡುವ ಲಕ್ಷಾಂತರ ಕೋಟಿ ಸಹಾಯಧನದ ಭಾಗವಾಗಿ ಋಣ ಭಾರ ಹೇರಲ್ಪಡುತ್ತಿದೆಯೆಂಬುದನ್ನು ಗಮನಿಸ ಬೇಕು. ಕಳೆದ ವಿಧಾನ ಸಭಾ ಚುನಾವಣೆಯ ಪೂರ್ವ ನಡೆದ ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ಹೂಡಿಕೆಯಾಗಿ ಬಂದಿದೆಯೆಂದು ಹೇಳಲಾದ 9 ಲಕ್ಷ ಕೋಟಿ ರೂ.ಗಳ ಬಂಡವಾಳಕ್ಕೆ ಸರಕಾರ ಶೇ 30 ಸಹಾಯಧನದ ನೆರವು ಘೋಷಿಸಿರುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದಾಗಿದೆ. ಈ ಲೂಟಿಕೋರರಿಗಾಗಿ ಮಾಡಲಾದ ಸಾಲವನ್ನು ರಾಜ್ಯದ ಸಾಮಾನ್ಯ ಜನತೆ ತೀರಿಸಬೇಕಾಗಿದೆಯೆಂಬುದನ್ನು ಇಲ್ಲಿ ಗಮನಿಸಬೇಕು.

ಕರ್ನಾಟಕಕ್ಕೆ ಅಕ್ಕಿ ನಿರಾಕರಿಸುವ ಆಹಾರ ನಿಗಮದ ವಿಲಕ್ಷಣ ತರ್ಕ...

ಪುಟ 13 ರಿಂದ

ಕ್ರಮವನ್ನು ಯಾವ ರೀತಿಯಲ್ಲಿ ನೋಡಿದರೂ ಅದು ಅಕ್ಷಮ್ಯವೆಂದೇ ತೋರುತ್ತದೆ. ಹಣದುಬ್ಬರದ ಬಗೆಗಿನ ಅದರ ಎಲ್ಲಾ ಮಾತುಗಳೂ ದಾರಿ ತಪ್ಪಿಸುವ ಉದ್ದೇಶ ಹೊಂದಿವೆ. ಕರ್ನಾಟಕ ಸರ್ಕಾರಕ್ಕೆ ಧಾನ್ಯಗಳನ್ನು ಕೇಂದ್ರವು ಮಾರಾಟ ಮಾಡದಿರುವ ಕ್ರಮವು ಒಂದು ವೇಳೆ ರಾಜಕೀಯ ಪ್ರೇರಿತ ತಾರತಮ್ಯದ ಕೃತ್ಯವಾಗಿದ್ದರೆ, ಅದು ಅಕ್ಷಮ್ಯವೇ ಸರಿ. ಏಕೆಂದರೆ, ಅದು ಬಡವರಿಗೆ ನಷ್ಟವನ್ನು ಉಂಟುಮಾಡುವ ರಾಜಕೀಯ ಆಟವಾಗುತ್ತದೆ. ಮತ್ತೊಂದೆಡೆಯಲ್ಲಿ, ಕರ್ನಾಟಕ ಸರ್ಕಾರಕ್ಕೆ ಅಕ್ಕಿಯನ್ನು ಒಂದು ವೇಳೆ ಮಾರಾಟ ಮಾಡಿದರೆ ಹಣದುಬ್ಬರವನ್ನು ನಿಯಂತ್ರಿಸುವುದು ಸಾಧ್ಯವಾಗುವುದಿಲ್ಲ ಎಂದು ಕೇಂದ್ರ ಸರ್ಕಾರವು ನಿಜಕ್ಕೂ ಪೇಚಾಡುತ್ತಿದ್ದರೆ, ಅದು ಹಣದುಬ್ಬರದ ಬಗ್ಗೆ ಕೇಂದ್ರ ಸರ್ಕಾರವು ಹೊಂದಿರುವ ತಪ್ಪು ತಿಳುವಳಿಕೆಯನ್ನು ಮತ್ತು ಅದು ಹೊಂದಿರುವ ಮನೋಭಾವವನ್ನು ಸಂಪೂರ್ಣವಾಗಿ ಜಾಹೀರುಪಡಿಸಿಕೊಳ್ಳುತ್ತದೆ. ಅದೂ ಸಹ ಅಕ್ಷಮ್ಯವೇ.

ಆಹಾರ ಆಡಳಿತದ ಈ ರೀತಿಯ ಕೇಂದ್ರೀಕರಣವು ದೇಶದ ಆಹಾರ ಅರ್ಥವ್ಯವಸ್ಥೆಯನ್ನು ಸಂಪೂರ್ಣವಾಗಿ ದುರ್ಬಲಗೊಳಿಸುವ ಕೇಂದ್ರಾಪಗಾಮಿ(ಅಂದರೆ, ಒಂದು ಕೇಂದ್ರದಿಂದ ವಿವಿಧ ದಿಕ್ಕಿನಲ್ಲಿ ಚಲಿಸುವ) ಪ್ರವೃತ್ತಿಗಳನ್ನು ಸೃಷ್ಟಿಸುವ ಅಪಾಯವಿದೆ. ಉದಾಹರಣೆಗೆ, ಈ ರೀತಿಯ ತಾರತಮ್ಯಕ್ಕೆ ಒಳಗಾದ ವಿರೋಧ ಪಕ್ಷದ ಆಡಳಿತವಿರುವ ರಾಜ್ಯಗಳು, ಭಾರತ ಆಹಾರ ನಿಗಮವನ್ನು ಸಂಪೂರ್ಣವಾಗಿ ನಿರ್ಲಕ್ಷಿಸುವ ಮಾರ್ಗ ಹಿಡಿದರೆ, ರಾಷ್ಟ್ರೀಯ ಆಡಳಿತದ ಇಡೀ ಸಾರ್ವಜನಿಕ ವಿತರಣಾ ವ್ಯವಸ್ಥೆಯು ಕುಂಠಿತಗೊಳ್ಳುತ್ತದೆ.

ಜನರ ಅಗತ್ಯಗಳ ಬಗ್ಗೆ ಬಿಜೆಪಿಯ ತಿಳುವಳಿಕೆ ಮತ್ತು ಕಾಳಜಿ ಅಲ್ಪವೇ ಆಗಿದ್ದು, ಅದು ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಕ್ರಮೇಣ ಮುಚ್ಚಲು ಬಯಸುತ್ತದೆ. ಅದರಿಂದಾಗುವ ನಷ್ಟವನ್ನು ದೇಶದ ಜನರು ಅನುಭವಿಸಬೇಕಾಗುತ್ತದೆ. ರೈತರ ಜಗ್ಗದ ಹೋರಾಟದ ಹಿನ್ನೆಲೆಯಲ್ಲಿ ಹಿಂತೆಗೆದುಕೊಂಡ ಸರ್ಕಾರದ ಮೂರು ಕೃಷಿ ಕಾನೂನುಗಳು ನಿಜಕ್ಕೂ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಇಂತಹ ಅಂತ್ಯವನ್ನು ಸಾಧಿಸುತ್ತಿದ್ದವು ಎಂಬುದನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕಾಗುತ್ತದೆ.

ಕೃಪೆ: ಪಂಜು ಗಂಗೊಳ್ಳಿ, ದಿ ಸ್ಟೇಟ್

ಅಟಲ್ ಪಿಂಚಣಿ ಯೋಜನೆ.........

ಪುಟ 11 ರಿಂದ

ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ (PFRDA) ನಿರ್ವಹಿಸುವ ರಾಷ್ಟ್ರೀಯ ಪಿಂಚಣಿ ವ್ಯವಸ್ಥೆಗೆ (NPS) ಸೇರುವ ಮತ್ತು ಯಾವುದೇ ಶಾಸನಬದ್ಧ ಸಾಮಾಜಿಕ ಭದ್ರತಾ ಯೋಜನೆಯ ಸದಸ್ಯರಲ್ಲದ, ಅಸಂಘಟಿತ ವಲಯದಲ್ಲಿರುವ ಎಲ್ಲಾ ನಾಗರಿಕರ ಮೇಲೆ APY ಕೇಂದ್ರೀಕೃತವಾಗಿದೆ. ಈ ಯೋಜನೆಗೆ ಸೇರಲು ಕನಿಷ್ಠ ವಯಸ್ಸು 18 ವರ್ಷಗಳು ಮತ್ತು ಗರಿಷ್ಠ ವಯಸ್ಸು 40 ವರ್ಷಗಳು. 40 ವರ್ಷ ತುಂಬಿದವರು ಈ ಯೋಜನೆಗೆ ಸೇರಲು ಅರ್ಹರಲ್ಲ. ಚಂದಾದಾರರ ಕೊಡುಗೆಯ ಕನಿಷ್ಠ ಅವಧಿಯು 20 ವರ್ಷಗಳು. ಗರಿಷ್ಠ ಅವಧಿಯು 42 ವರ್ಷಗಳು. ತಮ್ಮ 60 ವರ್ಷ ವಯಸ್ಸಿನ ವರೆಗೆ ವಂತಿಗೆ ಕಟ್ಟಬೇಕು. ಚಂದಾದಾರರು 60 ವರ್ಷಗಳ ವಯಸ್ಸಿನ ನಂತರ, ಅವರ ಕೊಡುಗೆಗಳನ್ನು ಅವಲಂಬಿಸಿ, ರೂ. ತಿಂಗಳಿಗೆ ರೂ. 1000, ರೂ. 2000, ರೂ. 3000, ರೂ. 4000 ಅಥವಾ ರೂ. 5000 ಸ್ಥಿರ ಪಿಂಚಣಿ ದೊರೆಯುತ್ತದೆ. ಇದು ಈ ಯೋಜನೆಗೆ ಸೇರುವ ವಯಸ್ಸಿನ ಮೇಲೆ ಬದಲಾಗುತ್ತದೆ. ಸ್ಥಿರ ಪಿಂಚಣಿಯ ಪ್ರಯೋಜನವನ್ನು ಸರ್ಕಾರವು ಖಾತರಿಪಡಿಸುತ್ತದೆ. ಯೋಜನೆ ಪ್ರಾರಂಭವಾದ 5 ವರ್ಷಗಳ ಅವಧಿಯ ವರೆಗೆ ಅಂದರೆ, 2015–16 ರಿಂದ 2019–20, ಸೇರುವ ಚಂದಾದಾರರಿಗೆ ಕೇಂದ್ರ ಸರ್ಕಾರದಿಂದ ಒಂದಷ್ಟು ಕೊಡುಗೆ ನೀಡುವ ಘೋಷಣೆ ಮಾಡಿತ್ತು. ಚಂದಾದಾರರ ಕೊಡುಗೆಯ 50% ಅಥವಾ ರೂ. ವಾರ್ಷಿಕ 1000, ಯಾವುದು ಕಡಿಮೆಯೋ ಅದನ್ನು ಪ್ರತಿ ಅರ್ಹ ಚಂದಾದಾರರ ಖಾತೆಗೆ ಹಾಕುವುದಾಗಿ ಹೇಳಿತ್ತು.

ಚಂದಾದಾರರು 18 ವರ್ಷ ವಯಸ್ಸಿನಲ್ಲಿ ಸೇರಿದರೆ, 42 ವರ್ಷಗಳ ಕಾಲ (ಅವರಿಗೆ 60 ವರ್ಷ ತುಂಬುವವರೆಗೆ) ತಿಂಗಳಿಗೆ 42 ರೂ. ವಂತಿಗೆ ಕಟ್ಟಬೇಕು. 40ರ ವಯಸ್ಸಿನಲ್ಲಿ ಸೇರುವ ಚಂದಾದಾರರು ಉಳಿದ 20 ವರ್ಷಗಳ ವರೆಗೆ, ಪ್ರತಿ ತಿಂಗಳು 210 ರೂ. ಗಳಂತೆ ವಂತಿಗೆ ಪಾವತಿಸಿಬೇಕು. ಸೇರುವ ವಯಸ್ಸಿನ ಆಧಾರದಲ್ಲಿ ವಂತಗೆ ಹಣ ನಿಗಧಿಯಾಗುತ್ತದೆ. (ಇಲ್ಲಿ ಕೊಟ್ಟಿರುವ ಕೋಷ್ಟಕಗಳನ್ನು ನೋಡಿ). ಇದರ ಆದಾರದ ಮೇಲೆ ನಿವೃತ್ತಿ ನಂತರ ವೃದ್ಧಾಪ್ಯ ವೇತನದ ಪ್ರಮಾಣ 1,000 ದಿಂದ 5,000 ರೂ. ವರೆಗೆ ನಿರ್ಧಾರವಾಗುತ್ತದೆ.

ಅಟಲ್ ಪಿಂಚಣಿ ಯೋಜನೆ ಮೂಲಕ ಪಿಂಚಣಿ ಪಡೆಯುವ ಯಾರಿಗೂ ಸರ್ಕಾರ ಈಗ ನೀಡುತ್ತಿರುವ ಈ ಪಿಂಚಣಿ ಸಿಗುವ ಕಾಲಕ್ಕೆ (ಕನಿಷ್ಟ 20 ವರ್ಷಗಳ ನಂತರ) ಜೀವನ ವೆಚ್ಚ ದುಬಾರಿಯಾಗಿರುತ್ತದೆ. ಹಣದ ಮೌಲ್ಯ ಕಡಿಮೆಯಾಗಿರುತ್ತದೆ. ಬರುವ ಅಲ್ಪ ಪ್ರಮಾನದ ಪಿಂಚಣಿ ಹಿರಿಯ ನಾಗರೀಕರಿಗೆ ಆರ್ಥಿಕ ಭದ್ರತೆ ನೀಡಲಾರದು.

ಸಾಮಾಜಿಕ ಭದ್ರತೆಯ ಉಳಿವಿಗಾಗಿ ಹೋರಾಡಬೇಕಿದೆ

ನಿರುದ್ಯೋಗ, ನಿಕೃಷ್ಠ ಕೂಲಿ, ಕೃಷಿ ಬಿಕ್ಕಟ್ಟು, ಅಗತ್ಯ ವಸ್ತುಗಳ ದುಬಾರಿ ಬೆಲೆ, ಕೈಗೆಟುದ ಶಿಕ್ಷಣ ಮತ್ತು ಆರೋಗ್ಯ ಇವೆಲ್ಲವುಗಳಿಂದ ಬಳಲುತ್ತಿರುವ ಹತ್ತಾರು ಕೋಟಿ ಅಸಂಘಟಿತ ಕಾರ್ಮಿಕರ, ಕೃಷಿ ಕೂಲಿಕಾರರ ಮತ್ತು ಸಣ್ಣ ರೈತರ ಕುಟುಂಬಗಳು, ಅಗತ್ಯವಾದಷ್ಟು ಆದಾಯವಿಲ್ಲದೆ ಜೀವನ ನಡೆಸುವುದೇ ಕಷ್ಟಕರವಾಗಿರುವಾಗ, ಸಾಲದ ಸುಳಿಯಲ್ಲಿ ಸಿಲುಕಿ ನರಳುತ್ತಿರುವಾಗ, ತಮ್ಮ ಮುಪ್ಪಿನ ಕಾಲದ ಬದುಕಿನ ಆರ್ಥಿಕ ಭದ್ರತೆಗೆ ಒಂದಷ್ಟು ಹಣ ಉಳಿಸಲಾದರೂ ಹೇಗೆ ಸಾಧ್ಯ? ಜನತೆಗೆ ಸಾಮಾಜಿಕ ಭದ್ರತೆ ಒದಗಿಸುವ ತನ್ನ ಬದ್ಧತೆಯಿಂದ ಸರ್ಕಾರ ಹಿಂದೆ ಸರಿಯುತ್ತಿರುವುದನ್ನು ದೇಶದ ಜನತೆ ಬಲವಾಗಿ ವಿರೋಧಿಸಬೇಕಿದೆ. ಖಾಸಗಿ ಬಂಡವಾಳಗಾರರಿಗೆ ಲಾಭ ಮಾಡಿಕೊಡಲು ಜನಸಾಮಾನ್ಯರ ಬದುಕನ್ನು ಕಸಿಯುವ ನವ–ಉದಾರವಾದಿ ನೀತಿಗಳ ವಿರುದ್ಧ ದೊಡ್ಡ ಮಟ್ಟದಲ್ಲಿ ಧ್ವನಿ ಎತ್ತಬೇಕಿದೆ.

ವರ್ಷದಲ್ಲಿ 50–80 ಲಕ್ಷ ಉದ್ಯೋಗಾವಕಾಶಗಳ ನಿರ್ಮಾಣವಾದರೆ ಸಾಕೇ?

ಸಾಕು ಎನ್ನುತ್ತಾರೆ ಸರಕಾರೀ ಅರ್ಥಶಾಸ್ತ್ರಜ್ಞರು. ಜನಸಂಖ್ಯೆಯ ಬೆಳವಣಿಗೆ ದರ ಶೇ 1.5 ರಿಂದ ಶೇ 0.8 ಕ್ಕೆ ಇಳಿದಿರುವುದರಿಂದ ದೇಶದ ಅರ್ಥವ್ಯವಸ್ಥೆಯಲ್ಲಿ ಪ್ರತಿವರ್ಷ ಹೊಸದಾಗಿ ಉದ್ಯೋಗ ಅರಸುವ ಯುವಜನರ ಸಂಖ್ಯೆ ಅಂದಾಜು ಸುಮಾರು 50 ರಿಂದ 80 ಲಕ್ಷ ಆಗಬಹುದಂತೆ. ಆದರೆ ಇಲ್ಲಿ ಜನನ ಸಂಖ್ಯೆ ಮುಖ್ಯವೇ ಹೊರತು ಜನಸಂಖ್ಯೆ ಬೆಳವಣಿಗೆ ದರ ಅಲ್ಲ ಎನ್ನುತ್ತಾರೆ ಪ್ರಸಿದ್ಧ ಅರ್ಥಶಾಸ್ತ್ರಜ್ಞ, ಜವಹರಲಾಲ್ ನೆಹರು ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಅರುಣ್ ಕುಮಾರ್. ಅವರ ಲೆಕ್ಕಾಚಾರದ ಪ್ರಕಾರ 2022ರಲ್ಲಿ ಹೊಸದಾಗಿ ಉದ್ಯೋಗ ಮಾರುಕಟ್ಟೆಗೆ ಪ್ರವೇಶಿಸುವವರ ಸಂಖ್ಯೆಯೇ 2.75 ಕೋಟಿಯಷ್ಟಾಗುತ್ತದೆ. ಅಲ್ಲದೆ 28.6 ಕೋಟಿ ಜನರಿಗೆ ಸರಿಯಾದ ಉದ್ಯೋಗದ ಅವಶ್ಯಕತೆಯಿದೆ. ಆದ್ದರಿಂದ ಸರಕಾರದ ನೀತಿ ನಿರೂಪಕರು ಬರೀ 50ರಿಂದ 80 ಲಕ್ಷ ಯುವಜನರಿಗೆ ಉದ್ಯೋಗ ನಿರ್ಮಿಸಬೇಕಾಗಿದೆಯಷ್ಟೇ ಎಂಬ ಮಾತನಾಡಿದರೆ ಅದು ನಿರುದ್ಯೋಗ ಸಮಸ್ಯೆಯ ಅಂಚನ್ನು ಮಾತ್ರ ಮುಟ್ಟಿ ನೋಡಿದಂತೆ ಆಗುತ್ತದೆ ಎನ್ನುತ್ತಾರೆ ಪ್ರೊ. ಅರುಣ್ ಕುಮಾರ್ ಈ ಲೇಖನದಲ್ಲಿ.

('ಜೂನ್ 29ರ 'ದಿ ಹಿಂದೂ' ಪತ್ರಿಕೆಯಲ್ಲಿ ಪ್ರಕಟವಾಗಿರುವ ಅವರ ಲೇಖನದ ಅನುವಾದ : ಜಿ.ಎಸ್.ಮಣಿ)

ಸರ್ಕಾರಿ ಅರ್ಥಶಾಸ್ತ್ರಜ್ಞರು ನಿರುದ್ಯೋಗದ ಬಗೆಗೆ ಬಗೆ ಬಗೆಯ ವಾದಗಳನ್ನು ಮಂಡಿಸುತ್ತಾರೆ. ಸಾಕಷ್ಟು ಉದ್ಯೋಗಗಳ ಸೃಷ್ಟಿ ಆಗುತ್ತಿರುವುದರಿಂದ ದೇಶದಲ್ಲಿ ಬಹಳಷ್ಟು ನೀರುದ್ಯೋಗವೇನಿಲ್ಲ ಎಂಬುದು ಅಂತಹ ಒಂದು ವಾದ. ಅವರ ವಿವರಣೆ ಏನಂದರೆ ಜನಸಂಖ್ಯೆಯ ಬೆಳವಣಿಗೆ ಕಡಿಮೆ ಆಗಿರುವುದರಿಂದ ಉದ್ಯೋಗಗಳ ಬೇಡಿಕೆ ಬಹಳಷ್ಟೇನೂ ಹೆಚ್ಚಿಲ್ಲವಾದ್ದರಿಂದ, ಪ್ರತಿವರ್ಷ ಉದ್ಯೋಗಾವಕಾಶ ನಿರ್ಮಾಣದ ಪ್ರಮಾಣ ಬಹಳೇನೂ ಇರಬೇಕಾಗಿಲ್ಲ. ಪ್ರಧಾನ ಮಂತ್ರಿಗಳ ಆರ್ಥಿಕ ಸಲಹಾ ಮಂಡಳಿಯ ಅದ್ಯಕ್ಷರಾದ ಬಿಬೇಕ ದೇಬ್ ರಾಯ್ ಅವರ ಪ್ರಕಾರ (ಇಂಡಿಯನ್ ಎಕ್ಸ್ ಪ್ರೆಸ್ ನಲ್ಲಿ ಅವರು ಬರೆದ ಲೇಖನದಲ್ಲಿ ಅವರು ಹೇಳುವಂತೆ) ಜನಸಂಖ್ಯೆಯ ಬೆಳವವಣಿಗೆ ಶೇ 1.5 ರಿಂದ ಶೇ 0.8 ಕ್ಕೆ ಇಳಿದಿರುವುದನ್ನು ವಿಶ್ಲೇಷಕರು ನಿರ್ಲಕ್ಷಿಸುತ್ತಾರೆ. ಆದ್ದರಿಂದ ಭಾರತ ಪ್ರತಿ ವರ್ಷದಲ್ಲಿ ಎಷ್ಟು ಉದ್ಯೋಗಗಳನ್ನು ಸೃಷ್ಟಿಸಬೇಕು ಎಂಬ ಪ್ರಶ್ನೆ ಎತ್ತಿ "10 ರಿಂದ 12 ದಶಲಕ್ಷ ಉದ್ಯೋಗಗಳ ನಿರ್ಮಾಣವಾಗಬೇಕು ಎಂದು ಹೇಳುತ್ತಾರೆ. ಆದರೆ ಇದು ಹಳೆಯ ಅಂಕಿ–ಸಂಖ್ಯೆ, 2003–04 ರಷ್ಟು ಹಳೆಯವು", ಬದಲು ಇದು 5 ರಿಂದ 8 ದಶಲಕ್ಷಗಳಿಗೆ ಇಳಿದಿರಬಹುದು ಎಂದು ಅವರು ಹೇಳುತ್ತಾರೆ.

ಶ್ರಮ ಬಲ

ಈ ಮಾತು ಸರ್ಕಾರಿ ವಲಯದಲ್ಲಿ ಇರುವ ವಿಚಾರಗಳ ಅಭಿವ್ಯಕ್ತಿ. ಆದ್ದರಿಂದ ಇದರ ವಿಶ್ಲೇಷಣೆ ಅವಶ್ಯ . ಪ್ರಸಕ್ತ ಜನಸಂಖ್ಯೆ ಬೆಳವಣಿಗೆ ದರ ಇಂದಿನ ಶ್ರಮಬಲದ ಹೆಚ್ಚಳಕ್ಕೆ ಯಾವರೀತಿ ಸಂಬಂಧಿಸಿದೆ? ಶ್ರಮಬಲ ಎಂದರೆ 15–64 ವಯಸ್ಸಿನ ಕೆಲಸ ಬಯಸುವ ಜನರ ಒಟ್ಟು ಸಂಖ್ಯೆ ಎಂಬುದು ಅಂತರರಾಷ್ಟ್ರೀಯ ಶ್ರಮಿಕರ ಸಂಸ್ಥೆ (ಐಎಲ್‌ಒ) ಯ ಮಾಪನ. ಈ ಮಾಪನದಲ್ಲಿ 2003–04 ರಲ್ಲಿ ಹುಟ್ಟಿದ ಜನ 2017–18 ರ ಹೊತ್ತಿಗೆ ಕೆಲಸ ಕೇಳುವ ಹಂತಕ್ಕೆ ಬಂದಿರುತ್ತಾರೆ ಎಂದು ಕೊಂಡರೆ, ಅದು ನಿರುದ್ಯೋಗದ ಪ್ರಮಾಣದ ಸೂಚನೆಯಾಗುತ್ತದೆ. ಇವರಲ್ಲಿ ಕೆಲವರು ಹೆಚ್ಚಿನ ಓದಿಗೆ ಹೋಗಬಹುದು, ಬೇರೆ ಬೇರೆ ಪರೀಕ್ಷೆಗಳನ್ನು ಬರೆಯುತ್ತಿರಬಹುದು. ಆದರೂ ಇವರೆಲ್ಲ ಇಂದಲ್ಲ ನಾಳೆ ಉದ್ಯೋಗ ಅರಸತೊಡಗುತ್ತಾರೆ. ಎಲ್ಲರೂ ಉದ್ಯಮಿಗಳಾಗಲು ಸಾಧ್ಯವಿಲ್ಲ.

ಇಲ್ಲಿ ಜನನ ಸಂಖ್ಯೆ ಮುಖ್ಯವೇ ಹೊರತು ಜನಸಂಖ್ಯೆ ಬೆಳವಣಿಗೆ ದರ ಅಲ್ಲ. ಜನನ ಸಂಖ್ಯೆಯಲ್ಲಿ ಐದು ವರ್ಷಗಳೊಳಗಿನವರ ಸಾವಿನ ಸಂಖ್ಯೆ ಕಳೆದರೆ ಉದ್ಯೋಗ ಬೇಡಿಕೆ ಪ್ರಮಾಣ ಸಿಗುತ್ತದೆ. ಕೋಷ್ಟಕ– 1.

(ಇದು ಅಕ್ಟೋಬರ್ 11, 2022 ರಂದು ಆರಂಭಿಸಲಾದ 'ದೇಶ್ ಬಚಾವೋ ಅಭಿಯಾನ' ರಚಿಸಿದ 'ಉದ್ಯೋಗ ಮತ್ತು ನಿರುದ್ಯೋಗ ಕುರಿತ ಜನತಾ ಆಯೋಗ'ದ ವರದಿಯಲ್ಲಿನ ದತ್ತಾಂಶಗಳನ್ನು ಆಧರಿಸಿದೆ)

ಹೀಗೆ ಲೆಕ್ಕ ಹಾಕಿದಾಗ ಶ್ರಮಬಲದ ಹೆಚ್ಚಳ 2000 ದಲ್ಲಿ 28.06 ದಶಲಕ್ಷ ಆಗಿತ್ತು. 2002, 2005, 2007 ಮತ್ತು 2022 ರಲ್ಲಿ ಈ ಸಂಖ್ಯೆ ಅನುಕ್ರಮವಾಗಿ 27.99, 27.78, 27.45 ಮತ್ತು 24.16 ದಶಲಕ್ಷ ಆಗಿತ್ತು (ಕೋಷ್ಟಕ–1 ನೋಡಿ). ಈ ಅವಧಿಯಲ್ಲಿ ಯುವಜನತೆ 24 ದಶಲಕ್ಷ ಗಳಿಂದ 28 ದಶಲಕ್ಷಗಳ ಮಿತಿಯಲ್ಲಿ ಹೆಚ್ಚಳವಾಗಿದೆ ಎಂಬುದು ಗೊತ್ತಾಗುತ್ತದೆ. ಬೇರೆ ಬೇರೆ ಶೈಕ್ಷಣಿಕ ಹಂತಗಳಿರುವುದರಿಂದ, ಹೈಸ್ಕೂಲ್ ಮುಗಿಸಿದವರು, ಇಂಟರ್ಮೀಡಿಯಟ್, ಪದವಿ ಕ್ಲಾಸುಗಳಲ್ಲಿ ಇರುವವರು ಮತ್ತು ಪದವಿ ಪಡೆದವರು ಎಂಬೆಲ್ಲ ವಿವಿಧ ಹಂತಗಳಲ್ಲಿರುವವರು ಶ್ರಮಿಕರ ಮಾರುಕಟ್ಟೆಗೆ ಬಂದು ಸೇರುತ್ತಾರೆ. ಈ ಸಂಖ್ಯೆಗಳನ್ನು ಶೈಕ್ಷಣಿಕ ದಾಖಲೆಗಳಿಂದ ಸಂಗ್ರಹಿಸಬೇಕು. ಈ ರೀತಿ ನೋಡಿದಾಗ ಸಂಭಾವ್ಯವಾಗಿ 2007 ರಲ್ಲಿ ಹುಟ್ಟಿದ 17.92 ದಶಲಕ್ಷ ಜನ ಶ್ರಮಿಕರ ಮಾರುಕಟ್ಟೆಗೆ 2022 ಸೇರುತ್ತಾರೆ. ಹಾಗೆಯೇ 2005 ರಲ್ಲಿ ಹುಟ್ಟಿದ 2.58, 2002 ರಲ್ಲಿ ಹುಟ್ಟಿದ 5.59 ಮತ್ತು 2000 ದಲ್ಲಿ ಹುಟ್ಟಿದ 1.40 ದಶಲಕ್ಷ ಜನ ಶ್ರಮಶಕ್ತಿಗೆ ಸೇರುತ್ತಾರೆ. ಒಟ್ಟು ಇದು 27.51 ದಶಲಕ್ಷ (ಕೋಷ್ಟಕ–2 ನೋಡಿ) ಆಗುತ್ತದೆ.

ಹೀಗೆ ಸೇರುವವರಲ್ಲಿ ಪುರುಷರಿಗಿಂತ ಮಹಿಳೆಯರ ಸಂಖ್ಯೆ ಕಡಿಮೆ ಇರುತ್ತದೆ. 2022 ರ ಸಂಖ್ಯೆ ನೋಡಿದಾಗ 1000 ಮಹಿಳೆಯರು ಈ ಸಂಖ್ಯೆಗೆ ಸೇರುವಾಗ ಪುರುಷರ ಸಂಖ್ಯೆ 1068 ಇರುತ್ತದೆ. ಅಂದರೆ ಶೇ 48.35 ರಷ್ಟು ಮಹಿಳೆಯರ ಸೇರ್ಪಡೆ ಇರುತ್ತದೆ. ಮೇಲಿನ ಒಟ್ಟು ಸಂಖ್ಯೆಯಲ್ಲಿ 13.30 ದಶಲಕ್ಷದಷ್ಟು ಮಹಿಳೆಯರಿರುತ್ತಾರೆ. ಇದರಲ್ಲಿ ಶೇ 25 ರಷ್ಟು ಸಾಮಾಜಿಕ ಕಾರಣಕ್ಕೆ ಕೆಲಸ ಮಾಡಲು ಸಾಧ್ಯವಿಲ್ಲ ಎಂದುಕೊಂಡರೆ, 24.19 ದಶಲಕ್ಷ ಯುವಜನತೆ 2022 ರಲ್ಲಿ ಶ್ರಮ ಶಕ್ತಿಗೆ ಸೇರುತ್ತಾರೆ ಎಂದು ಹೇಳಬಹುದು.

ಅಸಂಘಟಿತ ವಲಯ:

ಸಂಘಟಿತ ವಲಯ ಬಹುತೇಕ ಯಾಂತ್ರಿಕೃತವಾಗಿದ್ದು, ಹೆಚ್ಚು ಉದ್ಯೋಗಗಳನ್ನು ಹುಟ್ಟುಹಾಕುವುದಿಲ್ಲ. ಆದ್ದರಿಂದ ಶೇ 94 ರಷ್ಟು ಶ್ರಮ ಶಕ್ತಿ ಅಸಂಘಟಿತ ವಲಯದಲ್ಲೇ ಇದೆ. ಇವರು ಕಡಿಮೆ ಸಂಬಳಕ್ಕೆ ದುಡಿಯುವವರು. "ಇ– ಶ್ರಮ' ಪೋರ್ಟಲ್ ನಲ್ಲಿ ನವೆಂಬರ್ 2022 ರಲ್ಲಿ ನೋಂದಾಯಿತ ಶೇ 94 ರಷ್ಟು ಜನ ತಿಂಗಳಿಗೆ 10,000 ರೂಪಾಯಿಗಳಿಗಿಂತ ಕಡಿಮೆ ಸಂಬಳ ಪಡೆಯುತ್ತಿದ್ದರು. ಅಸಂಘಟಿತ ವಲಯದ ಜಾಗವನ್ನು ಆಕ್ರಮಿಸಿ ಬೆಳೆವ ಸಂಘಟಿತ ವಲಯ ಹೆಚ್ಚೆಚ್ಚು ನೀರುದ್ಯೋಗಕ್ಕೆ ಎಡೆ ಮಾಡಿಕೊಡುತ್ತದೆ. ನೀರುದ್ಯೋಗದಲ್ಲೂ ಬೇರೆ ಬೇರೆ ಸ್ತರಗಳಿವೆ. ನಿರುದ್ಯೋಗ, ಅರೆ ನಿರುದ್ಯೋಗ, ಉದ್ಯೋಗದ ವೇಷದ ನಿರುದ್ಯೋಗ ಮತ್ತು ಉದ್ಯೋಗದ ಹುಡುಕಾಟವನ್ನೇ ಬಿಟ್ಟವರು, ಇತ್ಯಾದಿ.

ಸರಳ ಊಹೆಗಳ ಆಧಾರದಲ್ಲಿ ಲೆಕ್ಕ ಹಾಕಿದರೆ 28.6 ಕೋಟಿ ಜನರಿಗೆ ಸರಿಯಾದ ಉದ್ಯೋಗದ ಅವಶ್ಯಕತೆಯಿದೆ. ಇವರೆಲ್ಲ ಅಸಂಘಟಿತ ವಲಯದಲ್ಲಿ ಇರುವವರು. 33.2 ಕೋಟಿ ಜನರಿಗೆ ಮಾತ್ರ ಸರಿಯಾದ ಉದ್ಯೋಗವಿದೆ, ಇವರಲ್ಲಿಯೂ ಹೆಚ್ಚಿನವರು ಅಸಂಘಟಿತ ವಲಯದಲ್ಲಿ ಇರುವವರು.

ಆದ್ದರಿಂದ ನೀತಿ ನಿರೂಪಕರು ಬರೀ 5 ರಿಂದ 8 ದಶಲಕ್ಷ ಯುವಜನರಿಗೆ ಉದ್ಯೋಗ ನಿರ್ಮಿಸಬೇಕಾಗಿದೆಯಷ್ಟೇ ಎಂಬ ಮಾತನಾಡಿದರೆ, ಅದು ನಿರುದ್ಯೋಗ ಸಮಸ್ಯೆಯ ತುದಿಯನ್ನು ಮಾತ್ರ ಮುಟ್ಟಿ ನೋಡಿದಂತೆ ಆಗುತ್ತದೆಯಷ್ಟೇ!!



ಕೋಷ್ಟಕ 2

ಕೋಷ್ಟಕ–1ರ ಕಾಲಂ 8ರಲ್ಲಿ ವಿವಿಧ ಪ್ರಮಾಣ ಪತ್ರ/ಪದವಿಗಳನ್ನು ಪಡೆದು ಶ್ರಮ ಬಲವನ್ನು ಸೇರಬಹುದಾದವರ ಸಂಖ್ಯೆಯನ್ನು ಹೀಗೆ ಲೆಕ್ಕ ಹಾಕಲಾಗಿದೆ:
❖ 2007 ರಲ್ಲಿ ಹುಟ್ಟಿ ಬದುಕುಳಿದವರಲ್ಲಿ 65.3% ಅಂದರೆ ಕಾಲಂ 7* 0.653
❖ 2005 ರಲ್ಲಿ ಹುಟ್ಟಿ ಬದುಕುಳಿದವರಲ್ಲಿ 9.3% ಕಾಲಂ 7* 0.093
❖ 2002 ರಲ್ಲಿ ಹುಟ್ಟಿ ಬದುಕುಳಿದವರಲ್ಲಿ 20% ಕಾಲಂ 7* 0.20
❖ 2000ದಲ್ಲಿ ಹುಟ್ಟಿ ಬದುಕುಳಿದವರಲ್ಲಿ 5% ಕಾಲಂ 7* 0.05

ಕೋಷ್ಟಕ– 1

ವರ್ಷ	ಜನನ ದರ	ಜನಸಂಖ್ಯೆ	ಜನನಗಳು (ಕಾಲಂ2 *ಕಾಲಂ3)	ಪ್ರತಿಸಾವಿರದಲ್ಲಿ 5 ವರ್ಷಕ್ಕೆ ಮೊದಲು ಸಾವು	ಒಟ್ಟು ಸಾವುಗಳು ಕಾಲಂ5*1000	ಯುವ ಜನಸಂಖ್ಯೆ ಹೆಚ್ಚಳ ಕಾಲಂ(4–6)	ಶ್ರಮ ಬಲವನ್ನು ಸೇರ್ಪಡೆಯಾಗ ಬಹುದಾದವರ ಸಂಖ್ಯೆ
2022	17.2	140,99,63,668	2,41,99,206	32	32,000	2,41,67,206	––
2007	23.3	118,12,73,943	2,75,15,414	59	59,396	27,45,601	1,79,28,780
2005	24.3	114,76,09,927	2,78,47,902	65	64,671	2,77,83,231	25,83,840
2002	25.7	109,17,94,636	2,80,63,489	73	73,475	2,79,90,015	55,98,003
2000	26.6	105,65,75,549	2,81,41,890	80	80,000	2,80,61,890	14,03,095

ಒಟ್ಟು=27513718

ಬಿಜೆಪಿ ವಾಷಿಂಗ್ ಮೆಷಿನ್........ ಪುಟ 10 ರಿಂದ

ಸ್ಥಾನಗಳನ್ನು ಮತ್ತು ಸಿಕ್ಕಿಂ ಡೆಮಾಕ್ರಟಿಕ್ ಫ್ರಂಟ್ 15 ಸ್ಥಾನಗಳನ್ನು ಗೆದ್ದಿದೆ. ಬಿಜೆಪಿ ಒಂದೇ ಒಂದು ಸ್ಥಾನವನ್ನು ಗೆದ್ದಿಲ್ಲ. ಆದಾಗ್ಯೂ, ಸಿಕ್ಕಿಂ ಡೆಮಾಕ್ರಟಿಕ್ ಫ್ರಂಟ್‌ನ 10 ಶಾಸಕರನ್ನು ಪಕ್ಷಕ್ಕೆ ಸೆಳೆಯವ ಮೂಲಕ ಬಿಜೆಪಿ ಸಿಕ್ಕಿಂ ಕ್ರಾಂತಿಕಾರಿ ಮೋರ್ಚಾದೊಂದಿಗೆ ಮೈತ್ರಿ ಸರ್ಕಾರವನ್ನು ರಚಿಸಿತು. ನಂತರ ನಡೆದ ಉಪಚುನಾವಣೆಯಲ್ಲಿ ಬಿಜೆಪಿ ಎಂದಿನಂತೆ ಮೂರರಲ್ಲಿ ಎರಡನ್ನು ಗೆದ್ದುಕೊಂಡಿತು. ಬಿಜೆಪಿ ಒಂದೇ ಒಂದು ಶಾಸಕ ಸ್ಥಾನ ಗೆಲ್ಲದ ರಾಜ್ಯದಲ್ಲಿ ಈಗ 12 ಶಾಸಕರ ಪಕ್ಷವಾಗಿ ಮಾರ್ಪಟ್ಟಿದೆ.

ಮಧ್ಯಪ್ರದೇಶ

2018 ರಲ್ಲಿ ಮಧ್ಯಪ್ರದೇಶದಲ್ಲಿ ಕಾಂಗ್ರೆಸ್ 114 ಸ್ಥಾನಗಳನ್ನು ಮತ್ತು ಬಿಜೆಪಿ 109 ಸ್ಥಾನಗಳನ್ನು ಗೆದ್ದಿದೆ. 2020 ರಲ್ಲಿ, ಕಾಂಗ್ರೆಸ್ ಸರ್ಕಾರ ರಚಿಸಿದಾಗ, ಆ ಪಕ್ಷದ 6 ಸಚಿವರು ಮತ್ತು 20 ವಿಧಾನಸಭಾ ಸದಸ್ಯರನ್ನು ಬಲೆಗೆ ಬೀಳಿಸುವ ಮೂಲಕ ಬಿಜೆಪಿ ಮತ್ತೆ ಅಡ್ಡದಾರಿಯಲ್ಲಿ ಅಧಿಕಾರ ಹಿಡಿಯಿತು. ಸೋತು ದಿಲ್ಲಿಯ ಪಕ್ಷಕ್ಕೆ ದುಡಿಯಲು ಹೋದ ಶಿವರಾಜ್ ಸಿಂಗ್ ಚೌಹಾಣ್ ಮತ್ತೆ ಮುಖ್ಯಮಂತ್ರಿಯಾದರು.

ತೆಲಂಗಾಣ ರಾಜ್ಯದಲ್ಲೂ ಆಪರೇಷನ್ ಕಮಲವನ್ನು ಜಾರಿಗೆ ತರಲು ಬಿಜೆಪಿ ಪ್ರಯತ್ನಿಸಿದೆ. ಆದರೆ ಅದು ಯಶಸ್ವಿಯಾಗಲಿಲ್ಲ. ಜಾರ್ಖಂಡ್‌ನಲ್ಲಿ ಹೇಮಂತ್ ಸೊರೆನ್ ಅವರ ಸರ್ಕಾರವನ್ನು ಉರುಳಿಸಲು ಬಿಜೆಪಿ ಸೊರೆನ್ ಅವರನ್ನು ಶಾಸಕ ಸ್ಥಾನದಿಂದ ವಜಾಗೊಳಿಸುವಂತೆ ರಾಜ್ಯಪಾಲರನ್ನು ಒತ್ತಾಯಿಸಿದೆ. ಹೇಮಂತ್ ಸೊರೆನ್ ಮುಂದೆ ಬಂದು ಬಹುಮತ ಸಾಬೀತುಪಡಿಸಿದ ನಂತರವೂ ಜಾರಿ ನಿರ್ದೇಶನಾಲಯ ಅವರಿಗೆ ವಿಪ್ ನೀಡುತ್ತಲೇ ಇದೆ. ಭ್ರಷ್ಟಾಚಾರ ವಿರೋಧಿ ಖ್ಯಾತಿಯ ತಮಿಳುನಾಡು ರಾಜ್ಯಪಾಲ ಆರ್.ಎನ್. ರವಿ ಅವರು ಎಐಎಡಿಎಂಕೆ ಮಾಜಿ ಸಚಿವರಾದ ಸಿ.ವಿಜಯ ಭಾಸ್ಕರ್, ಪಿ.ವಿ.ರಮಣ, ವೀರಮಣಿ ಮತ್ತು ಎಂ.ಆರ್.ವಿಜಯ ಭಾಸ್ಕರ್ ವಿರುದ್ಧದ ಭ್ರಷ್ಟಾಚಾರ ಪ್ರಕರಣಗಳ ತನಿಖೆಯನ್ನು ವಿಳಂಬ ಮಾಡುತ್ತಿದ್ದಾರೆ. ಈ ವಿಷಯಕ್ಕೆ ಸಂಬಂಧಿಸಿದಂತೆ ತಮಿಳುನಾಡು ಕಾನೂನು ಸಚಿವ ರಘುಪತಿ ರಾಜ್ಯಪಾಲರಿಗೆ ಪತ್ರ ಬರೆದಿದ್ದಾರೆ. ತಮಿಳುನಾಡಿನಲ್ಲಿ ಏನೇ ಮಾಡಿದರೂ ಕಮಲ ಅರಳಿಸಲು ಸಾಧ್ಯವಿಲ್ಲ ಎಂದು ಸಿಟ್ಟಿಗೆದ್ದಿರುವ ಅವರು, ಜಾರಿ ನಿರ್ದೇಶನಾಲಯವನ್ನು ಛೂ ಬಿಟ್ಟಿದ್ದಾರೆ. ಆದರೆ ಬಿಜೆಪಿ ಅಂದುಕೊಂಡದ್ದು ನಡೆಯಲಿಲ್ಲ.

–ಸಿಚಿ –(ಕೃಪೆ–ತೀಕ್ಕದೀರ್)

NEW No. MAG(3)/NPP/205/2021-2022
JANASHAKTHI KANNADA VARA PATRIKE JULY 10-16, 2023 Price: Rs. 10/- Date of Publication: 7 JULY 2023 RNI No. KARKAN /2006/17926 Posted on 11-07-2023
Posted at BG PSO, BG - 560026 **Posted at Periodical Rate -** Rs. 2

ಸರ್ಕಾರದ ಉಚಿತ ವಿದ್ಯುತ್ ಯೋಜನೆ ನಿಜಕ್ಕೂ ಯಶಸ್ವಿ ಆಗಬೇಕೆಂದಿದ್ದರೆ, ಖಾಸಗೀಕರಣಕ್ಕೆ ಅವಕಾಶ ನೀಡುವ ಯೋಜನೆಯನ್ನು ಕೈಬಿಟ್ಟು, ಸರ್ಕಾರವೇ ಕಡಿಮೆ ವೆಚ್ಚವಾಗುವ ವಿದ್ಯುತ್ ಅನ್ನು ಉತ್ಪಾದಿಸಬೇಕು. ಜೊತೆಗೆ ವಿದ್ಯುತ್ ಕಂಪೆನಿಗಳಲ್ಲಿನ ಭ್ರಷ್ಟಾಚಾರವನ್ನು ತಡೆದರೆ ಬಹಳ ದೊಡ್ಡ ಪ್ರಮಾಣದಲ್ಲಿ ಸರ್ಕಾರಕ್ಕೆ ಹಣ ಉಳಿಯುತ್ತದೆ. ಆದರೆ ಸರ್ಕಾರ ತನ್ನ ನವ ಉದಾರವಾದಿ ನೀತಿಗೆ ಬಲಿಯಾಗಿ ಖಾಸಗೀಕರಣ ಮಾಡಿದರೆ ಉಚಿತ ವಿದ್ಯುತ್ ಯೋಜನೆ ಖಂಡಿತಾ ಉಳಿಯಲು ಸಾಧ್ಯವಿಲ್ಲ. ಹೀಗಾಗಿ ರಾಜ್ಯ ವಿಧಾನಸಭೆ ಅಧಿವೇಶನದಲ್ಲಿ ಕೇಂದ್ರದ ವಿದ್ಯುತ್ ತಿದ್ದುಪಡಿ ಮಸೂದೆ-2022ಯನ್ನು ಜಾರಿ ಮಾಡುವುದಿಲ್ಲ ಎಂಬ ನಿರ್ಣಯವನ್ನು ಅಂಗೀಕರಿಸಬೇಕು.

ರಾಜ್ಯ ವಿದ್ಯುತ್ ಸಮಾವೇಶ:

ಜನರ ಹಣದಿಂದ ಕಟ್ಟಿದ ಸಂಸ್ಥೆಯ ಖಾಸಗೀಕರಣ ಯತ್ನ, ಪ್ರಬಲ ವಿರೋಧಕ್ಕೆ ಕರೆ

ಸರಕಾರದ ಉಚಿತ ವಿದ್ಯುತ್ ಯೋಜನೆಯೂ ಒಳಗೊಂಡಂತೆ ವಿದ್ಯುತ್ ನೀತಿ ಕುರಿತು ಸಮಗ್ರವಾಗಿ ಚರ್ಚಿಸಲು ರಾಜ್ಯ ಮಟ್ಟದ ಸಮಾವೇಶವನ್ನು ಸಿಪಿಐ(ಎಂ) ಏರ್ಪಡಿಸಿತ್ತು.

ವಿದ್ಯುತ್ ಸಂಸ್ಥೆಗಳು ಜನರ ತೆರಿಗೆ ಹಣದಿಂದ ಸ್ಥಾಪಿಸಿ ಬೆಳೆಸಿದ್ದು



ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಆಲ್ ಇಂಡಿಯಾ ಫೆಡರೇಶನ್ ಆಫ್ ಎಲೆಕ್ಟ್ರಿಸಿಟಿ ಎಂಪ್ಲಾಯಿಸ್ ಮುಖಂಡರಾದ ಮಹಮ್ಮದ್ ಸಮೀವುಲ್ಲಾ ಅವರು, 'ದೇಶಕ್ಕೆ ಸ್ವಾತಂತ್ರ್ಯ ಬಂದ ಸಮಯದಲ್ಲಿ ವಿದ್ಯುತ್ ಉತ್ಪಾಧನೆಗೆ ಬಂಡವಾಳ ಹೂಡಿಕೆ ಮಾಡಲು ಯಾವ ಬಂಡವಾಳಗಾರರೂ ಮುಂದೆ ಬರಲಿಲ್ಲ. ಆಗ ಸರ್ಕಾರವೇ ಜನರ ತೆರಿಗೆ ಹಣದಿಂದ ವಿದ್ಯುತ್ ಉತ್ಪಾದನೆ, ಸಾಗಣೆ ಮತ್ತು ವಿತರಣೆಗೆ ಅವಶ್ಯಕವಾದ ಮೂಲಭೂತ ಸಂರಚನೆ ನಿರ್ಮಿಸಿತು. ಇಂದು ದೇಶದಲ್ಲಿ 5 ಲಕ್ಷ ಮೆಗಾವಾಟ್ ವಿದ್ಯುತ್ ಉತ್ಪಾಧನೆಯಾಗುತ್ತಿದೆ. ಜನರ ತೆರಿಗೆ ಹಣದಿಂದ ವಿದ್ಯುತ್ ಸಂಸ್ಥೆಗಳನ್ನು ಕಟ್ಟಿ ಈ ಪ್ರಮಾಣದಲ್ಲಿ ಬೆಳೆಸಲಾಗಿದೆ. ಈಗ ಇವೆಲ್ಲವನ್ನೂ ಖಾಸಗಿ ಬಂಡವಾಳಗಾರರಿಗೆ ಒಪ್ಪಿಸುವ ಕೆಲಸ ನಡೆಯುತ್ತಿದೆ' ಎಂದು ಆರೋಪಿಸಿದರು.

ಕೇಂದ್ರ ಸರ್ಕಾರ ವಿದ್ಯುತ್ ಕ್ಷೇತ್ರವನ್ನು ಸಂಪೂರ್ಣವಾಗಿ ತನ್ನ ಹಿಡಿತಕ್ಕೆ ತೆಗೆದುಕೊಳ್ಳಲು ಮುಂದಾಗಿದೆ. ನಂತರ ಕ್ರಮೇಣ ಖಾಸಗೀಕರಣ ಮಾಡುತ್ತದೆ. ಇದಕ್ಕೆ ಪೂರ್ವ ಸಿದ್ಧತೆಯಾಗಿ ಖಾಸಗಿಯವರಿಗೆ ಸುಲಭ ಮಾಡಿಕೊಡುವ ಎಲ್ಲಾ ವ್ಯವಸ್ಥೆಗಳನ್ನು ಜನರ ತೆರಿಗೆ ಹಣದಿಂದ ಮಾಡಿಕೊಡಲಾಗುತ್ತಿದೆ. ಜೊತೆಗೆ ಪ್ರಿಫೇಯ್ಡ್ ಮೀಟರ್ ಅಳವಡಿಸುವ ಕೆಲಸ ನಡೆಯುತ್ತಿದೆ. ಹೀಗಾದಾಗ ಮೊದಲೇ ಹಣ ಪಾವತಿಸಿ ವಿದ್ಯುತ್ ಪಡೆಯಬೇಕಾಗುತ್ತದೆ. ಹಣ ತುಂಬದಿದ್ದರೆ ವಿದ್ಯುತ್ ಯಾಂತ್ರಿಕವಾಗಿ ಕಡಿತವಾಗುತ್ತದೆ. ಸರ್ಕಾರ ರೈತರಿಗೆ ಡಿಬಿಟಿ ಮೂಲಕ ಹಣ ಪಾವತಿ ಮಾಡುತ್ತೇವೆ ಎಂದು ಹೇಳುತ್ತಿದೆ. ಪಂಪ್ ಸೆಟ್ ಬಳಕೆದಾರ ರೈತರು ಮೊದಲೇ ಹಣ ತುಂಬಬೇಕು. ತುಂಬದಿದ್ದರೆ ವಿದ್ಯುತ್ ಕಡಿತವಾಗುತ್ತದೆ. ಅವರು ಸಾಲ ಮಾಡಿ ಹಣ ಹೊಂದಿಸಿ ಮೀಟರ್ ರೀಚಾರ್ಜ್ ಮಾಡಿಸುವ ವೇಳೆಗೆ ಬೆಳೆ ಒಣಗುತ್ತದೆ. ಒಂದು ವೇಳೆ ವಿದ್ಯುತ್ ವಲಯ ಖಾಸಗಿಯವರ ತೆಕ್ಕೆಗೆ ಹೋದರೆ, ಕೃಷಿ ಪಂಪ್ ಸೆಟ್ ಗೆ ಉಚಿತ ವಿದ್ಯುತ್ ಸಿಗುತ್ತದೆ ಎಂಬ ಭರವಸೆ ಇಡಲಾಗದು. ಆ ರೀತಿ ಆದಾಗ ರೈತರು ದುಬಾರಿ ವೆಚ್ಚದ ವಿದ್ಯುತ್ ಖರೀದಿಸಿ ಕೃಷಿ ಮಾಡಲು ಸಾಧ್ಯಾವಾಗುವುದಿಲ್ಲ. ರೈತರು ಕೃಷಿಯಿಂದ ದೂರ ಸರಿಯಬೇಕಾದ ಅನಿವಾರ್ಯತೆ ಸೃಷ್ಟಿಯಾಗುತ್ತದೆ. ಜನರು ಎಚ್ಚೆತ್ತುಕೊಂಡು ಸರ್ಕಾರದ ಖಾಸಗೀಕರಣ ನೀತಿಗಳ ವಿರುದ್ಧ ಹೋರಾಡಬೇಕಿದೆ ಎಂದು ಹೇಳಿದರು.

ಉಚಿತ ವಿದ್ಯುತ್ ವ್ಯವಸ್ಥೆ ಹೆಚ್ಚು ಕಾಲ ಉಳಿಯಬೇಕಾದರೆ, ಖಾಸಗೀಕರಣ ಕೈಬಿಡಬೇಕು

ಗೃಹಬಳಕೆಗೆ 200 ಯೂನಿಟ್ ವರೆಗಿನ ಉಚಿತ ವಿದ್ಯುತ್ ನೀಡುವ ರಾಜ್ಯ ಸರ್ಕಾರದ ನಿರ್ಧಾರವನ್ನು ಸಿಪಿಐ(ಎಂ) ಸ್ವಾಗತಿಸುತ್ತದೆ. ಇದರಿಂದ ಜನ ಸಾಮಾನ್ಯರಿಗೆ, ಬಡವರಿಗೆ ಹಾಗೂ ಮಧ್ಯಮ ವರ್ಗಗಳಿಗೆ ಅನುಕೂಲವಾಗುತ್ತದೆ. ಆದರೆ ಅದನ್ನು ಜಾರಿ ಮಾಡುವ ಪ್ರಕ್ರಿಯೆಯಲ್ಲಿ ಹಲವಾರು ಸಮಸ್ಯೆಗಳಿವೆ. ಅದನ್ನು ಸರಿಪಡಿಸಿ, ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡಬೇಕಿದೆ. ಯೋಜನೆಯಿಂದಾಗಿ ಸರ್ಕಾರದ ಮೇಲೆ ಹೆಚ್ಚುವರಿ ಹಣಕಾಸಿನ ಹೊರೆ ಬೀಳುತ್ತದೆ. ಇದನ್ನು ನಿಭಾಯಿಸಲು ಸರ್ಕಾರ ವಿದ್ಯುತ್



ಖಾಸಗೀಕರಣ ಮಾಡುವ ಅಪಾಯವಿದೆ. ಹೀಗಾಗಿ ಖಾಸಗಿ ವಿದ್ಯುತ್ ಕಂಪೆನಿಗಳ ಜೊತೆಗೆ ಮಾಡಿಕೊಂಡಿರುವ ದುಬಾರಿ ಒಪ್ಪಂದಗಳನ್ನು ಕೈಬಿಟ್ಟು ಸರ್ಕಾರವೇ ಕಡಿಮೆ ವೆಚ್ಚದ ಜಲವಿದ್ಯುತ್, ಉಷ್ಣವಿದ್ಯುತ್ ಉತ್ಪಾದಿಸಬೇಕು ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಕೆ.ಪ್ರಕಾಶ್ ಹೇಳಿದ್ದಾರೆ.



ಬೆಂಗಳೂರಿನ ಗಾಂಧಿ ಭವನದಲ್ಲಿ ಸಿಪಿಐ(ಎಂ) ಅಮ್ಮಿಕೊಂಡಿದ್ದ 'ವಿದ್ಯುತ್ ಸುಧಾರಣೆಗಳ ಕುರಿತು ರಾಜ್ಯ ಸಮಾವೇಶ'ದಲ್ಲಿ ನಿರ್ಣಯವೊಂದನ್ನು ಮಂಡಿಸುತ್ತಾ, "ವಿದ್ಯುತ್ ತಿದ್ದುಪಡಿ ಮಸೂದೆ-2022ರಲ್ಲಿ, ವಿದ್ಯುತ್ ಉತ್ಪಾದನೆಯಲ್ಲಿ ನವೀಕರಿಸಬಹುದಾದಂತಹ ಇಂಧನದ ಉತ್ಪನ್ನದ ಕುರಿತು ಹೇಳಲಾಗಿದೆ. ಇಂತಹ ಉತ್ಪಾದನೆಯಲ್ಲಿ ಶೇ. 95 ರಷ್ಟು ಖಾಸಗಿಯವರದೇ ಪಾಲಿದೆ. ಈ ಮಸೂದೆಯಲ್ಲಿ ಖಾಸಗಿಯವರು ಉತ್ಪಾಧಿಸಿದ ವಿದ್ಯುತ್ ಅನ್ನು ಸರ್ಕಾರ ಕೊಂಡುಕೊಳ್ಳಲೇ ಬೇಕು ಎಂಬ ಷರತ್ತು ವಿಧಿಸಲಾಗಿದೆ. ಜೊತೆಗೆ ಅವರಿಂದ ಕೊಂಡುಕೊಳ್ಳದಿದ್ದಲ್ಲಿ ಖಾಸಗಿ ಕಂಪನಿಗಳಿಗೆ ಸರ್ಕಾರವೇ ದಂಡ ಕೊಡಬೇಕು ಎಂಬ ಪ್ರಸ್ತಾಪವನ್ನು ಕೂಡ ಮಾಡಲಾಗಿದೆ. ಸರ್ಕಾರ ಉತ್ಪಾದಿಸುವ ಕಡಿಮೆ ಬೆಲೆಯ ವಿದ್ಯುತ್ ಅನ್ನು ಬಿಟ್ಟು ಖಾಸಗಿಯವರಿಂದ ದುಬಾರಿ ಬೆಲೆಯ ವಿದ್ಯುತ್ ಖರೀದಿಸಲೇಬೇಕು ಎಂಬ ಈ ಷರತ್ತುಗಳಿಂದಾಗಿ ವಿದ್ಯುತ್ ಬಳಸುವ ರೈತರು ಮತ್ತು ಇತರ ಗ್ರಾಹಕರ ಮೇಲೆ ಹೆಚ್ಚಿನ ಹೊರೆ ಬೀಳುತ್ತದೆ" ಎಂದು ಅವರು ಎಚ್ಚರಿಸಿದರು.

ವಿದ್ಯುತ್ ದರ ಹೆಚ್ಚಳ ಮಾಡಿರುವುದನ್ನು ಹಾಗೂ ರೈತರ ಪಂಪ್ ಸೆಟ್‌ಗಳಿಗೆ ಮುಂದಿನ ಆರು ತಿಂಗಳ ಒಳಗೆ ಆಧಾರ್ ಲಿಂಕ್ ಮಾಡಬೇಕು ಎಂಬ ಕೆಇಆರ್‌ಸಿ ಆದೇಶವನ್ನು ನಾವು ವಿರೋಧಿಸುತ್ತೇವೆ. ಇಷ್ಟೆ ಅಲ್ಲದೆ, ಕೇಂದ್ರ ಸರ್ಕಾರ ಕಳೆದ ವರ್ಷ ಮಂಡಿಸಿದ 'ವಿದ್ಯುತ್ ತಿದ್ದೊಪಡಿ ಮಸೂದೆ-2022' ಮೂಲಕ ಇಡೀ ದೇಶದಲ್ಲಿ ವಿದ್ಯುತ್ ಕ್ಷೇತ್ರವನ್ನು ಸಂಪೂರ್ಣವಾಗಿ ಖಾಸಗೀಕರಣ ಮಾಡುವ ಪ್ರಯತ್ನ ಮಾಡುತ್ತಿದೆ. ರಾಜ್ಯದ ಉಚಿತ ವಿದ್ಯುತ್ ಘೋಷಣೆ, ಕೆಇಆರ್‌ಸಿ ಆದೇಶ ಹಾಗೂ ಕೇಂದ್ರದ ವಿದ್ಯುತ್ ತಿದ್ದುಪಡಿ ಮಸೂದೆ-2022 ಒಂದಕ್ಕೊಂದು ಸಂಬಂಧವೊಂದಿವೆ. ಹೀಗಾಗಿಯೆ ವಿದ್ಯುತ್ ವಿತರಣೆಯನ್ನೂ ಪೂರ್ಣವಾಗಿ ಖಾಸಗೀಕರಣ ಮಾಡಬೇಕು ಎಂಬ ಪ್ರಸ್ತಾಪವಾಗುತ್ತಿದೆ.



ವಿದ್ಯುತ್ ವಿತರಣೆ ಪೂರ್ಣವಾಗಿ ಖಾಸಗೀಕರಣಗೊಂಡರೆ ಬೆಸ್ಕಾಂ, ಮೆಸ್ಕಾಂ, ಸೇರಿದಂತೆ ವಿದ್ಯುತ್ ವಿತರಣೆ ಮಾಡುವ ಸರ್ಕಾರಿ ಒಡೆತನದ ಕಂಪೆನಿಗಳು ಇಲ್ಲದಂತಾಗುತ್ತದೆ. ಇದರಿಂದಾಗಿ ವಿತರಣೆ, ಉತ್ಪಾದನೆ ಸೇರಿದಂತೆ ಎಲ್ಲವೂ ಖಾಸಗೀಕರಣಗೊಳ್ಳುವ ಅಪಾಯ ಬಂದೊದಗುತ್ತದೆ ಎಂದು ಕೆ. ಪ್ರಕಾಶ್ ಎಚ್ಚರಿಸಿದರು.

ಕಾರ್ಪೊರೇಟ್ ಕಂಪನಿಗಳ ಹಿತಕ್ಕಾಗಿ ನೀತಿಗಳನ್ನು ರೂಪಿಸಲಾಗುತ್ತಿದೆ

ಪ್ರಾಸ್ತಾವಿಕ ಭಾಷಣ ಮಾಡಿದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಮೀನಾಕ್ಷಿ ಸುಂದರಂ ಅವರು, 'ಸರ್ಕಾರಗಳ ನೀತಿಗಳು ಬದಲಾಗುತ್ತಿವೆ. ಜನರ ಅನುಕೂಲಕ್ಕೆ ತಕ್ಕಂತೆ ನೀತಿಗಳನ್ನು ರೂಪಿಸುವ ಬದಲಾಗಿ ಕಾರ್ಪೊರೇಟ್ ಕಂಪನಿಗಳ ಹಿತಕ್ಕಾಗಿ ನೀತಿಗಳನ್ನು ರೂಪಿಸಲಾಗುತ್ತಿದೆ. ಪ್ರಕೃತಿ ಸಂಪತ್ತು ಸಾರ್ವಜನಿಕ ಕ್ಷೇತ್ರದಿಂದ ಖಾಸಗಿ ಕ್ಷೇತ್ರಕ್ಕೆ ವರ್ಗಾವಣೆಯಾಗುತ್ತಿದೆ. ಲಾಭದಾಯಕವಾಗಿ ನಡೆಯುತ್ತಿರುವ ಎಲ್ಲಾ ಕ್ಷೇತ್ರಗಳೂ ಖಾಸಗಿಯವರ ಪಾಲಾಗುತ್ತಿವೆ. ಸೇವೆಗಳನ್ನೂ ಒಂದು ವ್ಯಾಪಾರವನ್ನಾಗಿ ಮಾಡಲಾಗಿದೆ. ಇಂತಹ ವ್ಯಾಪಾರ ಮಾಡುವುದು ಸರ್ಕಾರದ ಕೆಲಸವಲ್ಲ, ಇವೆಲ್ಲವುಗಳನ್ನೂ ಖಾಸಗಿಯವರಿಗೆ ಬಿಟ್ಟುಬಿಡಿ ಎಂದು ಹೇಳುತ್ತಾರೆ. ವಿದ್ಯುತ್ ಕ್ಷೇತ್ರವನ್ನೂ ಉತ್ಪಾಧನೆ, ಸಾಗಣೆ ಮತ್ತು ವಿತರಣೆಯನ್ನು ಸಂಪೂರ್ಣವಾಗಿ ಖಾಸಗಿಯವರಿಗೆ ಒಪ್ಪಿಸಲಾಗುತ್ತಿದೆ ಎಂದು ಹೇಳಿದರು.

ವಿಂಡ್ ಮಿಲ್ ಮೂಲಕ ಮತ್ತು ಸೋಲಾರ್ ಮೂಲಕ ವಿದ್ಯುತ್ ಉತ್ಪಾದನೆ ಮಾಡುವ ಖಾಸಗಿಯವರು ತಾವು ಉತ್ಪಾಧಿಸಿದ ವಿದ್ಯುತ್ ಅನ್ನು ಹೆಚ್ಚಿನ ಬೆಲೆಗೆ ಸರ್ಕಾರಿ ವಿದ್ಯುತ್ ಸಂಸ್ಥೆಗೆ ಮಾರಿ, ಅದೇ ವಿದ್ಯುತ್ ಅನ್ನು ತಮ್ಮ ಕೈಗಾರಿಕೆಗಳಿಗೆ ಮರು ಖರೀದಿ ಮಾಡುವ ವಿಚಿತ್ರ ವ್ಯವಹಾರ ನಡೆಯುತ್ತಿದೆ. ಹೆಚ್ಚು ಬಂಡವಾಳ ಬೇಡುವ ಯೋಜನೆಗಳಿಗೆ ಸರ್ಕಾರವೇ ಬಂಡವಾಳ ತೊಡಗಿಸುವ ಮೂಲಕ ಮೂಲಭೂತ ಸಂರಚನೆ ನಿರ್ಮಿಸಿ, ನಂತರ ಖಾಸಗಿಯವರಿಗೆ ವಹಿಸಿಕೊಡಲಾಗುತ್ತಿದೆ. ಗೃಹ ಬಳಕೆಗೆ, ರೈತರ ಕೃಷಿ ಪಂಪ್ ಸೆಟ್ ಗಳಿಗೆ ವಿದ್ಯುತ್ ಮೀಟರೀಕರಣ, ಡಿಜಿಟಲೀಕರಣ, ಪ್ರಿಫೇಯ್ಡ್ ಮೀಟರ್ ಅಳವಡಿಕೆ ಪ್ರಕ್ರಿಯೆ ವೇಗವಾಗಿ ನಡೆಯುತ್ತಿದೆ. ವಿದ್ಯುತ್ ಬಳಸುವ ರೈತರಿಗೆ ಡಿಬಿಟಿ (ನೇರ ನಗದು ಯೋಜನೆ) ಜಾರಿಗೆ ತರುವ ಯೋಜನೆ ಪ್ರಸ್ತಾವನೆಯಲ್ಲಿದೆ. ಇದೆಲ್ಲದರ ನಡುವೆ ರಾಜ್ಯ ಸರ್ಕಾರದ ಉಚಿತ ವಿದ್ಯುತ್ ಯೋಜನೆ ಮುಂದುವರಿಯ ಬೇಕಾದರೆ, ಕಾಂಗ್ರೆಸ್ ತನ್ನ ಖಾಸಗೀಕರಣ ನೀತಿಗಳನ್ನು ಕೈಬಿಡಬೇಕು ಎಂದು ಮೀನಾಕ್ಷಿ ಸುಂದರಂ ಸರ್ಕಾರವನ್ನು ಒತ್ತಾಯಿಸಿದರು.

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**